ಬೀದರ | ಕಲಬುರಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಸಾರ Postal Reg. No. BDR/054/2026-2027 Email: mallammanudi@gmail.com E-paper: www.mallammanudi.in

# ಮಲ್ಲಮ್ಮ ನುಡಿ

ಸತ್ಯಮೇವ ಜಯತೆ

ಪ್ರಾದೇಶಿಕ ಕನ್ನಡ ದಿನಪತ್ರಿಕೆ

ಸಂಪಾದಕರು: ರಮೇಶರೆಡ್ಡಿ | 9448 604450

Mallammanudi Regional News Paper | Editor: Ramesh Reddy | RNI NO:KARKAN/2011/48371

VOLUME - 13 ಸಂಪುಟ-13 | ISSUE - 129 ಸಂಚಿಕೆ- 129 | PAGE- 8 ಪುಟ-8 | ಭಾನುವಾರ 29.06.2025 | RS.2/- ಬೆಲೆ 2/-

# ಸೆ.22ರಿಂದ 11 ದಿನಗಳ ಕಾಲ ವಿಜೃಂಭಣೆಯ ದಸರಾ



ಮಲ್ಲಮ್ಮನುಡಿವಾರ್ತೆ ಬೆಂಗಳೂರು/ ಮೈಸೂರು: ಈ ಬಾರಿ ಸೆಪ್ಟೆಂಬರ್ 22 ರಿಂದ ಅಕ್ಟೋಬರ್ 2ರ ವರೆಗೆ ಒಟ್ಟು 11 ದಿನಗಳ ಕಾಲ ದಸರಾ ಆಚರಣೆ ನಡೆಯಲಿದೆ. ನಾಡಹಬ್ಬ ದಸರಾವನ್ನು ವಿಜೃಂಭಣೆಯಿಂದ ಆಚರಿಸಲು ನಿರ್ಧರಿಸಲಾಗಿದೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದ್ದಾರೆ.

ದಸರಾ ಆಚರಣೆ ಕುರಿತ ಪೂರ್ವಭಾವಿ ಸಭೆ ಬಳಿಕ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ವಿಜೃಂಭಣೆ ರಭಸದಲ್ಲಿ ದಸರಾದ ಚಾರಿತ್ರಿಕ ಮಹತ್ವ ಮರೆಯಾಗಬಾರದು. ಅನಗತ್ಯವಾಗಿ ಹಣ ಖರ್ಚು ಮಾಡುವುದು ವೈಭವ ಅಲ್ಲ. ಜನರ ಸುರಕ್ಷತೆ ಮತ್ತು ಅನುಕೂಲಕ್ಕೆ ಪ್ರಥಮ ಆದ್ಯತೆ ಇರಲಿ ಎಂದು ಅಧಿಕಾರಿಗಳಿಗೆ ಸಿದ್ದರಾಮಯ್ಯ ಸೂಚನೆ ನೀಡಿದ್ದಾರೆ.

ಸೆಪ್ಟೆಂಬರ್ 22 ರಿಂದ ಅಕ್ಟೋಬರ್ 2 ರ ವರೆಗೆ ಒಟ್ಟು 11 ದಿನಗಳ ಕಾಲ ದಸರಾ ಆಚರಣೆ ನಡೆಯಲಿದೆ. ಕಳೆದ 100 ವರ್ಷದಲ್ಲಿ 8 ನೇ ಬಾರಿ 11 ದಿನದ ದಸರಾ ಆಚರಣೆ ಮಾಡಲಾಗುತ್ತಿದೆ. ಈ ಬಾರಿಯೂ 21 ದಿನಗಳ ಕಾಲ ದೀಪ ಅಲಂಕಾರ ಇರಲಿದೆ. ಈ ಬಾರಿ ಅಂದಾಜು 10 ಲಕ್ಷ ಜನ ದಸರಾದಲ್ಲಿ ಭಾಗವಹಿಸಬಹುದು ಎಂದು ನಿರೀಕ್ಷಿಸಲಾಗಿದೆ ಎಂದು ಹೇಳಿದ್ದಾರೆ. ಪೊಲೀಸರು ಜನಸ್ನೇಹಿ ಆಗಿರಬೇಕು. ಪ್ರವಾಸಿಗರೊಂದಿಗೆ ಪ್ರೀತಿಯಿಂದ ವರ್ತಿಸಬೇಕು. ದಸರಾ ಕೊನೆಯ ದಿನ ಅಕ್ಟೋಬರ್ 2 ಗಾಂಧಿ ಜಯಂತಿ, ಹೀಗಾಗಿ ಟ್ಯಾಬ್ಲೋದಲ್ಲಿ ಗಾಂಧಿ ಜಯಂತಿಗೆ ಆದ್ಯತೆ ನೀಡಲು ನಿರ್ಧರಿಸಲಾಗಿದೆ ಎಂದಿದ್ದಾರೆ. ಕಳೆದ ವರ್ಷ ದಸರಾ ಆಚರಣೆಗೆ ರೂ. 40 ಕೋಟಿ ಅನುದಾನ ಒದಗಿಸಲಾಗಿತ್ತು. ಈ ಬಾರಿ ಅದ್ದೂರಿಯಾಗಿ ದಸರಾ ಆಚರಣೆಗೆ ಅಗತ್ಯವಾದಷ್ಟು ಅನುದಾನ ಒದಗಿಸಲಾಗುವುದು ಎಂದು ಮುಖ್ಯಮಂತ್ರಿ ತಿಳಿಸಿದರು.

ಸಚಿವರಾದ ಡಾ.ಎಚ್.ಸಿ.ಮಹದೇವಪ್ಪ, ಕೆ.ಜೆ.ಜಾರ್ಜ್, ಶಿವರಾಜ ತಂಗಡಗಿ, ಕೆ.ವೆಂಕಟೇಶ್, ಶಾಸಕರಾದ ಜಿ.ಟಿ.ದೇವೇಗೌಡ, ರಮೇಶ್ ಬಂಡಿಸಿದ್ದೇಗೌಡ, ಪುಟ್ಟರಂಗಶೆಟ್ಟಿ, ತನ್ವೀರ್ ಸೇಠ್, ಡಾ.ಯತೀಂದ್ರ ಎಸ್, ಡಾ.ಡಿ.ತಿಮ್ಮಯ್ಯ,

ಅನಿಲ್ ಕುಮಾರ್, ಎ.ಆರ್. ಕೃಷ್ಣಮೂರ್ತಿ, ಮಧು ಜಿ ಮಾದೇಗೌಡ, ಕೆ.ಹರೀಶ್ ಗೌಡ, ದರ್ಶನ್ ಧ್ರುವನಾರಾಯಣ ಮತ್ತಿತರರು ಸಭೆಯಲ್ಲಿ ಪಾಲ್ಗೊಂಡರು.

## ವಿಷ ಉಗುಳುತ್ತಿರುವ ಕೆಮಿಕಲ್ ಕಾರ್ಖಾನೆಗಳು ಸ್ಥಳಾಂತರಕ್ಕೆ ಒತ್ತಾಯ

ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ್. ಇಲ್ಲಿನ ಕೈಗಾರಿಕಾ ಪ್ರದೇಶದಲ್ಲಿರುವ ಕೆಮಿಕಲ್‌ಕಾರ್ಖಾಗಳು ವಿಷ ಉಗುಳುತ್ತಿವೆ ಇದರಿಂದ ಸುತ್ತಮುತ್ತಲಿನ ಗ್ರಾಮಸ್ಥರು ಪರದಾಡುವಂತಾಗಿದೆ, ತಕ್ಷಣ ಕಾರ್ಖಾನೆಗಳನ್ನು ಸ್ಥಳಾಂತರಿಸಬೇಕೆಂದು ವಿವಿಧ ಗ್ರಾಮಸ್ಥರು ಒತ್ತಾಯಿಸಿದ್ದಾರೆ. ಕೆಲ ರೈತರ ಮಾವಿನ ತೋಟದಲ್ಲಿ ಕೆಮಿಕಲ್ ವಾಸನೆಯಿಂದ ಮಾವು ಆಗದೆ ರೈತ ಕಂಗಾಲಾಗಿದ್ದಾನೆ. ಈ ಬಗ್ಗೆ ಚುನಾಯಿತ ಪ್ರತಿನಿಧಿಗಳು ಮೌನಕ್ಕೆ ಜಾರಿದ್ದಾರೆ. ಕಾರ್ಖಾನೆಯ ಮಾಲಿಕರ ಜೊತೆ ಒಳ ಒಪ್ಪಂದಗಳು ಆಗಿವೆ ಎಂಬ ಆರೋಪವು ಕೇಳಿಬರುತ್ತಿದೆ ಹಾಗಾಗಿ ಅರಣ್ಯ ಸಚಿವರು ಜಿಲ್ಲೆಯವರೇ ಆಗಿರುವುದರಿಂದ ಈ ಬಗ್ಗೆ ಯಾವ ಕ್ರಮ ಕೈಗೊಳ್ಳುತ್ತಾರೆಯೊ ಕಾದು ನೋಡಬೇಕು

## ಬೀದರ ಕಾಂಗ್ರೆಸ್‌ನಲ್ಲಿ ಅಡ್ಜಸ್ಟ್‌ಮೆಂಟ್ ರಾಜಕಾರಣ



ಮಲ್ಲಮ್ಮ ನುಡಿ ವಾರ್ತೆ ಬೀದರ. ಜೂ. 28 : 'ಬೀದರ್ ಜಿಲ್ಲಾ ಕಾಂಗ್ರೆಸ್‌ನಲ್ಲಿ ಅಡ್ಜಸ್ಟ್‌ಮೆಂಟ್ ರಾಜಕಾರಣ ನಡೆಯುತ್ತಿದ್ದು, ಇದರ ಬಗ್ಗೆ ಕೆಪಿಸಿಸಿ ಅಧ್ಯಕ್ಷರೂ ಆದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ಗಮನಕ್ಕೆ ತರಲಾಗಿದೆ' ಎಂದು ಮಾಜಿ ಸಚಿವರೂ ಆದ ಕಾಂಗ್ರೆಸ್ ಮುಖಂಡ ರಾಜಶೇಖರ ಪಾಟೀಲ ಹುಮನಾಬಾದ್ ತಿಳಿಸಿದರು.

ನಗರದ ವಿಮಾನ ನಿಲ್ದಾಣದಲ್ಲಿ ಪತ್ರಕರ್ತರೊಂದಿಗೆ ಶುಕ್ರವಾರ ಮಾತನಾಡಿದ ಅವರು, 'ಕಾಂಗ್ರೆಸ್‌ನ ನಿಷ್ಠಾವಂತ ಕಾರ್ಯಕರ್ತರಿಗೆ ಅನ್ಯಾಯ ಆಗುತ್ತಿದೆ. ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿದ್ದರೂ ನಮ್ಮ ಪಕ್ಷದ ಕಾರ್ಯಕರ್ತರ ಕೆಲಸಗಳು ಆಗುತ್ತಿಲ್ಲ. ಬಿಜೆಪಿಯವರು ಹೇಳಿದ ಕೆಲಸಗಳು ಆಗುತ್ತಿವೆ. ನಾವೆಲ್ಲ ಇದರ ವಿರುದ್ಧ ಹೋರಾಡುತ್ತಿದ್ದೇವೆ' ಎಂದು ಹೇಳಿದರು.

ಈಗಾಗಲೇ ಬೆಂಗಳೂರಿನಲ್ಲಿ ಎರಡು ಸಭೆಗಳನ್ನು ನಡೆಸಲಾಗಿದೆ. ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡಿ ಅರ್ಧಗಂಟೆಗೂ ಹೆಚ್ಚು ಕಾಲ ಚರ್ಚೆ ನಡೆಸಲಾಗಿದೆ. ಜಿಲ್ಲೆಯಲ್ಲಿನ ಎಲ್ಲ ಸಮಸ್ಯೆಗಳ ಕುರಿತು ವಿವರಿಸಲಾಗಿದೆ. ಜಿಲ್ಲೆಗೆ ಒಂದು ಸಮಿತಿ ಕಳಿಸಿ, ವರದಿ ತರಿಸಿಕೊಳ್ಳಲಾಗುವುದು ಎಂದು ತಿಳಿಸಿರುವುದಾಗಿ ಹೇಳಿದರು.

ಜೂ. 29ರಂದು ಮತ್ತೊಂದು ಸಭೆ ನಡೆಸಲು ನಿರ್ಧರಿಸಲಾಗಿದೆ. ಅಂದು ಎಲ್ಲರೂ ಸಭೆ ಸೇರಿ ಚರ್ಚಿಸಿ, ಮತ್ತೊಮ್ಮೆ ಶಿವಕುಮಾರ್ ಅವರನ್ನು ಭೇಟಿ ಮಾಡುತ್ತೇವೆ. ಜಿಲ್ಲೆಯಲ್ಲಿ ಸಚಿವರು ಹಾಗೂ ಶಾಸಕರ ನಡುವೆ ಒಳ ಒಪ್ಪಂದ ಆಗಿದೆ ಎಂದು ಆರೋಪಿಸಿದರು.

ಸಚಿವರಾದ ಈಶ್ವರ ಬಿ. ಖಂಡ್ರೆ ಹಾಗೂ ರಹೀಂ ಖಾನ್ ಜೊತೆ ವೈಯಕ್ತಿಕವಾಗಿ ಯಾವುದೇ ತೊಂದರೆಗಳಿಲ್ಲ. ಆದರೆ ಬೀದರ್ ಜಿಲ್ಲೆಯಲ್ಲಿ ನಿಷ್ಠಾವಂತ ಕಾಂಗ್ರೆಸ್ಸಿಗರನ್ನು ಕಡೆಗಣಿಸಲಾಗುತ್ತಿದೆ. ಅದರ ಬಗ್ಗೆ ಕೆಪಿಸಿಸಿ ಅಧ್ಯಕ್ಷರಿಗೆ ತಿಳಿಸಿದ್ದು ಸ್ವಲ್ಪ ದಿನ ಕಾಯಿರಿ ಅಂತ ಅಧ್ಯಕ್ಷರು ಹೇಳಿದ್ದಾರೆ ಎಂದು ಮಾಜಿ ಸಚಿವ ರಾಜಶೇಖರ ಪಾಟೀಲ ತಿಳಿಸಿದರು.

## ಗಗನಯಾತ್ರಿ ಶುಭಾಂಶು ಜೊತೆಗೆ ಮೋದಿ ಸಂವಾದ



ಮಲ್ಲಮ್ಮ ನುಡಿ ವಾರ್ತೆ ನವದೆಹಲಿ:ಜೂ.28: ಆಕ್ಸಿಯಂ-4 ಮಿಷನ್ ಕಾರ್ಯಾಚರಣೆಯ ಭಾಗವಾಗಿ ಬಾಹ್ಯಾಕಾಶ ನಿಲ್ದಾಣಕ್ಕೆ ತೆರಳಿರುವ ಭಾರತೀಯ ವಾಯುಪಡೆಯ ಗ್ರೂಪ್ ಕ್ಯಾಪ್ಟನ್ ಶುಭಾಂಶು ಶುಕ್ಲಾ ಅವರೊಂದಿಗೆ ಪ್ರಧಾನಿ ನರೇಂದ್ರ ಮೋದಿ ಅವರಿಂದು ವಿಡಿಯೋ ಕಾನ್ಫರೆನ್ಸ್ ಮೂಲಕ ಸಂವಾದ ನಡೆಸಿದ್ದಾರೆ.

ಸುಮಾರು 18 ನಿಮಿಷಗಳ ಕಾಲ ಮಾತುಕತೆ ನಡೆಸಿದ ಪ್ರಧಾನಿ ಮೋದಿ-ಶುಕ್ಲಾ , ಹಲವು ವಿಷಯಗಳನ್ನು ಪ್ರಸ್ತಾಪಿಸಿದ್ದಾರೆ. ಮೊದಲಿಗೆ ಮಾತು ಆರಂಭಿಸಿದ ಪ್ರಧಾನಿ ಮೋದಿ ನನ್ನ ಮಾತಿನ ಜೊತೆಗೆ 140 ಕೋಟಿ ಭಾರತೀಯರ ಭಾವನೆ ಇದೆ. ಅವರ ಉತ್ಸಾಹ ಮತ್ತು ಕುತೂಹಲವೂ ಇದೆ ಎಂದು ಹೇಳಿದರು. ಇದಕ್ಕೆ ಪ್ರತಿಯಾಗಿ ಉತ್ತರಿಸಿದ ಶುಕ್ಲಾ, ದೇಶದ ಜನರು ಪ್ರೀತಿ, ಆರ್ಶಿವಾದದಿಂದ ನಾನು ಚೆನ್ನಾಗಿದ್ದೇನೆ. ಈ ಬಾಹ್ಯಕಾಶ ಯಾತ್ರೆ ನನ್ನದಲ್ಲ, ನನ್ನ ದೇಶದು. ನಿಮ್ಮ ನೇತೃತ್ವದ ಸರ್ಕಾರ ಕನಸುಗಳನ್ನು ಸಹಕಾರ ನೀಡಲು ಅವಕಾಶ ನೀಡುತ್ತದೆ ಎಂದು ಉತ್ತರಿಸಿದರು.

ಕ್ಯಾರೆಟ್ ಹಲ್ವಾ ನಿಮ್ಮ ಸ್ನೇಹಿತರಿಗೆ ನೀಡಿದ್ರಾ?

ಸದ್ಯ ಶುಕ್ಲಾ ಐಎಸ್‌ಎಸ್‌ಗೆ ಮೂರು ರೀತಿ ಭಾರತೀಯ ಭಕ್ಷ್ಯಗಳನ್ನು ಕೊಂಡೊಯ್ದಿದ್ದಾರೆ. ಮ್ಯಾಂಗೋ ಜ್ಯೂಸ್, ಹೆಸರು ಬೇಳೆ ಹಲ್ವಾ ಹಾಗೂ ಕ್ಯಾರೆಟ್ ಹಲ್ವಾ ಕೊಂಡೊಯ್ದಿದ್ದಾರೆ. ಇದನ್ನು ನೆನಪಿಸಿದ ಪ್ರಧಾನಿ ಮೋದಿ ಹಲ್ವಾ ತೆಗೆದುಕೊಂಡು ಹೊಗಿದ್ದೀರಿ, ನಿಮ್ಮ ಸ್ನೇಹಿತರಿಗೆ ನೀಡಿದ್ರಾ? ಅಂತ ಕೇಳಿದ್ರು, ಇದಕ್ಕೆ ವಿನಯದಿಂದಲೇ ಉತ್ತರಿಸಿದ ಶುಕ್ಲಾ, ಹೌದು ನಾನು ಹಲ್ವಾ, ಮಾವಿನ ರಸ (ಮ್ಯಾಂಗೋ ಜ್ಯೂಸ್), ಹೆಸರು ಬೇಳೆ ಹಲ್ವಾ ತಂದಿದ್ದೇನೆ. ಇಲ್ಲಿ ಎಲ್ರೂ ಒಟ್ಟಾಗಿ ಅದನ್ನ ತಿಂದ್ವಿ, ಎಲ್ಲರೂ ತುಂಬಾ ಖುಷಿ ಪಟ್ಟರು.

ಭಾರತ ಬಹಳ ಅದ್ಭುತವಾಗಿ ಕಾಣುತ್ತೆ

ಭೂಮಿಯ ಯಾವ ಭಾಗದ ಮೇಲೆ ಪ್ರಯಾಣ ಮಾಡ್ತಿದ್ದೀರಿ? ಅಂತ ಮೋದಿ ಕೇಳಿದ್ದಕ್ಕೆ ಈ ಕ್ಷಣದಲ್ಲಿ ನಿರ್ದಿಷ್ಟವಾಗಿ ಹೇಳಲು ಸಾಧ್ಯವಾಗ್ತಿಲ್ಲ. ಆದರೆ ಈಗ ಪ್ರತಿ ಗಂಟೆಗೆ 18,000 ವೇಗದಲ್ಲಿ ಪ್ರಯಾಣ ಮಾಡುತ್ತಿದ್ದೇವೆ. 16 ಬಾರಿ

(2ನೇ ಪುಟ ನೋಡಿ)

## ಸಿಎಂ ಆಗ್ಬೇಕೆಂಬ ಆಸೆಯಿದ್ದವರು ಬದಲಾವಣೆಯ ಊಹಾಪೋಹ ಹಬ್ಬಿಸ್ತಿದ್ದಾರೆ: ಯತೀಂದ್ರ



ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು:ಜೂ.28: ಕೆಲವರಿಗೆ ಮುಖ್ಯಮಂತ್ರಿ ಆಗಬೇಕು ಅಂತಿರುತ್ತದೆ, ಅಂಥವರೇ ಸಿಎಂ ಬದಲಾವಣೆಯ ಊಹಾಪೋಹಗಳನ್ನು ಹಬ್ಬಿಸುತ್ತಿದ್ದಾರೆ ಎಂದು ಎಂಎಲ್‌ಸಿ ಯತೀಂದ್ರ ಸಿದ್ದರಾಮಯ್ಯ ಹೇಳಿದರು.

ಕಾಂಗ್ರೆಸ್‌ನಲ್ಲಿ 'ಸೆಪ್ಟೆಂಬರ್ ಕ್ರಾಂತಿ' ಹಾಗೂ ಸಿಎಂ ಬದಲಾವಣೆ ವದಂತಿ ಬಗ್ಗೆ ಬೆಂಗಳೂರಿನಲ್ಲಿ ಮಾತನಾಡಿದ ಅವರು, ಸರ್ಕಾರ ಬಂದಾಗಿನಿಂದಲೂ, ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಆದಾಗಿನಿಂದಲೂ ಇದನ್ನು ಹೇಳುತ್ತಲೇ ಇದ್ದಾರೆ. ಕೆಲವು ಗುಂಪಿನವರಿಗೆ ಮುಖ್ಯಮಂತ್ರಿ ಆಗಬೇಕು ಅಂತಿರುತ್ತದೆ. ಅದಕ್ಕೆ ಈ ರೀತಿ ಊಹಾಪೋಹಗಳನ್ನು ಹರಡುತ್ತಿದ್ದಾರೆ. ಸರ್ಕಾರ ಬಂದಾಗಿನಿಂದಲೂ ಕೂಡ ಸಿದ್ದರಾಮಯ್ಯನವರಿಗೆ ಹೈಕಮಾಂಡ್ ಬೆಂಬಲ ಇದೆ ಎಂದರು.

ಶಾಸಕರು ಕೂಡ ಬೆಂಬಲ ಕೊಟ್ಟಿದ್ದಾರೆ, ಆ ಗುಂಪು ಯಾವುದು ಎಂದು ನನಗೆ ಗೊತ್ತಿಲ್ಲ. ರಾಜಣ್ಣ ಅವರ ಹೇಳಿಕೆ ಬಗ್ಗೆ ಅವರನ್ನೇ ಕೇಳಬೇಕು. ಸರ್ಕಾರ ಸುಸೂತ್ರವಾಗಿ ನಡೆಯುತ್ತಿದೆ. ಹೈಕಮಾಂಡ್ ಕೂಡ ಬದಲಾವಣೆ ಮಾಡುತ್ತೆ ಅಂತ ಹೇಳಿಲ್ಲ. ಆ ರೀತಿಯಾದ ಸೂಚನೆಯನ್ನು ಹೈಕಮಾಂಡ್ ಕೂಡ ಕೊಟ್ಟಿಲ್ಲ. ಹೀಗಾಗಿ ಸಿದ್ದರಾಮಯ್ಯನವರು ಐದು ವರ್ಷ ಸಿಎಂ ಆಗಿ ಮುಂದುವರೆಯುತ್ತಾರೆ. ಕಾಂಗ್ರೆಸ್‌ನಲ್ಲಿ ಮುಖ್ಯಮಂತ್ರಿಗಳ ಹುದ್ದೆಗೆ ಅರ್ಹತೆ ಇರುವವರು ಇದ್ದಾರೆ. ಕೆಲ ಶಾಸಕರು ಹೇಳಿರುವುದು ಸರ್ಕಾರದ ವಿರುದ್ಧವಾಗಿ ಪಕ್ಷದ ವಿರುದ್ಧವಾಗಿ ಅಲ್ಲ. ಯಾವ ಶಾಸಕರು ಸರ್ಕಾರದ ವಿರುದ್ಧ ಇಲ್ಲ, ಸಿಎಂ ಬದಲಾವಣೆ ಬಗ್ಗೆ ಹೈಕಮಾಂಡ್‌ನಿಂದ ಯಾವುದೇ ಸೂಚನೆ ಬಂದಿಲ್ಲ ಎಂದು ತಿಳಿಸಿದರು.

ವಿಪಕ್ಷ ನಾಯಕ ಆರ್.ಅಶೋಕ್ ಕೊಟ್ಟ ಮಾಹಿತಿಗೆ ಮಹತ್ವ ಕೊಡಬೇಕಿಲ್ಲ. ಅವರು ಸರ್ಕಾರ ಬಂದಾಗಿನಿಂದಲೂ, ಮುಡಾ ಕೇಸ್ ವೇಳೆಯೂ ಸಿಎಂ ಬದಲಾಗುತ್ತಾರೆ ಎಂದು ಹೇಳಿದ್ದರು. ವಿಪಕ್ಷಗಳ ಮಾತಿಗೆ ಬೆಲೆ ಕೊಡಬೇಕಾಗಿಲ್ಲ. ಡಿಕೆಶಿ ಮುಖ್ಯಮಂತ್ರಿ ಆಗುತ್ತಾರೆ ಎಂದಿದ್ದರು. ಮೊದಲೇ ಹೇಳಿದಂತೆ ಸಿದ್ದರಾಮಯ್ಯ ಅವರು 5 ವರ್ಷ ಸಿಎಂ ಆಗಿ ಇರುತ್ತಾರೆ ಎಂದು ಹೇಳಿದರು.

## 8 ವರ್ಷಗಳಿಂದ ವಿತರಿಸದೇ ಇದ್ದ 1 ಲಕ್ಷಕ್ಕೂ ಹೆಚ್ಚು ಸ್ಯಾನಿಟರಿ ಪ್ಯಾಡ್‌ಗಳಿಗೆ ಬೆಂಕಿ

ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:ಜೂ.28:8 ವರ್ಷಗಳಿಂದ ವಿತರಿಸದೇ ಇದ್ದ 1 ಲಕ್ಷಕ್ಕೂ ಹೆಚ್ಚು ಸ್ಯಾನಿಟರಿ ಪ್ಯಾಡ್‌ಗಳಿಗೆ ಅಧಿಕಾರಿಗಳು ಬೆಂಕಿ ಹಚ್ಚಿರುವ ಘಟನೆ ಜಿಲ್ಲೆಯ ಫರಹತಾಬಾದ್ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ನಡೆದಿದೆ.

ದೇವರು ವರ ಕೊಟ್ಟರು ಪೂಜಾರಿ ವರ ಕೊಡಲಿಲ್ಲ ಎನ್ನುವಗಾದೆ ಮಾತು ಅಕ್ಷರಶಃ ನಿಜವಾಗ್ತಿದೆ. ಪಿರಿಯಡ್ಸ್ ಸಮಯದಲ್ಲಿ ಮಹಿಳೆಯರಿಗೆ ಸಮಸ್ಯೆ ಆಗಬಾರದು ಎಂದು ಸರ್ಕಾರ ಆರೋಗ್ಯ ಇಲಾಖೆ ಮೂಲಕ ಉಚಿತ ಸ್ಯಾನಿಟರಿ ಪ್ಯಾಡ್ ನೀಡುತ್ತದೆ. ಆದರೆ ಕಲಬುರಗಿಯ ಫರಹತಾಬಾದ್ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ 1 ಲಕ್ಷಕ್ಕೂ ಅಧಿಕ ಶುಚಿ ಪ್ಯಾಡ್‌ಗಳನ್ನು ಸುಟ್ಟು ಹಾಕಲಾಗಿದೆ.

ಫರಹತಾಬಾದ್ ಪ್ರಾಥಮಿಕ ಆರೋಗ್ಯ ಕೇಂದ್ರದ

(2ನೇ ಪುಟ ನೋಡಿ)

## ಸಿಎಂ ಬದಲಾವಣೆ ಹೈಕಮಾಂಡ್ ತೀರ್ಮಾನಿಸಲಿದೆ: ಬೈರತಿ ಸುರೇಶ್

ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು: ಸಿಎಂ ಬದಲಾವಣೆ ವಿಚಾರ ಹೈಕಮಾಂಡ್ ತೀರ್ಮಾನ ಮಾಡಲಿದೆ ಎಂದು ಸಚಿವ ಬೈರತಿ ಸುರೇಶ್ ಹೇಳಿದ್ದಾರೆ. ಬೆಂಗಳೂರಿನಲ್ಲಿ ಸುದ್ದಿಗಾರರೊಂದಿಗೆ ಅವರು ಮಾತನಾಡಿ, ಸೆಪ್ಟೆಂಬರ್ ಕ್ರಾಂತಿ ಬಗ್ಗೆ ರಾಜಣ್ಣ ಅವರನ್ನೇ ಕೇಳಬೇಕು. ಅವರು ಯಾವ ಅರ್ಥದಲ್ಲಿ ಮಾತಾಡಿದ್ದಾರೆ ಎಂದು ಗೊತ್ತಿಲ್ಲ. ಸದ್ಯಕ್ಕೆ ಸಿಎಂ ಸಿದ್ದರಾಮಯ್ಯ ಇದ್ದಾರೆ. ಕೆಪಿಸಿಸಿ ಅಧ್ಯಕ್ಷರಾಗಿ ಡಿಕೆಶಿ ಇದ್ದಾರೆ. ಸದ್ಯಕ್ಕೆ ಅವರ ಸ್ಥಾನ ಅಭಾದಿತ ಎಂದಿದ್ದಾರೆ.

ದಸರಾ ಯಾವ ರೀತಿ ಮಾಡಬೇಕು ಎಂದು ಸಿಎಂ ನೇತೃತ್ವದಲ್ಲಿ ಸಭೆ ಮಾಡಿದ್ದೇವೆ ವಿಜೃಂಭಣೆಯಿಂದ ದಸರಾ ಆಚರಣೆ ಮಾಡಬೇಕು ಎಂದು ತೀರ್ಮಾನ ಮಾಡಲಾಗಿದೆ. ಸುಮಾರು 40 ರಿಂದ 50 ಕೋಟಿ ರೂ. ವೆಚ್ಚದಲ್ಲಿ ಆಚರಣೆ ಆಗಬೇಕು ಎಂಬ ಚರ್ಚೆ ಮಾಡಲಾಗಿದೆ. ಉದ್ಘಾಟಕರು ಯಾರು ಎಂದು ತೀರ್ಮಾನ ಮಾಡುವ ಅಧಿಕಾರ ಸಿಎಂ ಅವರಿಗೆ ಕೊಡಲಾಗಿದೆ. ಒಂದೇ ವಿಚಾರಕ್ಕೆ ಸಂಬಂಧಿಸಿದ ನಾಲ್ಕೈದು ಸ್ಥಬ್ಧಚಿತ್ರಗಳು ಇರಬಾರದು ಎಂದು ತೀರ್ಮಾನ ಆಗಿದೆ.

(2ನೇ ಪುಟ ನೋಡಿ)

## ಪರಾಗ್ ಜೈನ್ ರಾ ನೂತನ ಮುಖ್ಯಸ್ಥ



ಮಲ್ಲಮ್ಮ ನುಡಿ ವಾರ್ತೆ ನವದೆಹಲಿ:ಜೂ.28: ಹಿರಿಯ ಐಪಿಎಸ್ ಅಧಿಕಾರಿ ಪರಾಗ್ ಜೈನ್ ಅವರನ್ನು ಭಾರತದ ಬಾಹ್ಯ ಗುಪ್ತಚರ ಸಂಸ್ಥೆಯಾದ ಸಂಶೋಧನೆ ಮತ್ತು ವಿಶ್ಲೇಷಣಾ ವಿಭಾಗದ ಮುಂದಿನ ಕಾರ್ಯದರ್ಶಿಯಾಗಿ ಪ್ರಧಾನಿ ಮೋದಿ ಸರ್ಕಾರ ನೇಮಿಸಿದೆ.

1989ರ ಬ್ಯಾಚ್‌ನ ಪಂಜಾಬ್ ಕೇಡರ್‌ನ ಐಪಿಎಸ್ ಅಧಿಕಾರಿ ಜೈನ್, ಜುಲೈ 1 ರಂದು 2 ವರ್ಷಗಳ ಸ್ಥಿರ ಅವಧಿಗೆ ಅಧಿಕಾರ ವಹಿಸಿಕೊಳ್ಳಲಿದ್ದಾರೆ. ಹಾಲಿ ಮುಖ್ಯಸ್ಥ ರವಿ ಸಿನ್ಹಾ ಅವರ ಅದಿಕಾರ ಇದೇ ಜೂನ್ 30 ರಂದು ಕೊನೆಗೊಳ್ಳಲಿದೆ.

ಗುಪ್ತಚರ ವಲಯಗಳಲ್ಲಿ 'ಸೂಪರ್ ಸ್ಲೀತ್' ಎಂದು ಕರೆಯಲ್ಪಡುವ ಜೈನ್, ಮಾನವ ಬುದ್ಧಿಮತ್ತೆಯನ್ನು ತಾಂತ್ರಿಕ ಬುದ್ಧಿಮತ್ತೆಯೊಂದಿಗೆ ಪರಿಣಾಮಕಾರಿಯಾಗಿ ಸಂಯೋಜಿಸುವ ಖ್ಯಾತಿ ಹೊಂದಿದ್ದಾರೆ.

ಇತ್ತೀಚೆಗಿನ ಆಪರೇಷನ್ ಸಿಂಧೂರ ಕಾರ್ಯಾಚರಣೆ ಸಮಯದಲ್ಲಿ, ಜೈನ್ ಅವರ ನಾಯಕತ್ವದಲ್ಲಿ ಗುಪ್ತಚರ ಮಾಹಿತಿಯು ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರದಲ್ಲಿನ ಭಯೋತ್ಪಾದಕ ಮೂಲಸೌಕರ್ಯಗಳ ಮೇಲೆ ನಿಖರವಾದ ಕ್ಷಿಪಣಿ ದಾಳಿಗಳನ್ನು ಸಕ್ರಿಯಗೊಳಿಸಿತು. ಜಮ್ಮು ಮತ್ತು ಕಾಶ್ಮೀರದಲ್ಲಿ ಜೈನ್ ಹೊಂದಿರುವ ವ್ಯಾಪಕ ಅನುಭವ ಅವರ ಮೇಲೆ ನಿರೀಕ್ಷೆ ಹೆಚ್ಚಿಸಿದೆ. ಹಿರಿಯ ಅಧಿಕಾರಿಗಳಿಂದ ಕ್ರಮಬದ್ಧ ಮತ್ತು ವಿವೇಚನಾಶೀಲ ಎಂದು ಬಣ್ಣಿಸಲ್ಪಟ್ಟ ಜೈನ್, ತಮ್ಮ ವೃತ್ತಿಜೀವನದುದ್ದಕ್ಕೂ ಹಲವಾರು ಪ್ರಮುಖ ಪಾತ್ರಗಳನ್ನು ನಿರ್ವಹಿಸಿದ್ದಾರೆ.

2021ರ ಜನವರಿ 1ರಂದು ಪಂಜಾಬ್‌ನಲ್ಲಿ ಪೊಲೀಸ್ ಮಹಾನಿರ್ದೇಶಕ (ಡಿಜಿಪಿ) ಹುದ್ದೆಗೆ ಬಡ್ತಿ ನೀಡಲಾಯಿತು. ಆದರೂ ಅವರು ಆಗ ಕೇಂದ್ರ ನಿಯೋಜನೆಯಲ್ಲಿ ಸೇವೆ ಸಲ್ಲಿಸುತ್ತಿದ್ದರು. ಈ ಹಿಂದೆ ಅವರು ಕೆನಡಾ ಮತ್ತು ಶ್ರೀಲಂಕಾದಲ್ಲಿ ಭಾರತವನ್ನು ಪ್ರತಿನಿಧಿಸಿದ್ದಾರೆ.

## ಪ್ರಧಾನಿ ಮೋದಿಗೆ 'ಧರ್ಮ ಚಕ್ರವರ್ತಿ' ಬಿರುದು ಪ್ರದಾನ




ನವದೆಹಲಿ:ಜೂ.28: ಜೈನ ಸಂತ ಆಚಾರ್ಯ ಶ್ರೀ 108 ವಿದ್ಯಾನಂದ ಜಿ ಮಹಾರಾಜ್ ಅವರ ಶತಮಾನೋತ್ಸವದ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ 'ಧರ್ಮ ಚಕ್ರವರ್ತಿ' ಎಂಬ ಬಿರುದನ್ನು ಪ್ರದಾನ ಮಾಡಲಾಯಿತು. ಈ ಗೌರವವನ್ನು ನಮ್ರತೆಯಿಂದ ಸ್ವೀಕರಿಸಿದ ಪ್ರಧಾನಿ ಮೋದಿ , ನಾನು ಇದಕ್ಕೆ ಸೂಕ್ತನೆಂದು ಭಾವಿಸುವುದಿಲ್ಲ. ಆದರೆ ನಾವು ಸಂತರಿಂದ ಏನೇ ಸ್ವೀಕರಿಸಿದರೂ ಅದನ್ನು ಪ್ರಸಾದ ಎಂದು ಸ್ವೀಕರಿಸುವುದು ನಮ್ಮ ಸಂಸ್ಕೃತಿ. ಆದ್ದರಿಂದ, ನಾನು ಈ ಪ್ರಸಾದವನ್ನು ವಿನಮ್ರವಾಗಿ ಸ್ವೀಕರಿಸಿ ಭಾರತ ಮಾತೆಗೆ ಅರ್ಪಿಸುತ್ತೇನೆ ಎಂದು ಹೇಳಿದರು.

ಬಳಿಕ ಮಾತನಾಡಿದ ಪ್ರಧಾನಿ ಮೋದಿ, ಪ್ರಧಾನಿ ಮೋದಿ ಅವರು 1987ರ ಜೂನ್ 28 ರಂದು ಆಚಾರ್ಯ ವಿದ್ಯಾನಂದರಿಗೆ 'ಆಚಾರ್ಯ' ಎಂಬ ಬಿರುದು ದೊರೆತಿತ್ತು ಎಂದು ಹೇಳಿದರು. ಇದು ಕೇವಲ ಗೌರವವಲ್ಲ, ಬದಲಾಗಿ

(2ನೇ ಪುಟ ನೋಡಿ)

## ಕಾಖಂಡಕಿ ವಿರುದ್ಧ ಜೀವ ಬೆದರಿಕೆ ಆರೋಪ



ಮಲ್ಲಮ್ಮನುಡಿವಾರ್ತೆ ಬಾಗಲಕೋಟೆ,ಜೂ.28- ಬೀಳಗಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಹನಮಂತ ಕಾಖಂಡಕಿ ನನಗೆ ಜೀವ ಬೆದರಿಕೆ ಹಾಕಿದ್ದಾರೆ ಎಂದು ಕೆಪಿಸಿಸಿ ಸಂಯೋಜಕ, ರಾಜ್ಯ ಯುವ ಕಾಂಗ್ರೆಸ್ ಮಾಜಿ ಪ್ರಧಾನ ಕಾರ್ಯದರ್ಶಿ ಪ್ರವೀಣಗೌಡ ಪಾಟೀಲ ಆರೋಪಿಸಿದರು. ನಗರದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗುರುವಾರ ರಾತ್ರಿ 10 ಗಂಟೆ ವೇಳೆಗೆ ನನಗೆ ಕಾಖಂಡಕಿ ಅವರು ಕರೆಮಾಡಿ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಲ್ಲದೇ, ಬೀಳಗಿಯಲ್ಲಿ ನನಗೆ ಹೇಳದೆ ಪಕ್ಷದ ಯುವಕರನ್ನು ಸಂಘಟನೆ ಮಾಡುತ್ತಿದ್ದೀಯಾ, ಅದನ್ನು ಬಿಡಬೇಕು. ಇಲ್ಲದಿದ್ದರೆ ನಿನ್ನ ಜೀವ ತೆಗೆಯುತ್ತೇನೆ ಎಂದು ಬೆದರಿಕೆ ಹಾಕಿದ್ದಾರೆ ಎಂದರು.

ತಮ್ಮ ಪುತ್ರನ ಮೂಲಕ ಜಾತಿ ನಿಂದನೆ ಪ್ರಕರಣ ದಾಖಲಿಸುವುದಾಗಿಯೂ ನನಗೆ ಹನಮಂತ ಕಾಖಂಡಕಿ ಬೆದರಿಕೆ ಹಾಕುತ್ತಿದ್ದಾರೆ ಎಂದ ಪಾಟೀಲ,

(2ನೇ ಪುಟ ನೋಡಿ)

# ಸೀಟು ಹಂಚಿಕೆ ಪ್ರಕ್ರಿಯೆ ಕಾರ್ಯಾಗಾರ

ಮಲ್ಲಮ್ಮ ನುಡಿ ವಾರ್ತೆ ಕಲಬುರಗಿ:ಜೂ.28:ವಿಶ್ವೇಶ್ವರಯ್ಯ ತಾಂತ್ರಿಕವಿಶ್ವವಿದ್ಯಾಲಯವಿಟಿಯು ಸಿಪಿಜಿಎಸ್ ಮತ್ತು ಪ್ರಾದೇಶಿಕ ಕಚೇರಿ ಹಾಗೂ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಇವರ ಸಂಯುಕ್ತ ಆಶ್ರಯದಲ್ಲಿ "ಮಂಥನ–2025" ಎಂಬ ಶೀರ್ಷಿಕೆಯಲ್ಲಿ ಯುಜಿಸಿಇಟಿ –2025 ಸೀಟು ಹಂಚಿಕೆ ಪ್ರಕ್ರಿಯೆಯ ಕುರಿತ ಒಂದು ದಿನದ ಕಾರ್ಯಾಗಾರವನ್ನು 28 ಜೂನ್ 2025 ಶನಿವಾರದಂದು ವಿಟಿಯು ಆವರಣದ ಸೆಮಿನಾರ್ ಹಾಲ್‌ನಲ್ಲಿ ಆಯೋಜಿಸಲಾಯಿತು. ಕಾರ್ಯಾಗಾರದ ಮುಖ್ಯ ಉದ್ದೇಶವು ವಿದ್ಯಾರ್ಥಿಗಳು, ಪಾಲಕರು ಹಾಗೂ ಬೋಧಕ ಸಿಬ್ಬಂದಿಗೆ ಸೀಟು ಹಂಚಿಕೆ ಪ್ರಕ್ರಿಯೆ ಬಗ್ಗೆ ಸಂಪೂರ್ಣ ಅರಿವು, ಪಾರದರ್ಶಕತೆ ಹಾಗೂ ಸಿದ್ಧತೆಯನ್ನು ಒದಗಿಸುವುದು ಆಗಿತ್ತು.

ಕಾರ್ಯಕ್ರಮದ ಮುಖ್ಯ ಪೋಷಕರಾಗಿ ವಿಟಿಯು ಬೆಳಗಾವಿಯ ಮಾನ್ಯ ಕುಲಪತಿಗಳಾದ ಪ್ರೊ. ವಿದ್ಯಾಶಂಕರ್ ಎಸ್. ಸೇವೆ ಸಲ್ಲಿಸಿದರು. ಇತರ ಪೋಷಕರಾಗಿ ಪ್ರೊ. ಬಿ. ಇ. ರಂಗಸ್ವಾಮಿ (ನೋಂದಣಾಧಿಕಾರಿ), ಡಾ. ಟಿ. ಎನ್. ಶ್ರೀನಿವಾಸ (ಮೌಲ್ಯಮಾಪನ ನೋಂದಣಾಧಿಕಾರಿ), ಮತ್ತು ಡಾ. ಪ್ರಶಾಂತ ನಾಯಕ್ ಜಿ. (ಆರ್ಥಿಕ ಅಧಿಕಾರಿ) ಕಾರ್ಯಕ್ರಮವನ್ನು ಬೆಂಬಲಿಸಿದರು. ಕಾರ್ಯಾಗಾರವನ್ನು ಡಾ. ಶುಭಾಂಗಿ ಡಿ. ಸಿ., ಪ್ರಾದೇಶಿಕ ನಿರ್ದೇಶಕಿ (ಪ್ರಭಾರಿ), ವಿಟಿಯು ಕಲಬುರ್ಗಿ ಅವರು ಅಧ್ಯಕ್ಷತೆ ವಹಿಸಿ, ಡಾ. ಭಾರತಿ ಎಸ್. ಪೊಚಲ್, ವಿಟಿಯು ಕಲಬುರ್ಗಿಯ ನೋಡಲ್ ಅಧಿಕಾರಿಯಾಗಿ

ಒಂದನೇ ಪುಟದಿಂದ



ಸಮರ್ಪಕವಾಗಿ ಸಂಯೋಜಿಸಿದರು. ಕಾರ್ಯಕ್ರಮದಲ್ಲಿ ಮುಖ್ಯ ಭಾಷಣಕಾರರಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ( ಕೆಇಎ ) ಸಮನ್ವಯಾಧಿಕಾರಿ ಶ್ರೀ ಕಿರಣಕುಮಾರ ಅವರು ಭಾಗವಹಿಸಿ, ಯುಜಿಸಿಇಟಿ –2025 ಸೀಟು ಹಂಚಿಕೆ ಪ್ರಕ್ರಿಯೆ ಬಗ್ಗೆ ಮಹತ್ವದ ಮಾಹಿತಿಗಳನ್ನು ನೀಡಿದರು ಮತ್ತು ಭಾಗವಹಿಸಿದವರ ಪ್ರಶ್ನೆಗಳಿಗೆ ಉತ್ತರಿಸಿದರು. ಇದೇ ಸಂದರ್ಭದಲ್ಲಿ ಮಾನ್ಯ ಉನ್ನತ ಶಿಕ್ಷಣ ಸಚಿವರಾದ ಶ್ರೀ ಎಂ. ಸಿ. ಸುಧಾಕರ್ ಅವರ ವಿಡಿಯೋ ಸಂದೇಶ ಪ್ರದರ್ಶನಗೊಂಡಿತ್ತು, ಇದರಲ್ಲಿ ಅವರು ಭಾಗವಹಿಸಿದ ವಿದ್ಯಾರ್ಥಿಗಳು ಹಾಗೂ ಪಾಲಕರಿಗೆ ಮಾರ್ಗದರ್ಶನ ನೀಡಿದರು. ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು, ಪಾಲಕರು, ಬೋಧಕ ಸಿಬ್ಬಂದಿ ಹಾಗೂ ವಿಶೇಷಾಧಿಕಾರಿಗಳು ಸಕ್ರಿಯವಾಗಿ ಭಾಗವಹಿಸಿದರು. ವಿವಿಧ ವಿಭಾಗಗಳ ಕಾರ್ಯಕ್ರಮ ಸಂಯೋಜಕರಾದ ಡಾ. ಎಂ. ಎ. ವಹೀದ್ (ಸಿ.ಎಸ್.ಇ. ಮತ್ತು ಇ.ಸಿ.ಇ.), ಡಾ. ಬ್ರಿಜ್ಭೂಷಣ್ (ಸಿವಿಲ್), ಶ್ರೀ ಅಂಬಾದಾಸ್ (ಮೆಕ್ಯಾನಿಕಲ್), ಮತ್ತು ಡಾ. ಸತೀಶ್ ಉಪಲೋಂಕರ್ (ಮ್ಯಾನೇಜ್ಮೆಂಟ್ ಸ್ಟಡೀಸ್) ರವರು ಕಾರ್ಯಾಗಾರದ ಸುಗಮ ನಿರ್ವಹಣೆಯಲ್ಲಿ ಪ್ರಮುಖ ಪಾತ್ರವಹಿಸಿದರು.

ಈ ಕಾರ್ಯಾಗಾರವು ವಿದ್ಯಾರ್ಥಿಗಳು ಮತ್ತು ಪಾಲಕರಲ್ಲಿ ಇರುವ ಸಂಶಯಗಳನ್ನು ನಿವಾರಣೆ ಮಾಡುವುದು ಹಾಗೂ ಸೀಟು ಹಂಚಿಕೆ ಸಂಬಂಧಿತ ನಿಖರ ಮಾಹಿತಿಯನ್ನು ಪಸರಿಸುವಲ್ಲಿ ಬಹುಮುಖ್ಯವಾದ ವೇದಿಕೆಯಾಗಿತು. ಕೆಇಎ ಮತ್ತು ವಿಟಿಯು ಸಂಯುಕ್ತ ಸಹಕಾರದಿಂದ ಈ ಕಾರ್ಯಾಗಾರವನ್ನು ಯಶಸ್ವಿಯಾಗಿ ನಡೆಸಲಾಯಿತು ಎಂದು ಎಲ್ಲರೂ ಮೆಚ್ಚಿದರು. ಸುಮಾರು 300 ವಿದ್ಯಾರ್ಥಿಗಳು ಮತ್ತು ಪಾಲಕರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ‘ಧರ್ಮ ಚಕ್ರವರ್ತಿ’ ಬಿರುದು ಪ್ರದಾನ

ಜೈನ ಸಂಸ್ಕೃತಿಯನ್ನು ಸಂಯಮ ಮತ್ತು ಕರುಣೆಗೆ ಸಂಪರ್ಕಿಸುವ ಪವಿತ್ರ ಧಾರ ಎಂದು ಅವರು ಹೇಳಿದರು. ಈ ಆಚರಣೆಗಳು ಶಿಸ್ತುಬದ್ಧ, ತಪಸ್ವಿ ಜೀವನದ ಜ್ಞಾಪನೆ ಎಂದು ಬಣ್ಣಿಸುತ್ತಾ ಪ್ರಧಾನಿ ಆಚಾರ್ಯರಿಗೆ ಗೌರವ ಸಲ್ಲಿಸಿದರು.

ಭಾರತದ ಸಾಂಸ್ಕೃತಿಕ ಪರಂಪರೆಯನ್ನು ಪ್ರತಿಬಿಂಬಿಸುತ್ತಾ ಭಾರತವು ವಿಶ್ವದ ಅತ್ಯಂತ ಹಳೆಯ ಜೀವಂತ ಸಂಸ್ಕೃತಿಯಾಗಿದೆ. ನಮ್ಮ ವಿಚಾರಗಳು, ಆಲೋಚನೆಗಳು ಮತ್ತು ತತ್ವಶಾಸ್ತ್ರವು ಅಮರವಾಗಿರುವುದರಿಂದ ನಾವು ಸಾವಿರಾರು ವರ್ಷಗಳಿಂದ ಅಮರರಾಗಿದ್ದೇವೆ ಎಂದರು.

ಶತಮಾನೋತ್ಸವದ ಗೌರವದ ಭಾಗವಾಗಿ, ಪ್ರಧಾನಿ ಮೋದಿ ಮತ್ತು ಕೇಂದ್ರ ಸಂಸ್ಕೃತಿ ಮತ್ತು ಪ್ರವಾಸೋದ್ಯಮ ಸಚಿವ ಗಜೇಂದ್ರ ಸಿಂಗ್ ಶೇಖಾವತ್ ಅವರು ಆಚಾರ್ಯ ಶ್ರೀ 108 ವಿದ್ಯಾನಂದ ಜಿ ಮಹಾರಾಜ್ ಅವರನ್ನು ಗೌರವಿಸುವ ಸ್ಮರಣಾರ್ಥ ಅಂಚೆ ಚೀಟಿಗಳ ಸರಣಿಯನ್ನು ಬಿಡುಗಡೆ ಮಾಡಿದರು.

## ಜೀವ ಬೆದರಿಕೆ ಆರೋಪ

ಈ ಕುರಿತು ಬೀಳಗಿ ಶಾಸಕ ಜೆ.ಟಿ.ಪಾಟೀಲ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಎಸ್.ಜಿ.ನಂಜಯ್ಯನಮಠ ಅವರಿಗೆ ಮಾಹಿತಿ ನೀಡಿದ್ದು, ರಾಜ್ಯ ನಾಯಕರಿಗೂ ತಿಳಿಸಿದ್ದೇನೆ. ಬೆದರಿಕೆ ಒಡ್ಡಿರುವ ಕುರಿತು ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳಿಗೆ ದೂರು ನೀಡುವುದಾಗಿ ಹೇಳಿದರು.

## ಜೊತೆಗೆ ಮೋದಿ ಸಂವಾದ

ಸೂರ್ಯೋದಯ, ಸೂರ್ಯಾಸ್ತ ನೋಡುತ್ತಿದ್ದೇವೆ. ಭೂಮಿಗೆ ಯಾವುದೇ ಗಡಿ ಕಾಣುವುದಿಲ್ಲ. ಭಾರತ ಮ್ಯಾಪ್‌ನಲ್ಲಿ ನೋಡುವುದಕ್ಕಿಂತ ದೊಡ್ಡದಾಗಿ ಕಾಣುತ್ತೆ. ಭಾರತ ಬಹಳ ಅದ್ಭುತವಾಗಿ ಕಾಣುತ್ತೆ. ರಾಜ್ಯ ದೇಶಗಳ ಗಡಿ ಕಾಣಲ್ಲ ಅಂತ ತಮಗಾದ ಅನುಭವ ಹಂಚಿಕೊಂಡ್ರು.

ನಂತರ ಬಹಳ ತರಬೇತಿ ಪಡೆದು ಹೋಗಿದ್ದೀರಿ, ಅದಾಗ್ಯೂ ಈಗ ಪರಿಸ್ಥಿತಿ ಹೇಗಿದೆ? ಅಂತ ಕೇಳಿದ್ರು. ಇದಕ್ಕೆ ಉತ್ತರಿಸಿದ ಶುಕ್ಲಾ, ಇಲ್ಲಿ ಗುರುತ್ವಾಕರ್ಷಣೆ ಇರುವುದಿಲ್ಲ. ಸಾಕಷ್ಟು ಸಮಸ್ಯೆಯಾಗುತ್ತದೆ. ನಿಮ್ಮ ಜೊತೆಗೆ ಮಾತನಾಡುವಾಗ ಕಾಲನ್ನು ಕಟ್ಟಿಕೊಂಡಿದ್ದೇವೆ ಅಂತ ಮೈಕ್ ತೋರಿಸಿ ಗುರುತ್ವಾಕರ್ಷಣೆಯ ಬಗ್ಗೆ ವಿವರಣೆ ನೀಡಿದರು.

ಮೋದಿ: ಧ್ಯಾನ ಬಾಹ್ಯಾಕಾಶದಲ್ಲಿ ಉಪಯೋಗವಾಗುತ್ತದೆಯೇ?

ಶುಕ್ಲಾ: ನಾವು ಓಡುತ್ತಿದ್ದೇವೆ, ಅದರ ಸಣ್ಣ ಹೆಜ್ಜೆ ಈ ಪ್ರಯತ್ನ. ಮುಂದೆ ಭಾರತ ತನ್ನದೇಯಾದ ಬಾಹ್ಯಕಾಶ ಕೇಂದ್ರ ಹೊಂದಲಿದೆ. ಬಹಳಷ್ಟು ಜನರು ಇಲ್ಲಿಗೆ ಬರಲಿದ್ದಾರೆ. ಧ್ಯಾನ ಇಲ್ಲಿ ಬಹಳ ಮುಖ್ಯವಾಗುತ್ತದೆ. ಧ್ಯಾನದಿಂದ ಮುಂದಿನ ಸವಾಲುಗಳನ್ನು ಸುಲಭವಾಗಿ ಎದುರಿಸಬಹುದು.

ಮೋದಿ: ನಿಮ್ಮ ಪ್ರಯೋಗಗಳು ಹೇಗೆ ಸಾಗುತ್ತಿದೆ?

ಶುಕ್ಲಾ: ನಾವು ಇಲ್ಲಿ ಹಲವು ಪ್ರಯೋಗ ಮಾಡುತ್ತಿದ್ದೇವೆ. ಮೂಳೆ ಸವೆತದ ಬಗ್ಗೆ ಅಧ್ಯಯನ ಮಾಡುತ್ತಿದ್ದೇನೆ. ಮೊಳಕೆ ಕಾಳುಗಳ ಬಗ್ಗೆಯೂ ಅಧ್ಯಯನ ಮಾಡುತ್ತಿದ್ದೇವೆ. ಭೂಮಿಯ ಮೇಲೆ ಸಾಕಷ್ಟು ನಿಧಾನವಾಗಿ ಸಿಗುವ ಪ್ರತಿಫಲ ಇಲ್ಲಿದೆ ವೇಗವಾಗಿ ಸಿಗುತ್ತದೆ.

ಮೋದಿ: ಯುವ ಜನತೆಗೆ ಏನು ಸಂದೇಶ ನೀಡುತ್ತೀರಿ?

ಶುಕ್ಲಾ: ನಾವು ದೊಡ್ಡ ಕನಸುಗಳೊಂದಿಗೆ ಓಡುತ್ತಿದ್ದೇವೆ. ಅದಕ್ಕೆ ನಿಮ್ಮಂಥವರ ಸಹಕಾರ ಬೇಕು. ಯಶಸ್ಸು ಸಿಗುವ ತನಕ ನಿರಂತರ ಪ್ರಯತ್ನ ಮಾಡಬೇಕು. ನಡುವೆ ಸೋಲು ಒಪ್ಪಿಕೊಳ್ಳಬಾರದು.

ಮೋದಿ: ಮಿಷನ್ ಗಗನ್ ಯಾನ್ ಮಾಡಬೇಕು, ಸ್ವತಃ ಬಾಹ್ಯಕಾಶ ಕೇಂದ್ರ ಹೊಂದಬೇಕು, ಗಗನಯಾತ್ರಿಗಳನ್ನು ಲ್ಯಾಂಡ್ ಮಾಡಬೇಕು. ನಿಮ್ಮ ಅನುಭವ ಬಹಳ ಮುಖ್ಯ, ನೀವು ಇದನ್ನು ದಾಖಲಿಸುತ್ತಿದ್ದೀರಾ?

ಶುಕ್ಲಾ: ನಾವು ಎಲ್ಲವನ್ನೂ ದಾಖಲಿಸುತ್ತಿದ್ದೇವೆ. ಗಗನಯಾನ್ ಸಾಧ್ಯವಾದಷ್ಟು ಬೇಗ ಈಡೇರಲಿದೆ.

ಸಂವಾದದ ಕೊನೆಯಲ್ಲಿ , ಇದು ಭಾರತದ ಗಗನಯಾನ್ ಯಶಸ್ಸಿನ ಮೊದಲ ಅಧ್ಯಾಯವಾಗಿದೆ. ವಿಕಸಿತ್ ಭಾರತಕ್ಕೆ ವೇಗ ಮತ್ತು ಶಕ್ತಿ ನೀಡಲಿದೆ. ಇದು ಬಾಹ್ಯಕಾಶದ ಮತ್ತಷ್ಟು ಅವಕಾಶಗಳನ್ನು ಸೃಷ್ಟಿಸಲಿದೆ ಎಂದರಲ್ಲದೇ ನಿಮ್ಮ ವಾಪಸ್ ಬರುವಿಕೆಯೂ ನಮ್ಮಗೆ ಬಹಳ ಮುಖ್ಯ. ನಿಮ್ಮ ಆರೋಗ್ಯದ ಬಗ್ಗೆ ಕಾಳಜಿ ವಹಿಸಿ ಎಂದು ಮೋದಿ ಕಿವಿಮಾತು ಹೇಳಿದರು.

## ಹೆಚ್ಚು ಸ್ಯಾನಿಟರಿ ಪ್ಯಾಡ್‌ಗಳಿಗೆ ಬೆಂಕಿ

ವ್ಯಾಪ್ತಿಗೆ ಬರುವ 15 ಹಳ್ಳಿಯ ಜನರಿಗೆ ಶುಚಿ ಪ್ಯಾಡ್ ಹಂಚಬೇಕಾಗಿತ್ತು. 2017ರಲ್ಲಿಯೇ ಎಲ್ಲಾ ಶುಚಿ ಪ್ಯಾಡ್‌ಗಳು ತಯಾರಾಗಿದ್ದು, 2021ರವರೆಗೆ ವ್ಯಾಲಿಡಿಟಿ ಇದ್ದು, 8 ವರ್ಷಗಳಿಂದ ಮಹಿಳೆಯರಿಗೆ ವಿತರಿಸದೇ ಹಾಗೇ ಬಿಟ್ಟಿದ್ದಾರೆ.

ಆರೋಗ್ಯ ಕೇಂದ್ರ ಉನ್ನತೀಕರಣಗೊಂಡ ಹಿನ್ನೆಲೆ ಹಳೆಯ ಕಟ್ಟಡವನ್ನು ತೆರವು ಮಾಡಿ, ಹೊಸ ಕಟ್ಟಡ ನಿರ್ಮಾಣಕ್ಕೆ ಮುಂದಾಗಿದ್ದರು. ಹಳೆಯ ಕಟ್ಟಡ ತೆರವಿನ ವೇಳೆ ಕಟ್ಟಡದ ತುಂಬೆಲ್ಲಾ ವಿತರಣೆಯಾಗದ 100ಕ್ಕೂ ಹೆಚ್ಚು ಬಾಕ್ಸ್‌ಗಳಲ್ಲಿ 1 ಲಕ್ಷಕ್ಕೂ ಹೆಚ್ಚು ಪ್ಯಾಡ್‌ಗಳು ಪತ್ತೆಯಾಗಿವೆ. ಇದನ್ನು ಕಂಡ ಪಿಎಚ್‌ಸಿಯ ಕೆಲ ಸಿಬ್ಬಂದಿಗಳು ಕೂಡಲೇ ಪ್ಯಾಡ್‌ಗಳಿಗೆ ಬೆಂಕಿ ಹಚ್ಚಿ, ತಮ್ಮ ತಪ್ಪು ಮುಚ್ಚಿಕೊಳ್ಳಲು ಮುಂದಾಗಿದ್ದಾರೆ. ಶನಿವಾರ ಬೆಳಿಗ್ಗೆ ಎಲ್ಲ ಪ್ಯಾಡ್‌ಗಳಿಗೆ ಬೆಂಕಿ ಹಚ್ಚಿದ್ದು, ಇದೇ ವೇಳೆ ಸ್ಥಳೀಯರು ಹೋಗಿ ಪರಿಶೀಲನೆ ನಡೆಸಿದಾಗ, ವಿಷಯ ಬಯಲಿಗೆ ಬಂದಿದೆ. ಸ್ಥಳೀಯರು ಕಿಡಿಕಾರಿದಾಗ ಪಿಎಚ್‌ಸಿ ಸಿಬ್ಬಂದಿ ಕಾಲ್ಕಿತ್ತಿದ್ದಾರೆ.

## ಹೈಕಮಾಂಡ್ ತೀರ್ಮಾನಿಸಲಿದೆ: ಬೈರತಿ ಸುರೇಶ್

ಜನಪರವಾದ ಸ್ತಬ್ಧ ಚಿತ್ರಗಳು ಇರಬೇಕು, ಮೈಸೂರು ಸಂಸ್ಕೃತಿ ಎತ್ತಿ ಹಿಡಿಯುವ ಸ್ತಬ್ಧ ಚಿತ್ರಗಳಿಗೆ ಪ್ರಮುಖ ಆದ್ಯತೆ ಕೊಡಬೇಕೆಂದು ತೀರ್ಮಾನ ಮಾಡಲಾಗಿದೆ ಎಂದಿದ್ದಾರೆ.


ಕೋಲಾರ ಶಾಸಕರಿಂದ ಉಸ್ತುವಾರಿ ಬದಲಾವಣೆ ಬೇಡಿಕೆ ವಿಚಾರವಾಗಿ, ಎಲ್ಲರ ಕಣ್ಣಿಗೂ, ತಿನ್ನೋಕು ಬೆಣ್ಣೆ ಕೊಡುವುದು, ಸುಣ್ಣ ಕೊಟ್ಟು ಅಭ್ಯಾಸ ನನಗಿಲ್ಲ. ಅದರ ಬಗ್ಗೆ ನಂಬಿಕೆ ಇಲ್ಲ, ಒಂದೇ ಮನೆಯಲ್ಲಿ ಅಣ್ಣ ತಮ್ಮಂದಿರ ಜಗಳ ಆಡ್ತಾ ಇರ್ತಾರೆ ಅದೇ ರೀತಿ ಭಿನ್ನಾಭಿಪ್ರಾಯ ಇರುತ್ತದೆ. ಅದನ್ನು ಸರಿಪಡಿಸುವ ಕೆಲಸ ಮಾಡುತ್ತೇವೆ. ಸುರ್ಜೇವಾಲ ರಾಜ್ಯಕ್ಕೆ ಆಗಮಿಸಿಸುತ್ತಿದ್ದಾರೆ ಎಂದು ತಿಳಿಸಿದ್ದಾರೆ.

ಶಾಸಕರನ್ನು ಕಂಟ್ರೋಲ್ ಮಾಡಲು ಅವರು ಬರ್ತಾ ಇಲ್ಲ ಬೋರ್ಡ್‌ಗಳಿಗೆ ನಿರ್ದೇಶಕರ ಆಯ್ಕೆ, ಎಂಎಲ್‌ಸಿಗಳ ಬಗ್ಗೆ ಚರ್ಚೆ ಮಾಡ್ತಾರೆ. ಶಾಸಕರ ಸಮಾಧಾನ ಮಾಡುವುದಾಗಲಿ, ಮಂತ್ರಿಗಳನ್ನ ಸಮಾಧಾನ ಮಾಡಲು ಬರ್ತಾ ಇಲ್ಲ. ಶಾಸಕರ ಸಮಸ್ಯೆ ಬಗೆಹರಿಸಲು ಸಿಎಂ ಹಾಗೂ ಡಿಸಿಎಂ ಇದ್ದಾರೆ. ಯಾವುದೇ ಶಾಸಕರು ಹೋಗಿ ಹೈಕಮಾಂಡ್ ಗೆ ದೂರು ಕೊಟ್ಟಿಲ್ಲ ಎಂದಿದ್ದಾರೆ.

ಶಾಸಕರ, ಸಚಿವರ ಸಮಸ್ಯೆ ಏನಿದ್ದರೂ ಅದನ್ನು ಕೇಳಲು ಸುರ್ಜೇವಾಲ ಬರ್ತಾ ಇದ್ದಾರೆ. ಶಾಸಕರ ತಪ್ಪು ಎಂದು ನಾನು ಹೇಳುವುದಿಲ್ಲ. ಎಲ್ಲಾ ಸಚಿವರ ಕರ್ತವ್ಯ ಶಾಸಕರಿಗೆ ಸಿಗುವುದು, ಶಾಸಕರ ಸಮಸ್ಯೆ ಕೇಳುವುದು, ಸಚಿವರ ಆದ್ಯ ಕರ್ತವ್ಯ ಸಚಿವರು ವಿಫಲ ಆಗಿಲ್ಲ. ಕೆಲವು ಬಾರಿ ಸಿಗದೇ ಇರಬಹುದು. ಅದು ಏನಿದ್ದರೂ ಸರಿ ಮಾಡುವ ಕೆಲಸ ನಾವು ಮಾಡ್ತೀವಿ ಎಂದಿದ್ದಾರೆ.

# ಚರ್ಚ್ ನಿರ್ಮಾಣಕ್ಕೆ ಅನುದಾನ: ಒತ್ತಾಯ

ಮಲ್ಲಮ್ಮ ನುಡಿ ವಾರ್ತೆ ಬೀದರ್:ಜೂ.28:ತಾಲ್ಲೂಕಿನ ಪ್ರತಿ ಗ್ರಾಮದಲ್ಲಿ ಚರ್ಚ್ ನಿರ್ಮಾಣಕ್ಕೆ ತಲಾ 1 ಕೋಟಿ ರೂ. ಅನುದಾನ ಒದಗಿಸಬೇಕು ಎಂದು ಹಮಿಲಾಪುರದ ದಿ ಬುದ್ಧ ಯುಥ್ ಕ್ಲಬ್ ಅಧ್ಯಕ್ಷ ಮಹೇಶ ಎಸ್. ರಾಂಪುರೆ ಒತ್ತಾಯಿಸಿದ್ದಾರೆ.



ರಾಜ್ಯ ಕ್ರಿಶ್ಚಿಯನ್ ಅಭಿವೃದ್ಧಿ ನಿಗಮದ ಉಪಾಧ್ಯಕ್ಷ ಸಂ–ಜಯ್ ಜಾಗೀರದಾರ್ ಹಾಗೂ ಜಿಲ್ಲಾ ಅಲ್ಪಸಂಖ್ಯಾತ ಕಲ್ಯಾಣ ಅಧಿಕಾರಿಗೆ ಈ ಕುರಿತು ಪ್ರತ್ಯೇಕ ಮನವಿ ಪತ್ರ ಸಲ್ಲಿಸಿದ್ದಾರೆ.

ಈಗಾಗಲೇ ಕೆಲ ಗ್ರಾಮಗಳಲ್ಲಿ ಚರ್ಚಗಳ ಕಾಮಗಾರಿ ನಡೆದಿದ್ದು, ಅವುಗಳಿಗೆ ಇನ್ನೂ ಹೆಚ್ಚಿನ ಅನುದಾನ ಕಲ್ಪಿಸಬೇಕು ಎಂದು ಆಗ್ರಹಿಸಿದ್ದಾರೆ.

ಹೋಬಳಿ ಮಟ್ಟದಲ್ಲಿ ಚರ್ಚ್ ನಿರ್ಮಾಣಕ್ಕೆ 2 ಕೋಟಿ ರೂ, ತಾಲ್ಲೂಕು ಮಟ್ಟದಲ್ಲಿ 5 ಕೋಟಿ ರೂ. ಹಾಗೂ ಜಿಲ್ಲಾಮಟ್ಟದಲ್ಲಿ ಚರ್ಚ್ ನಿರ್ಮಾಣಕ್ಕೆ 10 ಕೋಟಿ ಅನುದಾನ ನೀಡಬೇಕು ಎಂದು ಬೇಡಿಕೆ ಮಂಡಿಸಿದ್ದಾರೆ.

# ಜೀವನದಲ್ಲಿ ಬದಲಾವಣೆ ಬೆಳವಣಿಗೆ ಎರಡೂ ಮುಖ್ಯ : ರಂಭಾಪುರಿ ಜಗದ್ಗುರುಗಳು

ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು: ಜೂ.28:ಸತ್ಯ ಶಾಂತಿ ಎಲ್ಲರ ಬಾಳಿಗೆ ಅಗತ್ಯ. ಸತ್ಯ ಶುದ್ಧವಾದ ದಾರಿಯಲ್ಲಿ ನಡೆದಾಗ ಜೀವನ ಮೌಲ್ಯ ಸಂವರ್ಧಿಸುತ್ತದೆ. ಉತ್ತಮ ಸಮಾಜ ನಿರ್ಮಾಣಕ್ಕೆ ಆದರ್ಶಗಳೇ ದಾರಿದೀಪ. ಶ್ರೇಯಸ್ಸು ಬಯಸುವ ಮನುಷ್ಯನಿಗೆ ಬದಲಾವಣೆ ಮತ್ತು ಬೆಳವಣಿಗೆ ಎರಡೂ ಮುಖ್ಯವೆಂದು ಬಾಳೆಹೊನ್ನೂರು ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರುಗಳು ಅಭಿಪ್ರಾಯಪಟ್ಟರು.



ಅವರು ಶನಿವಾರ ಜೆ.ಪಿ.ನಗರದ ಶ್ರೀ ಸೋಮೇಶ್ವರ ಸಭಾ ಭವನದಲ್ಲಿ ಶ್ರೀ ವೀರಶೈವ ಲಿಂಗಾಯತ ಸಂಗಮದಿಂದ ಜರುಗಿದ ಜನ ಜಾಗೃತಿ ಧರ್ಮ ಸಮಾರಂಭದ ಸಾನಿಧ್ಯ ವಹಿಸಿ ಆಶೀರ್ವಚನ ನೀಡುತ್ತಿದ್ದರು.

ಮೌಲ್ಯಾಧಾರಿತ ಜೀವನದಿಂದ ಬದುಕಿಗೆ ನೆಲೆ ಬೆಲೆ ತರುತ್ತದೆ. ಬಾಲ್ಯದಲ್ಲಿ ಜ್ಞಾನ ಯೌವನದಲ್ಲಿ ಸಂಪತ್ತು ವೃದ್ಧಾಪ್ಯದಲ್ಲಿ ಪುಣ್ಯ ಸಂಪಾದಿಸಿಕೊಂಡು ಬಾಳಬೇಕೆಂದು ಧರ್ಮಶಾಸ್ತ್ರ ಹೇಳುತ್ತದೆ. ಕಷ್ಟಗಳು ಬಂದಾಗ ಧೃತಿಗೆಡದೇ ಕುಗ್ಗದೇ ಗಟ್ಟಿತನದಿಂದ ಮುನ್ನಡೆಯುವ ಛಲ ಹೊಂದಿರಬೇಕು. ಬೆಳಗುವ ದೀಪಕ್ಕೆ ಎಣ್ಣೆ ಇದ್ದಂತೆ ಸರ್ವ ಚಟುವಟಿಕೆಗಳಿಗೆ ಆತ್ಮ ವಿಶ್ವಾಸ ನಂಬಿಕೆಯೇ ಮೂಲ ಆಧಾರವೆಂದು ಶ್ರೀ ಜಗದ್ಗುರು ರೇಣುಕಾಚಾರ್ಯರು ಬೋಧಿಸಿ ಸಕಲರನ್ನು ಉದ್ಧರಿಸಿದ್ದಾರೆ. ಜೆ.ಪಿ.ನಗರದ ಶ್ರೀ ವೀರಶೈವ ಲಿಂಗಾಯತ ಸಂಗಮ ಸಮಾಜದಲ್ಲಿ ಧಾರ್ಮಿಕ ಮತ್ತು ಸಾಮಾಜಿಕ ಕಾರ್ಯಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿರುವುದು ತಮಗೆ ಹರುಷ ತಂದಿದೆ ಎಂದರು.

ಸಮಾರಂಭ ಉದ್ಘಾಟಿಸಿದ ಶಾಸಕ ಎಂ.ಕೃಷ್ಣಪ್ಪ ಮಾತನಾಡಿ ಶ್ರಮದ ಬೆವರಿನ ಫಲ ಶಾಶ್ವತ ಮತ್ತು ಸುಖದಾಯಕ. ಅಧರ್ಮಕ್ಕೆ ಹಲವು ದಾರಿ. ಆದರೆ ಧರ್ಮಕ್ಕೆ ಒಂದೇ ದಾರಿ ಇರುತ್ತದೆ. ಜ್ಞಾನ ಕ್ರಿಯಾತ್ಮಕವಾದ ಧರ್ಮ ಪಾಲನೆಯಿಂದ ಜಗದಲ್ಲಿ ಶಾಂತಿ ನೆಲೆಸುವುದು. ಶ್ರೀ ರಂಭಾಪುರಿ ಜಗದ್ಗುರುಗಳು ನಿರಂತರ ಸಂಚರಿಸಿ ಧರ್ಮ ಸಂಸ್ಕೃತಿ ಕ್ರಿಯಾಶೀಲತೆ ಸಾಮರಸ್ಯ ಸ್ವಾಭಿಮಾನ ಬೆಳೆಸುವ ಅದ್ಭುತ ಕಾರ್ಯ ಮಾಡುತ್ತಿದ್ದಾರೆ. ಅನುಗಾಲ ಅವರ ಮಾರ್ಗದರ್ಶನ ನಮ್ಮೆಲ್ಲರ ಬಾಳಿನ ರಕ್ಷಾಕವಚವಾಗಲೆಂದರು. ಜಯರಾಮ್ ಹಾಗೂ ಲಲಿತಾ ನಾರಾಯಣ ದಂಪತಿಗಳು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದರು.

ಎಡೆಯೂರು ಕ್ಷೇತ್ರದ ರೇಣುಕ ಶಿವಾಚಾರ್ಯ ಸ್ವಾಮಿಗಳು ನೇತೃತ್ವ ವಹಿಸಿ ವಿಜ್ಞಾನ ತಂತ್ರಜ್ಞಾನ ಬೆಳೆದಂತೆ ಮನುಷ್ಯನ ಭಾವನೆಗಳು ಬೆಳೆಯಲಾರದ ಕಾರಣದಿಂದ ಎಲ್ಲೆಡೆ ಅಶಾಂತಿ ಕಾಣುತ್ತೇವೆ. ಅಜ್ಞಾನ ಮತ್ತು ಅಶಿಸ್ತು ಜೀವನ ಪ್ರಗತಿಗೆ ಅಡ್ಡಿಯಾಗಿವೆ. ಉದಾತ್ತ ಜೀವನ ಮೌಲ್ಯಗಳನ್ನು ಸಂರಕ್ಷಿಸಿಕೊಂಡು ಬಾಳಬೇಕೆಂದರು. ಸಿದ್ಧರಬೆಟ್ಟದ ವೀರಭದ್ರ ಶಿವಾಚಾರ್ಯ ಸ್ವಾಮಿಗಳು ಮಾತನಾಡಿ ಮನುಷ್ಯ ಧರ್ಮದಿಂದ ವಿಮುಖನಾದರೆ ಅವನತಿ ಶತಸಿದ್ಧ. ತನಗಾಗಿ ಬಯಸುವುದು ಜೀವ ಗುಣ. ಎಲ್ಲರಿಗಾಗಿ ಬಯಸುವದು ದೇವ ಗುಣ. ಯುವ ಜನಾಂಗ ಈ ರಾಷ್ಟ್ರದ ಅಮೂಲ್ಯ ಬಹು ದೊಡ್ಡ ಶಕ್ತಿ ಮತ್ತು ಆಸ್ತಿಯಾಗಿದ್ದಾರೆ. ಆದರ್ಶ ಮಾರ್ಗದರ್ಶನದಲ್ಲಿ ಯುವಕರು ಬದುಕನ್ನು ಕಟ್ಟಿಕೊಳ್ಳಬೇಕೆಂದರು. ಸಂಗೊಳ್ಳಿ ಹಿರೇಮಠದ ಗುರುಲಿಂಗ ಶಿವಾಚಾರ್ಯರು ಉಪಸ್ಥಿತರಿದ್ದರು. ಸಮಿತಿಯ ಅಧ್ಯಕ್ಷ ಚಂದ್ರಶೇಖರ ಗೌಡರ್ ಪ್ರಾಸ್ತಾವಿಕ ನುಡಿ ಸಲ್ಲಿಸಿದರು. ನೀಲಾಂಬಿಕಾ ಮಹಿಳಾ ಮಂಡಳಿಯವರು ಪ್ರಾರ್ಥನಾ ಗೀತೆ ಹಾಡಿದರು. ಎಂ.ಎಸ್.ಶ್ರೀಕಂಠಸ್ವಾಮಿ ಸ್ವಾಗತಿಸಿದರು. ನಿವೃತ್ತ ಪ್ರೊ.ಎ.ಆರ್.ಶಿವಕುಮಾರ್ ನಿರೂಪಿಸಿದರು. ಸಮಾರಂಭಕ್ಕೂ ಮುನ್ನ ಶ್ರೀಮತಿ ಜ್ಯೋತಿ ಶಶಿಧರ್ ಮತ್ತು ತಂಡದವರಿಂದ ಭಕ್ತಿ ಸಂಗೀತ ಜರುಗಿತು.

ಬೆಳಗಿನ ಸಂದರ್ಭದಲ್ಲಿ ಲೋಕ ಕಲ್ಯಾಣ ಬಯಸಿ ಶ್ರೀ ರಂಭಾಪುರಿ ಜಗದ್ಗುರುಗಳವರ ಇಷ್ಟಲಿಂಗ ಪೂಜಾ ಜರುಗಿತು. ನಂತರ ಪ್ರಸಾದ ವಿನಿಯೋಗ ಜರುಗಿತು.

# ಸಂಶೋಧನೆಯೇ ಬೋಧಕರ ಮೂಲ ಮಂತ್ರವಾಗಬೇಕು: ಕುಲಪತಿ, ಪ್ರೊ. ಬಿ. ಜಿ. ಮೂಲಿಮನಿ

ಮಲ್ಲಮ್ಮ ನುಡಿ ವಾರ್ತೆ ಬೀದರ:ಜೂ.28:ಆಧುನಿಕ ಜಗತ್ತಿನಲ್ಲಿ ಪ್ರಾಧ್ಯಾಪಕರಾದವರು ಅಧ್ಯಯನ, ಬೋಧನೆ ಹಾಗೂ ಸಂಶೋಧನೆಯಲ್ಲಿ ತೊಡಗಿ ಅದರ ಫಲಿತಗಳು ಸಮುದಾಯಕ್ಕೆ ದಾರೀದೀಪಗಳಾಗಬೇಕು. ಹೊಸ ಹೊಸ ಅವಿಷ್ಕಾರಗಳನ್ನು ಗುರುತಿಸುವುದರೊಂದಿಗೆ ಸಂಶೋಧನೆಯೇ ಪ್ರಾಧ್ಯಾಪಕರ ಮೂಲ ಮಂತ್ರವಾಗಬೇಕೆಂದು ಎಂದು ವಿಶ್ರಾಂತ ಕುಲಪತಿಗಳು ಗುಲ್ಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ ಮತ್ತು ಬಿ. ಎಲ್ ಡಿ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಬಿ ಜಿ ಮೂಲಿಮನಿ ಕರೆ ನೀಡಿದರು.



ಅವರು ನಗರದ ಸ್ಥಳೀಯ ಕರ್ನಾಟಕ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯವು ಆಯೋಜಿಸಿರುವ ಅವರು ಪ್ರೊ. ಬಿ. ಜಿ. ಮೂಲಿಮನಿ ಅಭಿನಂದನೆ ಹಾಗೂ ಪುಸ್ತಕ ಲೋಕಾರ್ಪಣ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ ಜಗತ್ತಿನ ವಿಶ್ವವಿದ್ಯಾಲಯಗಳು ವಿದ್ಯಾರ್ಥಿಗಳ ಸಂಶೋಧನೆಗೆ ಒತ್ತು ನೀಡುತ್ತಿವೆ ಸಂಶೊಧನೆಗೆ ವಿದ್ಯಾರ್ಥಿಗಳು ಆಸಕ್ತಿ ತೋರಿದಲ್ಲಿ ಅದ್ಯಾಪಕ ವೃಂದ ವಿಶೇಷ ಗಮನಹರಿಸಿ ಪ್ರೋತ್ಸಾಹ ನೀಡಬೇಕು ಹಾಗೂ ಇತ್ತಿಚಿನ ದಿನಗಳಲ್ಲಿ ಜಗತ್ತು ಯಾರು ಯೋಚಿಸಲಾರದಂತಹ ಅನ್ವೇಷಣೆ ಆಗುತ್ತಿದೆ. ಅದನ್ನು ಸರಿಯಾದ ಮಾರ್ಗದಲ್ಲಿ ಬಳಕೆಯಾದಾಗ ಮನಕುಲವು ಉಳಿಯಲು ಸಾಧ್ಯ ಕರ್ನಾಟಕ ಪದವಿ ಕಾಲೇಜು ಮುಂದಿನ ದಿನಗಳಲ್ಲಿ ವಿಶ್ವವಿದ್ಯಾಲಯ ವಗುವುದರಲ್ಲಿ ಸಂಶಯವಿಲ್ಲ. ದೂರದೃಷ್ಟಿವಿಲ್ಲದ ನಾಯಕನು ಏನೇನು ಸಾಧಿಸಲಾರನು. ಆದರೆ ಈ ಸಂಸ್ಥೆಯ ಸಂಸ್ಥಾಪಕರಿಂದ ಇಲ್ಲಿಯವರೆಗೆ ಯಾವ ದೂರದೃಷ್ಟಿ ಇಟ್ಟಿಕೊಂಡು ಸಂಸ್ಥೆ, ಕಟ್ಟಿದ್ದಾ–ರೊ ಅದೇ ಮಾನವೀಯ ಮೌಲ್ಯಗಳ ಮಾರ್ಗದಲ್ಲಿ ನಡೆಯುತ್ತಿರುವುದು ನಮ್ಮ ಭಾಗದ ವಿದ್ಯಾರ್ಥಿಗಳಲ್ಲಿ ಜ್ಞಾನದ ಕೊರತೆಯಿಲ್ಲ ಅವಕಾಶದ ಕೊರತೆಯಿದೆ ಕರ್ನಾಟಕ ಕಾಲೇಜಿನಲ್ಲಿ ಮೂಲಿಮನಿ ಫೌಂಡೇಶನ್ ಸಹಯೋಗದೊಂದಿಗೆ ವಿದ್ಯಾರ್ಥಿಗಳು ಸಂಶೋಧನೆಗೆ ಮುಂದೆ ಬಂದು ಇಂದು 10 ಕ್ಕಿಂತ ಹೆಚ್ಚು ಪುಸ್ತಕ ಲೋಕಾರ್ಪಣೆಯಾಗಿದ್ದು ಅತೀವ ಸಂತೋಷ ಮೂಡಿಸಿದೆ ಎಂದರು.

ಕ.ರಾ.ಶಿ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ.ಬಿ.ಜಿ.ಶೆಟಕಾರ ಮಾತನಾಡಿ ಯಾವುದೇ ರಾಷ್ಟ್ರವು ಎಷ್ಟೆ ಅಭಿವೃದ್ಧಿಯಾದರು ಶಾಂತಿ ನೆಮ್ಮದಿ ಜನ ಸಾಮಾನ್ಯರಲ್ಲಿ ಇರಲಿಲ್ಲೆಂದರೆ ಅಭಿವೃದ್ಧಿ ಶೂನ್ಯ ಎಂದರ್ಥ.

ಕಾರ್ಯಕ್ರಮದ ವಿಶೇಷ ಅಹವಾನಿತರಾದ ಕ.ರಾಶಿ ನ್ಯಾಸದ ಅದ್ಯಕ್ಷರಾದ ಡಾ: ಬಸವರಾಜ ಜಿ ಪಾಟೀಲ ಮಾತನಾಡಿ ಪ್ರೊ. ಬಿ. ಜಿ. ಮೂಲಿಮನಿಯವರು ನಡೆದಾಡುವ ವಿಶ್ವವಿದ್ಯಾಲಯ ಇದ್ದಹಾಗೆ. ಇಂದಿನ ಕಾಲದಲ್ಲಿ ನಿವೃತ್ತಿ ನಂತರ ತಾನಾಯ್ತು ತನ್ನ ಮಕ್ಕಳಾಯ್ತು ಎಂಬ ಕಾಲದಲ್ಲಿ ಮೂಲಿಮನಿಯವರು ಬಡವರರಿಗೆ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅನುಕೂಲಕರವಗಲೆಂದು ಫೌಂಡೇಶನ್ ಸ್ಥಾಪಿಸಿ ಸಂಶೋಧನೆಗೆ ವಿದ್ಯಾರ್ಥಿ ಬೆಳವಣಿಗೆಗ ಒತ್ತು ಕೊಡುತ್ತಿರುವುದು ಯಾವುದೇ ಪ್ರತಿಫಲ ಆಪೇಕ್ಷವಿಲ್ಲದೆ ಇವರ ಸ್ವಂತ ಅನೇಕ ವಿಶ್ವವಿದ್ಯಾಲಯಗಳಿಗೆ ಹಾಗೂ ಕಾಲೇಜುಗಳಿಗೆ ಧನ ಸಹಾಯ ಮಾಡಿಯು ಮಾಡದ ರೀತಿ ಇರುತ್ತಾರೆ. ಇವರ ಮೇರು ವ್ಯಕ್ತಿತ್ವ ಎದ್ದು ಕಾಣುತ್ತದೆ.

ಕ.ರಾ.ಶಿ ಸಂಸ್ಥೆಯ ಅಧ್ಯಕ್ಷರಾದ ಹಾಗೂ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಶ್ರೀ ಬಸವರಾಜ ಜಾಬಶೆಟ್ಟಿ ಮಾತನಾಡಿ ನಮ್ಮ ಸಂಸ್ಥೆಯು ಪ್ರಾಥಮಿಕ ಶಾಲೆಯಿಂದ ಆರಂಭವಾಗಿ ಎಲ್.ಕೆ.ಜಿ.ಯಿಂದ ಪಿ.ಜಿ. ಪಿ.ಎಚ್.ಡಿ, ಸಂಪ್ರದಾಯಿಕ ಹಾಗೂ ವೃತ್ತಿ ಶಿಕ್ಷಣ ಕೋರ್ಸುಗಳು ಸೇರಿ 25 ಅಂಗ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಆದುನಿಕ ಜಗತ್ತಿನ ಶಿಕ್ಷಣವು ವ್ಯಾಪರಿಕರಣದ ಮಧ್ಯ ಶಿಕ್ಷಣ ಉದ್ಯಮವಲ್ಲ ಒಂದು ಸೇವಾಲಯ ಎಂದು ಭಾವಿಸಿ ಇಲ್ಲಿ ಓದಿದ ಸಾವಿರಾರು ವಿದ್ಯಾರ್ಥಿಗಳು ದೇಶ ವಿದೇಶಗಳಲ್ಲಿ ಉನ್ನತ ಹುದ್ದೆಯಲ್ಲಿದ್ದಾರೆ. ಅದಕೆಲ್ಲಾ ಅಧ್ಯಾಪಕರೆ ಕಾರಣ. ನಾವು ಸೌಲಭ್ಯಗಳು ಮಾತ್ರ ಒದಗಿಸಿಕೊಟ್ಟಿದ್ದೆವೆ. ಇಂದು ನನಗೆ ಅತೀಚ ಸಂತೋಷವಾಗಿದೆ. ನಮ್ಮ ಕಾಲೇಜಿನ ವಿದ್ಯಾರ್ಥಿಗಳು, ಉಪನ್ಯಾಸಕ ಬಾಂಧವರು ಅನೇಕ ಮೌಲ್ಯಯುತ ಕೃತಿಗಳು ಲೋಕಾರ್ಪಣೆಯಾಗಿದ್ದು, ಇದರ ಲಾಭ ವಿದ್ಯಾರ್ಥಿಗಳು ಪಡೆದುಕೊಳ್ಳಬೇಕೆಂದು ಕರೆ ನೀಡಿದರು.

ಕಾಲೇಜಿನ ಪ್ರಾಚಾರ್ಯರಾದ ಡಾ.ಮಲ್ಲಿಕಾರ್ಜುನ ಹಂಗರಗಿ ಎಲ್ಲರನ್ನು ಸ್ವಾಗತಿಸಿ ಪ್ರಾಸ್ತವಿಕವಾಗಿ ಮಾತನಾಡಿದರು.

ಇದೇ ಸಂದರ್ಭದಲ್ಲಿ ಸಂಸ್ಥೆಯ ಕಾರ್ಯದರ್ಶಿಗಳಾದ ಸತೀಷ ಪಾಟೀಲ, ಜಂಟಿ ಕಾರ್ಯದರ್ಶಿಗಳಾದ ಶಿವಾನಂದ ಗಾದಗೆ ಎಲ್ಲಾ ಆಡಳಿತ ಮಂಡಳಿ ಸದಸ್ಯರು, ಉಪನ್ಯಾಸಕ ಬಾಂಧವರು ಸೇರಿದಂತೆ 500 ಕ್ಕಿಂತ ಹೆಚ್ಚಿನ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

## ಪತ್ರಕರ್ತ ಪ್ರಕಾಶ್ ಜಿ ಕಾದಂಬರಿ ನನ್ಸಿರಿ ಬಿಡುಗಡೆ
# ಧ್ಯಾನಸ್ಥ ಸ್ಥಿತಿಯಲ್ಲಿದ್ದರೆ ಬರವಣಿಗೆ ಸಾಧ್ಯ: ಜೋಗಿ



ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು:ಪತ್ರಕರ್ತ ವೃತ್ತಿಯನ್ನಾಗಿಸಿಕೊಂಡವರಲ್ಲಿ ಬಹಳಷ್ಟು ಜನರು ಪ್ರವೃತ್ತಿಯಾಗಿ ಸಾಹಿತ್ಯ ರಚನೆಯಲ್ಲಿಯೂ ತೊಡಗಿಸಿಕೊಂಡಿರುವುದು ಮಹತ್ವದ ಬೆಳವಣಿಗೆ ಎಂದು ಸಾಹಿತಿ ಜೋಗಿ ಅಭಿಪ್ರಾಯಪಟ್ಟರು.

ನಯನ ಸಭಾಂಗಣದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ ಪ್ರಕಾಶ್ ಜಿ. ಅವರು ರಚಿಸಿದ ನನ್ಸಿರಿ ಕಾದಂಬರಿ ಬಿಡುಗಡೆಗೊಳಿಸಿ ಅವರು ಮಾತನಾಡಿದ ಅವರು, ಸಾಹಿತ್ಯದ ಬರವಣಿಗೆಯಲ್ಲಿ ತೊಡಗಿಸಿಕೊಂಡವರಲ್ಲಿ ಶಿಕ್ಷಕರು ಮತ್ತು ಪತ್ರಕರ್ತರ ಸಂಖ್ಯೆ ಹೆಚ್ಚಿದೆ ಎಂದರು.

ಬೂಕರ್ ಪ್ರಶಸ್ತಿಗೆ ಪಾತ್ರರಾದ ಬಾನುಮುಷ್ತಾಕ್, ಅವರ ಕೃತಿಯನ್ನು ಇಂಗ್ಲೀಷ್‌ಗೆ ಅನುವಾದಿಸಿದ ದೀಪಾಭಾಸ್ತಿ ಅವರು ಇಬ್ಬರೂ ಪತ್ರಕರ್ತರು ಎನ್ನುವುದನ್ನು ಸಾಹಿತ್ಯಲೋಕ ಗಮನಿಸುತ್ತಿದೆ ಎಂದರು.

ಸಾಹಿತ್ಯಕ್ಕೆ ಭಿನ್ನ ಬರಹಗಳು ಹೆಚ್ಚೆಚ್ಚು ಬರಬೇಕೆಂದರೆ ಉತ್ತಮ ಭಾಷಾ ಸಂವಹನ ಕೌಶಲ್ಯ ಹೊಂದಿರುವ ವರದಿಗಾರರು ಬರವಣಿಗೆಯಲ್ಲಿ ತೊಡಗಿಸಿಕೊಳ್ಳಬೇಕು. ಧ್ಯಾನಸ್ಥ ಸ್ಥಿತಿಯಲ್ಲಿದ್ದರೆ ಮಾತ್ರವೇ ಬರವಣಿಗೆ ಮಾಡಲು ಸಾಧ್ಯ. ನಿತ್ಯವೂ ಓದು ಮತ್ತು ಬರೆಯುವ ಹವ್ಯಾಸವನ್ನು ತಪ್ಪದೇ ರೂಡಿಸಿಕೊಳ್ಳಬೇಕು ಎಂದು ಹೇಳಿದರು.

ವಿಜಯ ಕರ್ನಾಟಕ ಸಂಪಾದಕರಾದ ಸುದರ್ಶನ ಚನ್ನಂಗಿಹಳ್ಳಿ ಮಾತನಾಡಿ, ತಾವು ನೋಡಿದ ಸಂಗತಿಗಳನ್ನು, ಸಮಾಜದಲ್ಲಿ ಆಗುತ್ತಿರುವ ಬದಲಾವಣೆ, ತಲ್ಲಣಗಳನ್ನು ನನ್ಸಿರಿ ಕಾದಂಬರಿ ರೂಪಕ್ಕೆ ತರುವಲ್ಲಿ ಪ್ರಕಾಶ್ ಉತ್ತಮ ಪ್ರಯತ್ನ ಮಾಡಿದ್ದಾರೆ ಎಂದರು.

ಕರ್ನಾಟಕ ಕಾರ್ಯನಿರ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಮಾತನಾಡಿ, ಕ್ರೀಯಾಶೀಲ ವರದಿಗಾರರಾಗಿರುವ ಪ್ರಕಾಶ್, ಬರವಣಿಗೆಯ ಮೂಲಕ ಸಾಹಿತ್ಯ ಲೋಕಕ್ಕೂ ತೆರೆದು–ಕೊಂಡಿದ್ದಾರೆ. ಅವರಿಂದ ಇನ್ನಷ್ಟು ಉತ್ತಮ ಕೃತಿಗಳು ಬರಲಿ ಎಂದು ಆಶಿಸಿದರು. ಜನಮಿತ್ರ ಪತ್ರಿಕೆ ಸಂಪಾದಕ ಮತ್ತು ಕೆಯುಡಬ್ಲೂಣಟಿಜಜಜಿಟಿಜಜಕೆ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಎಚ್.ಬಿ. ಮದನಗೌಡ, ರವಿ ನಾಕಲಗೋಡು ಅವರು ಪ್ರಕಾಶ್ ಪ್ರಯತ್ನಕ್ಕೆ ಶುಭ ಕೋರಿದರು.

ಪತ್ರಕರ್ತೆ ವಿದ್ಯಾರಶ್ಮಿ ಪೆಲತ್ತಡ್ಕ ಅವರು ನನ್ಸಿರಿ ಕೃತಿಯನ್ನು ಪರಿಚಯಿಸಿದರು. ಕೃತಿ ಕರ್ತೃ ಪ್ರಕಾಶ್ ಮಾತನಾಡಿ, ಇದು ತಮ್ಮ ಚೊಚ್ಚಲ ಪ್ರಯತ್ನವಾಗಿದ್ದು, ಈ ನಿಟ್ಟಿನಲ್ಲಿ ಸಹಕಾರ ನೀಡಿ, ಬೆನ್ನು ತಟ್ಟಿದ ಎಲ್ಲರಿಗೂ ಧನ್ಯವಾದ ತಿಳಿಸಿದರು. ಹಿರಿಯ ಪತ್ರಕರ್ತರಾದ ತಿಮ್ಮಪ್ಪಭಟ್ ಸೇರಿದಂತೆ ಹಲವು ಹಿರಿಯ ಪತ್ರಕರ್ತರು ಶುಭ ಹಾರೈಸಿದರು.

# ಕಾರಪಾಕಪಳ್ಳಿ ಕಾದಿಟ್ಟ ಔಷಧಿ ವನ ಸಂಶೋಧನೆಗೆ ಮನವಿ.



ಮಲ್ಲಮ್ಮ ನುಡಿ ವಾರ್ತೆ

ಹುಮನಾಬಾದ;ಜೂ28–ಬೀದರ್ ಕರ್ನಾಟಕ ವಿಜ್ಞಾನ ತಂತ್ರಜ್ಞಾನ ಅಕಾಡೆಮಿ ಅಧ್ಯಕ್ಷರಾದ ಪ್ರೋ.ಎ.ಎಚ್. ರಾಜಾಸಾಬ ಶನಿವಾರ ಬೀದರ್ ಪಟ್ಟಣಕ್ಕೆ ಆಗಮಿಸಿದಾಗ ಪರಿಸರವಾದಿ ಶೈಲೇಂದ್ರ ಕಾವಡಿ ಅವರಿಗೆ ಭೇಟಿಯಾಗಿ ಚಿಟಗುಪ್ಪಾ ತಾಲೂಕಿನ ಕಾರಪಾಕಪಳ್ಳಿ ಔಷಧಿ ವನ ಸಂಶೋಧನೆ ಮಾಡಲು ಮನವಿ ಮಾಡಿದರು, ಕಾರಪಾಕಪಳ್ಳಿ ಕಾದಿಟ್ಟ ಅರಣ್ಯದಲ್ಲಿ ಹಲವಾರು ಔಷಧಿ ವೃಕ್ಷಗಳಿವೆ ಹಾಗೂ ಸಸ್ಯಗಳಿವೆ ಈ ವೃಕ್ಷಗಳನ್ನು ಗುರುತಿಸಿ ಸಂಶೋಧನೆ ಮಾಡಲು ಅಧ್ಯಕ್ಷರಿಗೆ ಮನವಿ ಮಾಡಿದರು, ಅಕಾಡೆಮಿ ಅಧ್ಯಕ್ಷರಾದ ಮೇಲೆ ಪ್ರಥಮ ಬಾರಿಗೆ ಬೀದರ್ ಪಟ್ಟಣಕ್ಕೆ ಅಭಿನಂದನಾ ಸಮಾರಂಭಕ್ಕೆ ಆಗಮಿಸಿದಾಗ ಶೈಲೇಂದ್ರ ಕಾವಾಡಿ ಸನ್ಮಾನಿಸಿ ಗೌರವಿಸಿದರು. ಬೀದರ ಬೋಮರೆಡ್ಡಿ ಕಾಲೇಜಿನಲ್ಲಿ ಅಭಿನಂದನಾ ಸಮಾರಂಭ ಜರುಗಿತು. ಬೀದರ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೋ.ಡಿ.ಎಸ್.ಬೀರಾದರ, ಪ್ರೋ. ಎಸ್.ವಿ ಕಲ್ಮಠ, ಹೆಚ್. ಎಸ್. ಖಾದ್ರೀ, ಪ್ರಾಚಾರ್ಯ ಡಾ. ಪಿ ವಿಠಲ ರೆಡ್ಡಿ ಉಪಸ್ಥಿತರಿದ್ದರು

## ಆಧುನಿಕ ತಂತ್ರಜ್ಞಾನದ ಸದ್ಬಳಕೆಯಾಗಲಿ
# ಡಾ. ಶ್ರೀಕಾಂತ ಚೌಹಾಣ್.



(ವರದಿ. ಡಿ. ಕೆ. ಪ್ರಹ್ಲಾದ.)

ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ: – ಜೂ 28 ಆಧುನಿಕ ಕಾಲಘಟ್ಟದಲ್ಲಿ ಹಲವು ಬಗೆಯ ಜ್ಞಾನ ದೊರೆಯುತ್ತಿವೆ. ವಿದ್ಯಾರ್ಥಿಗಳು ಈ ಕಾಲದ ತಂತ್ರಜ್ಞಾನವನ್ನು ಒಳ್ಳೆಯದಕ್ಕೆ ಬಳಕೆ ಮಾಡಿಕೊಳ್ಳಲಿ ಎಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸಹ ಪ್ರಾಧ್ಯಾಪಕ ಡಾ. ಶ್ರೀಕಾಂತ ಚೌಹಾಣ್ ಹೇಳಿದರು.

ನಗರದ ಶ್ರೀ ಬಸವೇಶ್ವರ ಪದವಿ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಬಿಎ ಅಂತಿಮ ವಿದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿದ ಅವರು, ಓದುವ ಮೂಲಕ ಹೊಸದನ್ನು ಕಂಡುಕೊಳ್ಳಲು ಪ್ರಯತ್ನಿಸಬೇಕು ಎಂದರು.

ಸಮಾರಂಭವನ್ನು ಉದ್ಘಾಟಿಸಿ

ಬೀದರನ ಪತ್ರಕರ್ತ ಬಾಲಾಜಿ ಕುಂಬಾರ ಮಾತನಾಡಿ, ಜಗತ್ತಿನ ಎಲ್ಲ ವಿದ್ಯಮಾನಗಳು, ಚರಿತ್ರೆ, ಸಾಹಿತ್ಯ ಸೇರಿ ಹಲವು ಸಂಗತಿಗಳನ್ನು ಕುರಿತು ಕಾಲೇಜಿನ ಒಂದು ವರ್ಗ ಕೋಣೆಯಲ್ಲಿ ಮುಕ್ತವಾಗಿ ಚರ್ಚಿಸುವ ಮೂಲಕ ಲೋಕವನ್ನು ಗ್ರಹಿಸಬೇಕು. ಮುಕ್ತ ಸಂವಾದಕ್ಕೆ ಶಾಲಾ ಕಾಲೇಜು ವೇದಿಕೆಗಳಾಗಬೇಕು.

ಅಧ್ಯಯನದ ಮುಕ್ತ ಓದಿನ ಸ್ವರೂಪವೇ ಬಹುಶಿಸ್ತೀಯ ಹಾಗೂ ಅಂತರ್ಶಿಸ್ತೀಯ ಅಧ್ಯಯನವಾಗಿದೆ ಎಂದರು.

ಓದುವ ಪ್ರಕ್ರಿಯೆಯಿಂದ ನಮ್ಮ ತಿಳುವಳಿಕೆಯನ್ನು ಬೆಳೆಸಲು ಸಾಧ್ಯ. ಹಲವು ಜ್ಞಾನ ಪರಂಪರೆಯ ಧಾರೆಗಳನ್ನು ಅರಿಯಲು ಗಂಭೀರ ಓದಿನಲ್ಲಿ ತೊಡಗಬೇಕು. ಸದ್ಯದ ಶೈಕ್ಷಣಿಕ ಮಾದರಿ ಹಾಗೂ ಹಿಂದಿನ ಶೈಕ್ಷಣಿಕ ವಿಧಾನ ಎರಡನ್ನೂ ತೌಲನಿಕವಾಗಿ ಗ್ರಹಿಸಬೇಕು ಎಂದರು. ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಚಾರ್ಯರಾದ ಡಾ. ಭೀಮಾಶಂಕರ ಬಿರಾದಾರ ಮಾತನಾಡಿ, ಜಗತ್ತಿನ ಎಲ್ಲ ಸಂಕಿರ್ಣತೆಗಳ ಅರಿಯಲು ಸಿದ್ಧಾಂತಗಳ, ಥಿಯರಿಗಳ ಅನುಸಂಧಾನದಿಂದ ಸಾಧ್ಯ. ನಮ್ಮ ಹಿಂದಣ ಹಲವು ನಂಬಿಕೆಗಳಿಂದ, ಪೂರ್ವಾಗ್ರಹಗಳಿಂದ ಬಿಡುಗಡೆಗೊಳಿಸುವ ಓದು ನಮ್ಮದಾಗಬೇಕು. ನಮ ಪ್ರತಿದಿನದ ಓದು ಹೊಸ ವಿಚಾರಗಳ, ಹೊಸ ಆಲೋಚನೆಗಳ ಮಾರ್ಗವಾಗಿ ರೂಪುಗೊಳ್ಳಬೇಕು ಎಂದರು.

ಹಿರಿಯ ಸಾಹಿತಿ ಡಾ. ಎಂ. ಮಕ್ತುಂಬಿ ಮಾತನಾಡಿ, ಶಿಕ್ಷಣ ಆರ್ಥಿಕ ಸ್ವಾವಲಂಬನೆ ಮತ್ತು ಸಾಮಾಜಿಕ ಸ್ಥಾನಮಾನಗಳ ಜೊತೆಗೆ ಸಾಮಾಜಿಕ ಸ್ವಾಸ್ಥ್ಯ ಕಾಪಾಡುವ ಕೆಲಸ ಮಾಡುತ್ತದೆ ಎಂದರು.

ತಾಲೂಕು ಕಸಾಪ ಅಧ್ಯಕ್ಷರಾದ ಡಾ. ರುದ್ರಮಣಿ ಮಠಪತಿ,

ಅಕ್ಕಮಹಾದೇವಿ ಮಹಿಳಾ ಪದವಿ ಕಾಲೇಜು ಪ್ರಾಚಾರ್ಯರಾದ ಮಾಯಾ ಮುರಾಳೆ, ಶ್ರೀ ಬಸವೇಶ್ವರ ಸ್ನಾತಕೋತ್ತರ ಪದವಿ ಕಾಲೇಜು ಪ್ರಾಚಾರ್ಯರಾದ ಡಾ. ಶಾಂತಲಾ ಪಾಟೀಲ, ಚೆನ್ನಬಸಪ್ಪ ಶೆಟ್ಟೆಪ್ಪ ಗೌರ, ಡಾ. ಬಸವರಾಜ ಖಂಡಾಳೆ ಮಾತನಾಡಿದರು.

ಐಕ್ಯುಎಸಿ ಸಂಯೋಜಕ ಪವನ ಪಾಟೀಲ, ವಿವೇಕಾನಂದ ಶಿಂಧೆ, ಗಂಗಾಧರ ಸಾಲಿಮಠ, ಸಂಗೀತಾ ಮಹಾಗಾವೆ, ಜಗದೇವಿ ಜವಳಗೆ, ಶೃತಿ ನೀಲಮಠ, ಸಚಿನ್ ಬಿಡವೆ, ಸುಜಾವುದ್ದಿನ, ಕೃಷ್ಣಪ್ಪ ಸೈದಾಪುರ, ಗಣೇಶ ಮೇತ್ರೆ, ಶ್ರೀನಿವಾಸ ಉಮಾಪುರೆ, ನಾಗರಾಜ ನಾಸೆ, ಕೃಷ್ಣ ಗೌಳಿ, ರೋಶನ್ ಬೀ, ಗುರುದೇವಿ ಕಿಚಡೆ, ಪ್ರಶಾಂತ ಬುಡಗೆ, ಮಯೂರಿ ಪಾಟೀಲ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. .

ದಾಕ್ಷಾಯಿಣಿ ನಿರೂಪಿಸಿದರು. ನೀಲಾಂಬಿಕಾ ಪತಂಗೆ ಸ್ವಾಗತಿಸಿದರು. ಅನುಪಮಾ ವಂದಿಸಿದರು.

ನಿದ್ದೆ ಎಷ್ಟು ಅದ್ಭುತವೆಂದರೆ... ಬಂದರೆ ಎಲ್ಲವನ್ನು ಮರೆಸುತ್ತದೆ... ಬರದಿದ್ದರೆ ಎಲ್ಲವನ್ನು ನೆನಪಿಸುತ್ತದೆ.....

## ಕಲ್ಯಾಣ ಕರ್ನಾಟಕ ಭಾಗ ವಿದ್ಯಾರ್ಥಿಗಳಿಗೆ ಸಂಶೋಧನೆಗೆ
# ಚಿನ್ನ ಇದ್ದಂತೆ : ಪ್ರೊ ಎ.ಎಚ್. ರಾಜಾಸಾಬ



ಮಲ್ಲಮ್ಮ ನುಡಿ ವಾರ್ತೆ

ಬೀದರ್: ಜೂ 28– ಕಲ್ಯಾಣ ಕರ್ನಾಟಕದ ವಿದ್ಯಾರ್ಥಿಗಳು ಸಂಶೋಧನೆಗೆ ಮುಂದೆ ಬರಬೇಕು ಈ ಭಾಗ ಸಂಶೋಧನೆಗೆ ಚಿನ್ನ ಇದ್ದಂತೆ ಎಂದು ಕರ್ನಾಟಕ ವಿಜ್ಞಾನ ತಂತ್ರಜ್ಞಾನ ಅಕಾಡೆಮಿಯ ಅಧ್ಯಕ್ಷರಾದ ಪ್ರೊ ಎ.ಎಚ್. ರಾಜಸಾಬ್ ಬೀದರ್ ಬೋಮರೆಡ್ಡಿ ಕಾಲೇಜ್ ನಲ್ಲಿ ಬೊಟಾನಿಕಲ್ ಸೊಸೈಟಿ ಬೀದರ್ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಪ್ರೊ. ಎ.ಹೆಚ್ ರಾಜಸಾಬ್ ಅವರ ಅಭಿನಂದನಾ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡುತ್ತ ಕರೆ ನೀಡಿದರು. ವಿದ್ಯಾರ್ಥಿಗಳು ಮೇಷ್ಟ್ರ ಮಾಡಿದ ಪಾಠವನ್ನೇ ಓದಬೇಡಿ, ಹೆಚ್ಚಿನ ಅಧ್ಯಯನ ಮಾಡಿ ಹೆಚ್ಚಿನ ಜ್ಞಾನ ಸಂಪಾದನೆ ಮಾಡಬೇಕೆಂದರು. ವಿದ್ಯಾರ್ಥಿಗಳಿಗೆ ಸರ್ವ ರೀತಿಯ ಸೌಲಭ್ಯಗಳು ಈಗ ಲಭ್ಯ ಇವೆ ವಿದ್ಯಾರ್ಥಿಗಳು ಕಷ್ಟಪಟ್ಟು ಅಧ್ಯಯನ ಮಾಡಿ ಜ್ಞಾನ ಸಂಪಾದನೆ ಮಾಡಬೇಕೆಂದು ತಿಳಿಸಿದರು. ವಿಜ್ಞಾನ ತಂತ್ರಜ್ಞಾನ ಅಕಾಡೆಮಿ ವಿಜ್ಞಾನ ತಂತ್ರಜ್ಞಾನದ ಪ್ರಚಾರ ಮಾಡುವ ಕಾರ್ಯ ಅಕಾಡೆಮಿದಾಗಿದೆ. ವಿದ್ಯಾರ್ಥಿಗಳು ಸಂಶೋಧನೆಗೆ ಮುಂದೆ ಬಂದರೆ ಅಕಾಡೆಮಿ ಅಕಾಡೆಮಿಯಿಂದ ಸರ್ವ ರೀತಿಯ ಸೌಲಭ್ಯ ಒದಗಿಸಲಾಗುವುದು ಎಂದರು. ವಿಜ್ಞಾನ ತಂತ್ರಜ್ಞಾನದ ಜಾಗೃತಿ ಸಹಭಾಗಿತ್ವದಲ್ಲಿ ಜಾಗೃತಿ ಮಾಡಲಾಗುವುದು ಎಂದರು. ಹಲವಾರು ವಿಜ್ಞಾನಿಗಳು ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ನಾನು ನಾಲ್ಕನೇ ವ್ಯಕ್ತಿ ಪ್ರಾಧ್ಯಾಪಕನಾಗಿ ಕುಲಪತಿಯಾಗಿ ಸೇವೆ ಸಲ್ಲಿಸಿದವರಿಗೆ ಈ ಗುರುತರವಾದ ಜವಾಬ್ದಾರಿ ಸರಕಾರ ನೀಡಿದೆ ಎಂದರು. ಬಿ.ವಿ.ಬೊಮ್ಮರೆಡ್ಡಿ ಕಾಲೇಜ್ ಕರ್ನಾಟಕ ಕಾಲೇಜ್ ಈ ಭಾಗದಲ್ಲಿ ಅತ್ಯುತ್ತಮ ಸೇವೆ ಸಲ್ಲಿಸುತ್ತಿವೆ ಎಂದು ತಿಳಿಸಿದರು. ಗುಲ್ಬರ್ಗದಲ್ಲಿ ಪ್ರಾಧ್ಯಾಪಕರಾಗಿ ಪ್ರೊಫೆಸರ್ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದ ನನಗೆ ಈ ಭಾಗದ ಸಮಸ್ಯೆಗಳ ಅರಿವಿದೆ ಎಂದರು. ಬೀದರ್ ವಿಶ್ವವಿದ್ಯಾಲಯದ ಕುಲಪತಿ ಪ್ರೋ ಬಿ.ಎಸ್. ಬಿರಾದಾರ್ ಅಭಿನಂದನ ಸಮಾರಂಭ ಉದ್ಘಾಟಿಸಿ ಮಾತನಾಡಿ ಪ್ರೊ ಎ.ಎಚ್. ರಾಜಸಾಬ್ ಸರಳ ಜೀವಿಗಳು ಪ್ರೊಫೆಸರ್ ಆಗಿ ಕುಲಪತಿಗಳಾಗಿ ಅತ್ಯುತ್ತಮವಾಗಿ ಸೇವೆ ಸಲ್ಲಿಸಿ ವಿದ್ಯಾರ್ಥಿಗಳ ಹೃದಯ ಗೆದ್ದಿದ್ದಾರೆ ಎಂದರು. ಪ್ರೊ ಎ.ಎಚ್.ರಾಜಸಾಬ ಸಂಶೋಧನೆಗಳು ದೇಶಕ್ಕೆ ಹಾಗೂ ಪ್ರಪಂಚಕ್ಕೆ ಅಪಾರ ಕೊಡಿಗೆ ನೀಡಿದ್ದಾರೆ ವಿಜ್ಞಾನ ಕ್ಷೇತ್ರ ಕೃಷಿಗೆ ತುಂಬಾ ಸಹಾಯವಾಗಿದೆ ಎಂದರು . ಭಾರತ ದೇಶ ಕೃಷಿ ಪ್ರಧಾನವಾದ ದೇಶ ವಾಗಿದೆ. ಸಸ್ಯ ವಿಜ್ಞಾನಿಗಳು ಕೊಡುಗೆ ಕೃಷಿ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದಾರೆ ಎಂದರು. ಹಲವಾರು ಸಂಶೋಧನೆಗಳು ಮಾಡಿದರು ಕೂಡ ಪ್ರೊಫೆಸರ್ ಎ.ಎಚ್. ರಾಜಸಾಬ್ ನಡೆ–ನುಡಿ ಒಂದು ಮಾದರಿಯಾಗಿದ್ದಾರೆ. ಸಂಶೋಧನೆ ಮಾಡಿದರೆ ಹೆಮ್ಮೆಯಿಂದ ಬೀಗುತ್ತಾರೆ ಆದರೆ ಇವರ ಸರಳತೆ ಸಮಾಜಕ್ಕೆ ದೇಶಕ್ಕೆ ಮಾದರಿಯಾಗಿದೆ ಎಂದರು. ಕಲ್ಯಾಣ ಕರ್ನಾಟಕದಲ್ಲಿ ಇವರು ಹಲವಾರು ವಿದ್ಯಾರ್ಥಿಗಳನ್ನು ಸಂಶೋಧಕರನ್ನು ಪ್ರತಿಭಾವಂತ ವಿದ್ಯಾರ್ಥಿಗಳನ್ನು ತಯಾರು ಮಾಡಿದ್ದಾರೆ ಎಂದು ಸ್ಮರಿಸಿದರು. ಬೊಟಾನಿಕಲ್ ಸೊಸೈಟಿ ಅಧ್ಯಕ್ಷರಾದ ಪ್ರೊಫೆಸರ್ ಎಸ್ ವಿ ಕಲ್ಮಠ ಅಭಿನಂದ ನುಡಿ ಮೇಲೆ ಮಾತನಾಡುತ್ತಾ ಹಲವಾರು ಸಂಶೋಧನೆಗಳು ಮಾಡಿ ದೇಶಕ್ಕೆ ಅಪಾರ ಕೊಡುಗೆನೇ ವಿಜ್ಞಾನ ಕ್ಷೇತ್ರಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಗ್ರಾಮೀಣ ಭಾಗದಲ್ಲಿ ಹುಟ್ಟಿದಂತಹ ಪ್ರತಿಭಾವಂತ ಮೇಧಾವಿ ನಮಗೆ ಸಿಕ್ಕಿದ್ದು ಈ ಭಾಗದ ಜನರ ಪುಣ್ಯವಾಗಿದೆ ಎಂದರು. ಕನ್ನಡ ಶಾಲೆಯಲ್ಲಿ ಅಧ್ಯಯನ ಮಾಡಿ ಒಂದು ಅಪೂರ್ವದಂತ ಸಾಧನೆ ಮಾಡಿರುವಂತ ಪ್ರೊಫೆಸರ್ ಎ ಎಚ್ ರಾಜ ಸಾಹೇಬರು ಕೊಡುಗೆ ಮರೆಯುವಂತಿಲ್ಲ ಎಂದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಚಾರ್ಯ ಡಾಕ್ಟರ್ ಪಿ ವಿಠ್ಠಲರೆಡ್ಡಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಪ್ರೊಫೆಸರ್ ಎಸ್.ಹೆಚ್ ಖಾದ್ರಿ ಸ್ವಾಗತಿಸಿದರು ಸಸ್ಯಶಾಸ್ತ್ರದ ವಿಭಾಗದ ಮುಖ್ಯಸ್ಥರಾದ ಡಾ. ಪೂಜಾ ಸೂರ್ಯವಂಶಿ ಕಾರ್ಯಕ್ರಮ ನಿರೂಪಿಸಿದರು ನಿವೃತ್ತ ಪ್ರಾಚಾರ್ಯ ಡಿ.ಜೆ ಶೆಳ್ಕೆ ಕೊನೆಯಲ್ಲಿ ವಂದಿಸಿದರು.

# ಮೊಹರಂ ಹಬ್ಬ ಶಾಂತಿಯುತವಾಗಿ ಆಚರಿಸಿ:ಬಾಷುಮಿಯಾ



ಮಲ್ಲಮ್ಮ ನುಡಿ ವಾರ್ತೆ

ಚಿಟಗುಪ್ಪ:– ಹಿಂದೂ–ಮುಸ್ಲಿಂ ಭಾವೈಕ್ಯತೆ ಹಾಗೂ ಸೌಹಾರ್ದತೆಗೆ ಹೆಸರಾಗಿರುವ ಮೊಹರಂ ಹಬ್ಬವನ್ನು ಎಲ್ಲರೂ ಶಾಂತಿಯುತವಾಗಿ ಆಚರಿಸಬೇಕೆಂದು ಪಟ್ಟಣದ ಪೊಲೀಸ್ ಠಾಣೆ ಆವರಣದಲ್ಲಿ ಪಿಎಸ್ಐ ಬಾಷುಮಿಯಾ ಕೊಂಚೂರ್ ಅವರ ಅಧ್ಯಕ್ಷತೆಯಲ್ಲಿ ಹಮ್ಮಿಕೊಂಡಿದ್ದ ಶಾಂತಿ ಸಭೆಯಲ್ಲಿ ಮಾತನಾಡುತ್ತ ತಿಳಿಸಿದರು. ಮೊಹರಂ ಹಬ್ಬವು 10 ದಿನಗಳ ವರೆಗೆ ನಡೆಯುತ್ತಿದ್ದು. ಕೆಲ ಕಿಡಿಗೇಡಿಗಳು ಸಾಮಾಜಿಕ ಜಾಲತಾಣಗಳಲ್ಲಿ ಪ್ರಚೋದನಕಾರಿ ಪೋಸ್ಟಗಳನ್ನ ಹರಿಬಿಟ್ಟು ಸಮಾಜದಲ್ಲಿ ಶಾಂತಿ ಕೆಡಿಸುವ ಪ್ರಯತ್ನ ಮಾಡುತ್ತಾರೆ ಇಂತಹ ಸಮಾಜ ಘಾತುಕರ ಸಾಮಾಜಿಕ ಜಾಲತಾಣಗಳ ಮೇಲೆ ಸೂಕ್ತ ನಿಗಾವಹಿಸಲಾಗುವುದು ಹಾಗೂ ತಪ್ಪು ಕಂಡು ಬಂದರೆ ಅಂತವರ ಮೇಲೆ ಕಾನೂನು ಪ್ರಕಾರ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

### ಶಾಂತಿ ಸಭೆ

ಯಾರು ಕೂಡ ಅಹಿತಕರ ಘಟನೆಗೆ ಆಸ್ಪದ ನೀಡಬಾರದು ಎಂದು ಎಚ್ಚರಿಕೆ ನೀಡಿದರು. ಮೊಹರಂ ಆಚರಣೆ ವೇಳೆ ಜನದಟ್ಟಣೆ ಉಂಟಾಗದಂತೆ ನೋಡಿಕೊಳ್ಳಬೇಕು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಸೇರುವ ಸೂಕ್ಷ್ಮ ಪ್ರದೇಶಗಳಲ್ಲಿ ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಸಿ ಅನುಮಾನಾಸ್ಪದ ವ್ಯಕ್ತಿಗಳು ಹಾಗೂ ವಾಹನಗಳ ಮೇಲೆ ಸೂಕ್ತ ನಿಗಾ ವಹಿಸಲಾಗುವುದು ಸಮಾಜದಲ್ಲಿ ಶಾಂತಿ ಸುವ್ಯವಸ್ಥೆ ಕೈಗೊಳ್ಳಲು ಇಲಾಖೆಯೊಂದಿಗೆ ನಾಗರಿಕರ ಸಹಕಾರ ಅಗತ್ಯವಿದೆ ಪ್ರತಿಯೊಂದಕ್ಕೂ ಕಾನೂನು ಇದೆ, ಯಾರು ಸಹ ಕಾನೂನು ಮೀರಿ ಹೋಗಬೇಡಿ, ಯಾರು ಸಹ ಗೊಂದಲಕ್ಕೆ ಇಡಾಗಬೇಡಿ ಮನುಷ್ಯನ ಭಾವನೆ ಹಾಗೂ ಮನುಷ್ಯನ ವಿಚಾರಗಳು ನೂರಾರು ಇರಬಹುದು ಆದರೆ ಕಾನೂನಿಗೆ ಸರ್ವರು ತಲೆ ಭಾಗಬೇಕು. ಎಂದರು. ಪ್ರಮುಖರಾದ ಮಲ್ಲಿಕಾರ್ಜುನ ಪಾಟೀಲ್, ಮಹಮ್ಮದ್ ಅಸ್ಲಾಂಮಿಯ, ರಾಶೀದ್ ಪಟೇಲ್, ಅಮೀತ ತಗಲೂರ್ ಸೇರಿದಂತೆ ಇತರರು ಮಾತನಾಡಿ, ತಾಲ್ಲೂಕಿನಲ್ಲಿ ಮೊಹರಂ ಹಬ್ಬವನ್ನು ಪ್ರತಿ ವರ್ಷ ಎಲ್ಲ ಸಮುದಾಯದವರು ಒಗ್ಗೂಡಿ ಅತಿ ವಿಜೃಂಬಣೆಯಿಂದ ಆಚರಣೆ ಮಾಡುತ್ತಾ ಬಂದಿದ್ದು ಈ ವರ್ಷವೂ ಕೂಡ ಯಾವುದೇ ರೀತಿಯ ಅಹಿತಕರ ಘಟನೆಗೆ ಆಸ್ಪದ ನೀಡದೆ ನಾವೆಲ್ಲರೂ ಒಗ್ಗಟ್ಟಾಗಿ ಶಾಂತ ರೀತಿಯಲ್ಲಿ ಅಚ್ಚು ಕಟ್ಟಾಗಿ ಹಬ್ಬ ಆಚರಣೆ ಮಾಡುತ್ತೇವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಪುರಸಭೆ ಸದಸ್ಯರು, ಪಟ್ಟಣದ ಪ್ರಮುಖರು, ಹಾಗೂ ಪೊಲೀಸ್ ಠಾಣೆ ವ್ಯಾಪ್ತಿಯ ಗ್ರಾಮಗಳ ಗ್ರಾಮಸ್ಥರು, ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಜಾಹೀರಾತಿಗಾಗಿ ಇಂದೇ ಸಂಪರ್ಕಿಸಿ: 8971850542

## ನಗರದ ಪೊಲೀಸ್ ಠಾಣೆಯ ವತಿಯಿಂದ ತಂಬಾಕು ಮತ್ತು
# ಮಾಧಕ ವಸ್ತು ಸೇವನೆ ನಿಷೇಧ ಜಾಗೃತಿ ಅಭಿಯಾನ




(ವರದಿ. ಡಿ. ಕೆ. ಪ್ರಹ್ಲಾದ)

ಮಲ್ಲಮ್ಮ ನುಡಿ ವಾರ್ತೆ

ಬಸವಕಲ್ಯಾಣ :– ಜೂ 28 ನಗರದ ಎಸ್ ಎಸ್ ಕೆ ಬಸವೇಶ್ವರ ಕಲಾ ವಿಜ್ಞಾನ ವಾಣಿಜ್ಯ ಸ್ನಾತಕ ಮತ್ತು ಸ್ನಾತ–ಕೋತ್ತರ ಮಹಾವಿದ್ಯಾಲಯದ ಸಂಯುಕ್ತಾಶ್ರಯದಲ್ಲಿ ಇಲ್ಲಿನ ಪೋಲಿಸ್ ಠಾಣೆ ವತಿಯಿಂದ " ತಂಬಾಕು ಮತ್ತು ಮಾಧಕ ವಸ್ತು ಸೇವನೆ ನಿಷೇಧ ಜಾಗೃತಿ ಅಭಿಯಾನ ಕಾರ್ಯಕ್ರಮ ಜರುಗಿ–ತು. ಅತಿಥಿಗಳಾಗಿ ಸಿ.ಪಿ.ಐ ಅಲಿಸಾಬ ಅವರು ಮಾತನಾಡಿ ಸಮಾಜದಲ್ಲಿ ಜನರು ಕೆಟ್ಟ ಚಟಗಳಿಗೆ ಬಲಿಯಾಗುತ್ತಿದ್ದಾರೆ. ಅದರಯಲ್ಲಿಯೂ ವಿದ್ಯಾರ್ಥಿಗಳು ಈ ತಂಬಾಕು, ನಿಕೋಟಿನ್, ಸಿಗರೇಟು ,ಮಾಧಕ ವಸ್ತು ಸೇವನೆ ಮಾಡುತ್ತಿದ್ದಾರೆ. ಇಂತಹ ದುಚ್ಚಟಗಳಿಗೆ ಬಲಿ ಆಗಬಾರದು ಎಂದು ತಿಳಿಸಿದರು. ಮುಖ್ಯ ಅತಿಥಿಗಳಾಗಿ ಡಿವೈಎಸ್ಪಿ ನ್ಯಾಮಗೌಡ ಅವರು ಮಾತನಾಡಿ ವಿಶ್ವದಲ್ಲಿ ಅತಿ ಹೆಚ್ಚು ಯುವಕರನ್ನು ಹೊಂದಿರುವ ದೇಶ ನಮ್ಮದಾಗಿದೆ, ನಮ್ಮ ದೇಶದ ಯುವ ಪೀಳಿಗೆಗೆ ದಾರಿ ತಪ್ಪಿಸಿದರೆ ಸಾಕು ನಮ್ಮ ದೇಶ ತಾನಾಗಿಯೇ ಪತನವಾಗುತ್ತದೆ ಎಂದರು ನಮ್ಮ ಶತ್ರು ರಾಷ್ಟ್ರಗಳು ಯೋಜನೆ ರೂಪಿಸುತ್ತಿವೆ ಆದ್ದ–ರಿಂದ ನಿಮ್ಮ ಯುವ ಪಿಳಿಗೆ ಎಚ್ಚರಿಕೆಯಿಂದ ಇರಬೇಕು.

ಈ ಮಾಧಕ ವಸ್ತುಗಳ ಸೇವನೆಯಿಂದ ಭಾರತದಲ್ಲಿ ದಿನಕ್ಕೆ 10000 ಸಾವಿರ ಜನ ಬಲಿಯಾಗುತ್ತಿದ್ದಾರೆ. ಮಾಧಕ ವಸ್ತುಗಳ ಸೇವನೆಯಿಂದ ಮನುಷ್ಯನ ಮೆದುಳು ಮತ್ತು ನರವ್ಯೂಹದ ಮೇಲೆ ಪ್ರಭಾವ ಬೀರುತ್ತದೆ. ಮಾಧಕ ವಸ್ತು ತಯಾರಿಕೆ ಮತ್ತು ಮಾರಾಟ ಮಾಡುವಾಗ ಸಿಕ್ಕಿ ಬಿದ್ದರೆ ಅಂತಹವರಿಗೆ 20 ವರ್ಷ ಜೈಲು ಶಿಕ್ಷೆ ವಿಧಿಸಲಾಗುತ್ತದೆ ಎಂದು ತಿಳಿಸಿದರು. ಧನಾತ್ಮಕ ಚಿಂತನೆಗಳು ನಮ್ಮ ವ್ಯಕ್ತಿತ್ವ ವಿಕಸನಕ್ಕೆ ಪೂರಕವಾಗಿವೆ . ಆದ್ದರಿಂದ ಋಣಾತ್ಮಕ ಅಂಶಗಳಿಂದ ದೂರ ಇರಬೇಕು ಎಂದು ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎಸ್ ಎಸ್ ಕೆ ಬಸವೇಶ್ವರ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ.ಶಿವಕುಮಾರ ಪಾಟೀಲ ಅವರು ಮಾತನಾಡಿ ಎಲ್ಲಾ ಮಾಧಕ ವಸ್ತುಗಳು ಮಿತವಾಗಿ ಬಳಸಿದರೆ ಔಷಧಿ ಗುಣವುಳ್ಳವಾಗಿವೆ. ಆದರೆ ಅದು ಹೆಚ್ಚಿನ ಮಟ್ಟದಲ್ಲಿ ಸೇವಿಸಿದರೆ ಅದು ಮಾಧಕ ವಸ್ತುವಾಗುತ್ತದೆ. ಎಲ್ಲರೂ ಕಾನೂನು ಪಾಲಿಸೋಣ ,ತಂಬಾಕು ಮತ್ತು ಮಾಧಕ ವಸ್ತು ಮುಕ್ತ ಸಮಾಜ ನಿರ್ಮಿಸೋಣ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ಪ್ರೊ.ಅರ್.ಡಿ.ಬಾಲ್ಕಿಲೆ. ಪ್ರೊ. ವಿಠೋಬಾ ಡೊಣ್ಣೆಗೌಡರ್, ರಾಚಯ್ಯ ಮಠಪತಿ , ಸಿದ್ರಾಮಪ್ಪ ಮಾಲಿಪಾಟೀಲ, ಗ್ರಂಥಪಾಲಕರಾದ ಸೂರ್ಯಕಾಂತ ನಾಸೆ, ನಿಲೇಶ ಟೊಂಪೆ, ಇಂದ್ರಜಿತ್ ರೆಡ್ಡಿ , ಭೀಮಾಶಂಕರ ಬಿ. ಶಿವಾನಂದ.ಬಿ. ಮಹಾದೇವ. ಡಿ. ವೈಶಾಲಿ , ಶಿಲ್ಪಾ , ಪೂಜಾ, ಶ್ರೀ ಶರಣಬಸವೇಶ್ವರ ವಿದ್ಯಾವರ್ಧಕ ಸಂಘದ ಅಡಿಯಲ್ಲಿ ಬರುವ ಅಂಗ ಸಂಸ್ಥೆಯ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳು ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ಎನ್ ಸಿ ಸಿ ಅಧಿಕಾರಿಗಳಾದ ಬೀಮಾಶಂಕರ ಪೂಜಾರಿ. ಸ್ವಾಗತಿಸಿದರು. ಕು. ಭಾಗ್ಯ ಶ್ರೀ ಮತ್ತು ಸಂಗಡಿಗರು ಪ್ರಾರ್ಥನೆ ಗೀತೆ. ಸುಮನ್ ರೆಡ್ಡಿ ನಿರೂಪಿಸಿ ವಂದಿಸಿದರು.

**IN THE COURT OF SENOIR CIVIL JUDGE AND**
**JMFC COURT AT HUMNABAD**
**Crl. Misc No. 76/2025**

1. Nilabai W/o late Prabhu Age 53 years, occu: Agril,
2. Rajkumar S/o late Prabhu Age 33 years, occu: Agril,

Both R/o Chowki Thanda(A), Tq, Chitaguppa, Dist, Bidar.

3. Majula D/o late Prabhu Age 31 years, occu: Agril,

R/o Chowki Thanda(A), Tq, Chitaguppa, Dist, Bidar

Now at Govind Thanda, Tq, Chitaguppa, Dist, Bidar

...Petitioner.

**- - V/S- -**

The Thasildar Chitaguppa.

...Respondents.

Petition Under section 13(3) Birth & Death Registration Act-1969

**PAPER PUBLICATION**

Whereas the above named petitioner has filed petition under section 13(3) Birth & Death registration Act-1969, for issue the direction to respondent to give Death certificate of husband of the petitioner's No.1 and father of the petitioner No.2 & 3 by name Prabhu S/o Somla who was died on 10-03-2009, in his house, at Village Chowki Thanda(A), Tq Chitaguppa Dist Bidar.

Hence this paper publication is issued to all concerned persons to file necessary objection if any on 19/07/2025 at 11.00 A.M

Given under my hand seal of the Court on this 25/06/2025

//By Order of the Court //
Chief Ministerial Officer,
Senior Civil Judge & JMFC Court,
Humnabad

# ವಿವಿಧ ಇಲಾಖೆಗಳಿಂದ 106 ಕೋಟಿ ಬಾಕಿ : ಎಂಸಿಎ ಅಧ್ಯಕ್ಷ ಸತೀಶ್ ಸೈಲ್



ಮಲ್ಲಮ್ಮ ನುಡಿ ವಾರ್ತೆ

ಮಂಗಳೂರು:ಜೂ.28:ಲೋಕೋಪಯೋಗಿ,ನಗರ ಪಾಲಿಕೆ ಸೇರಿದಂತೆ ಸರ್ಕಾರದ ವಿವಿಧ ಇಲಾಖೆಗಳಿಂದಜಾಹಿರಾತುಬಾಬ್ತು 106 ಕೋಟಿರು.ಗೂಅಧಿಕ ಮೊತ್ತ ಬರಬೇಕಾಗಿದೆಎಂದುಕರ್ನಾಟಕರಾಜ್ಯವಾಕೆ ೯ಟಿಂಗ್‌ಕಮ್ಯುನಿಕೇಷನ್‌ಅಂಡ್ ಅಡ್ವರ್ಟೈಸಿಂಗ್ ಲಿವಿ ುಟೆಡ್(ಕೆಎಸ್‌ಎಂಸಿಎ)ನಿಗವುದಅಧ್ಯಕ್ಷ, ಕಾರವಾರ ಶಾಸಕ ಸತೀಶ್ ಸೈಲ್‌ಹೇಳಿದ್ದಾರೆ.

ಅವರು ಶುಕ್ರವಾರ ಮಂಗಳೂರಿನಯೆಯ್ಯಾಡಿಯಲ್ಲಿ ಕೆಎಸ್‌ಎಂಸಿಎ ಸ್ಥಳಾಂತರಿತ ಮಂಗಳೂರುಶಾಖೆಯಉದ್ಘಾಟನೆ ನೆರವೇರಿಸಿ ಬಳಿಕ ಸುದ್ದಿಗೋಷ್ಠಿಯಲ್ಲಿಮಾತನಾಡಿದರು. ಇಂಡಿಯನ್ ನ್ಯೂಸ್ ಪೇಪರ್ ಸೊಸೈಟಿ(ಐಎನ್‌ಎಸ್)ನಿಯಮ ಪ್ರಕಾರಸರ್ಕಾರಿಜಾಹಿರಾತುಗಳನ್ನು ಪತ್ರಿಕಗಳಿಗೆ ನೀಡಿದ 60 ದಿನಗಳಲ್ಲಿ ಕೆಎಸ್‌ಎಂಸಿಎ ಬಿಲ್‌ಪಾವತಿಸುತ್ತದೆ. ಆದ–ರೆ ಕೆಎಸ್‌ಎಂಸಿಎ ಬಳಿಕ ಅದನ್ನು ಸರ್ಕಾರದಿಂದ ಪಡೆಯುವುದುಕ್ರಮ.2022ರಿಂದ ವಸಾಲಿಗೆ ಬಾಕಿ ಮೊತ್ತಇರುವ ಬಗ್ಗೆ ಸರ್ಕಾರದ ಗಮನಕ್ಕೆ ತರಲಾಗಿದೆ.ಇಲ್ಲಿವರೆಗೆ 106 ಕೋಟಿರು.ಗೂಅಧಿಕ ಮೊತ್ತ ಬರಬೇಕಾಗಿದೆ. ಮೊತ್ತ ಬಾಕಿ ಇರಿಸಿರುವ ಇಲಾಖೆಗಳಿಂದ ಪಾವತಿಗೆಕ್ರಮ ಕೈಗೊಳ್ಳುವಂತೆ ಕೋರಿ ಜಿಲ್ಲಾಧಿಕಾರಿಗಳು, ಸಹಾಯಕಕಮಿಷನರ್‌ಗಳಿಗೆಪತ್ರ ಮೂಲಕಕೋರಲಾಗಿದೆಎಂದರು. ಮಾಧ್ಯಮಗಳಿಗೆಸರ್ಕಾರದಇಲಾಖೆಗಳು ನೀಡುವಜಾಹಿರಾತು ಮೊತ್ತದಲ್ಲಿ ಶೇ.15ರಷ್ಟುಕಮಿಷನ್‌ನ್ನುಕೆಎಸ್‌ಎಂಸಿಎ ಪಡೆದುಕೊಳ್ಳುತ್ತದೆ. ಪತ್ರಿಕೆಗಳಿಗೆ ಪ್ರಯೋಜನವಾಗುವಸಲುವಾಗಿ ಈಕಮಿಷನ್(ಏಜೆಂಟ್‌ಚಾರ್ಜ್) ಮೊತ್ತವನ್ನುಶೇ.10ಕ್ಕೆ ಇಳಿಸುವ ಬಗ್ಗೆಚಿಂತಿಸಲಾಗುತ್ತಿದೆಎಂದರು. ಜಾಹಿರಾತುಮತ್ತುಈವೆಂಟ್‌ಗಳನ್ನು ಕೆಎಸ್‌ಎಂಸಿಎಆಯೋಜಿಸುತ್ತಿದೆ. ಈವೆಂಟ್‌ಆಯೋಜನೆಯಲ್ಲಿ4ಜಿ ವಿನಾಯ್ತಿಯನ್ನು25ಲಕ್ಷರು.ನಿಂದ 200ಲಕ್ಷರು.ಗೆವಿಸ್ತರಿಸಲಾಗಿದೆ. ವಿವಿಧ ಸ್ಟಾರ್ಟ್‌ಅಪ್ ಗಳ ವೃತ್ತಿಪರರಜೊತೆ ಹಾಗೂ ವಿವಿಧಕಂಪನಿಗಳು,ಎಂಎಸ್‌ಎಂಇ, ಬ್ಯಾಂಕ್‌ಗಳು,ಪಿಎಸ್‌ಯುಗಳು, ಗ್ರಾಹಕರೊಂದಿಗೆಚರ್ಚಿಸಲಾಗುತ್ತಿದೆ. ಇವುಗಳ ಜೊತೆ ಸಂಪರ್ಕ ಸೇತುವೆಯಾಗಿ ಹಾಗೂ ತಂತ್ರಜ್ಞಾನಪ್ಲಾಟ್‌ಫಾರಂ ಆಗಿ ಕೆಎಸ್‌ಎಂಸಿಎ ವೇದಿಕೆ ಒದಗಿಸುತ್ತದೆಎಂದರು.17 ಕೋಟಿರು. ಲಾಭ:ವಾಣಿಜ್ಯ ಮತ್ತುಕೈಗಾರಿಕಾಇಲಾಖೆಂುಅಧೀನದಲ್ಲಿ 1972ರಲ್ಲಿ ಕೆಎಸ್‌ಎಂಸಿಎಅಸ್ತಿತ್ವಕ್ಕೆಬಂದಿದೆ. 2002ರಲ್ಲಿ ಹುಬ್ಬಳ್ಳಿಯಲ್ಲಿ ತನ್ನ ಪ್ರಥಮ ಶಾಖೆಆರಂಭಿಸಿದ್ದು, ಪ್ರಸ್ತುತರಾಜ್ಯದಲ್ಲಿ15ಶಾಖೆಹಾಗೂ ಮುಂಬೈ,ದೆಹಲಿಯಲ್ಲಿಶಾಖೆಗಳು ಕಾರ್ಯನಿರ್ವಹಿಸುತ್ತಿವೆ.2023–24ರಲ್ಲಿ 412.12 ಕೋಟಿರು. ವಹಿವಾಟುನಡೆಸಲಾಗಿದ್ದು, 2024–25ನೇ 431.81 ಕೋಟಿರು.ವಹಿವಾಟು ನಡೆಸಿದೆ. ಕಳೆದಸಾಲಿನಲ್ಲಿ 17 ಕೋಟಿರು. ಲಾಭಗಳಿಸಿದೆ ಎಂದರು.ಕಳೆದ 5 ವರ್ಷಗಳಲ್ಲಿ ಸಿಎಸ್‌ಆರ್ ನಿಧಿಯಡಿ 285.37 ಲಕ್ಷರು. ವೆಚ್ಚಮಾಡಿದೆ.ಮುಖ್ಯಮಂತ್ರಿಗಳ ಪರಿಹಾರನಿಧಿಗೆವಾರ್ಷಿಕತಲಾ1 ಕೋಟಿರು.ದೇಣಿಗೆನೀಡಿದೆ.ಪ್ರಸಕ್ತ ಸಾಲಿನಲ್ಲಿಕಂಪನಿಯ ಲಾಭದಲ್ಲಿ 5.28 ಕೋಟಿ ರು.ಗಳ ಲಾಭಾಂಶವನ್ನುಸರ್ಕಾರಕ್ಕೆ ಸಂದಾಯ ಮಾಡಲಾಗಿದೆ. ವಿಶೇಷಲಾಭಾಂಶ 3 ಕೋಟಿರು. ನೀಡಲುಉದ್ದೇಶಿಸಲಾಗಿದೆ ಎಂದರು.ಎಂಸಿಎ ಭವನ ನಿರ್ಮಾಣ:ಸಂಸ್ಥೆಗೆ ವಿವಿಧ ಜಿಲ್ಲೆಗಳಲ್ಲಿ ಹಂಚಿಕೆ, ನೋಂದಣಿಯಾಗಿರುವ 12 ನಿವೇಶನಗಳಲ್ಲಿಎಂಸಿಎ ಭವನ ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ. ಈ ಸಂಸ್ಥೆಗೆ ಕೆಐಎಡಿಬಿಯಿಂದಬೆಂಗಳೂರಿನಲ್ಲಿ ಹಂಚಿಕೆಯಾಗಿರುವ 1 ಎಕರೆ–ಕೈಗಾರಿಕಾ ಭೂಮಿಲ್ಲಿ ಮುದ್ರಣ ಮತ್ತು ಐಟಿ,ಐಟಿಇಎಸ್‌ಚಟುವಟಿಕೆಯಕಾರ್ಯಯೋಜನೆ ಸಿದ್ಧಪಡಿಸಲಾಗುತ್ತಿದೆ ಎಂದರು.ಮಂಗಳೂರು ಶಾಖೆ 2009ರಲ್ಲಿ ಸ್ಥಾಪನೆಯಾಗಿದ್ದು, ಕಾವೂರಿನಲ್ಲಿಇಲ್ಲಿನ ಪ್ರಥಮ ಶಾಖೆಆರಂಭಿಸಲಾಗುತ್ತಿದ 'ಎಂದರು.ಸಂಸ್ಥೆಯಎಂಡಿ ಮೊಹಮ್ಮದ್‌ಅತಿಕುಲ್ಲಾಶರೀಫ್, ಡಿಜಿಎಂ ನಂದೀಶ್, ಶಾಖಾ ಪ್ರಬಂಧಕರಾಘವೇಂದ್ರಶಾಸ್ತ್ರಿ, ವಿಶೇಷಅಧಿಕಾರಿಅನುರಾಧಇದ್ದರು.

# ಗಾಣಗಾಪುರ ದತ್ತಾತ್ರೇಯ ಸನ್ನಿಧಿಯಲ್ಲಿ ಬೀದಿ ವ್ಯಾಪಾರಿಗಳ ಸಂಘದಿಂದ ಪ್ರತಿಭಟನೆ




ಮಲ್ಲಮ್ಮ ನುಡಿ ವಾರ್ತೆ

ಅಫಜಲಪುರ:ಜೂ.28:ತಾಲೂಕಿನ ದೇವಲಗಾಣಗಾಪುರದತ್ತಾತ್ರೇಯರ ದೇವಸ್ಥಾನದ ಎದುರುಗಡೆ ಬೀದಿ ವ್ಯಾಪಾರ ಮಾಡುತ್ತಿರುವ ವ್ಯಾಪಾರಿಗಳಸಂಘದಿಂದಗ್ರಾಮ ಪಂಚಾಯತಿ ಎದುರುಗಡೆ ಪ್ರತಿಭಟನೆ ನಡೆಯಿತು.

ನಂತರಮಾತನಾಡಿದವ್ಯಾಪಾರಿ ದಿಗಂಬರ್ ಕಾಡಪ್ಪಗೋಳ ಹಲವಾರು ವರ್ಷಗಳಿಂದ ತಮ್ಮ ಉಪಜೀವನಕ್ಕಾಗಿ ದತ್ತನ ದೇವಸ್ಥಾನದ ಎದುರುಗಡೆ ಸಣ್ಣ ಪುಟ್ಟ ವ್ಯಾಪಾರಗಳನ್ನು ಮಾಡುತ್ತ ಬಂದಿದ್ದವೆ.ಗ್ರಾಮ ಪಂಚಾಯತಿ ಹಾಗೂ ಜಿಲ್ಲಾಡಳಿತ,ದೇವಸ್ಥಾನ ಆಡಳಿತಮಂಡಳಿ ಏಕಾಏಕಿಂ–ುಾಗಿ ಅಂಗಡಿಗಳನ್ನು ತೆರುವುಗೊಳಿಸಿದ್ದಾರೆ.ನಮಗೆನಿಗದಿತ ಸ್ಥಳದಲ್ಲಿ ವ್ಯಾಪಾರ ಮಾಡಲು ಅನುಕೂಲ ಮಾಡಿಕೊಡದೇ ವ್ಯಾಪಾರ ಮಾಡುವ ಸ್ಥಳದಿಂದ ತೆರುವು ಮಾಡಿದ್ದಾರೆ.ಇದೆ ವ್ಯಾಪಾರ ನಂಬಿಕೊಂಡ ಸಂಘ ಸಂಸ್ಥೆಗಳಲ್ಲಿ ಸಾಲ ಮಾಡಿ ಜೀವನ ಮಾಡುತ್ತಿದ್ದೆವೆ. ಅದರಲ್ಲಿ ಉಳಿದ ಅಲ್ಪಸ್ವಲ್ಪ ಹಣದಲ್ಲಿ ಕುಟುಂಬ ನಿರ್ವಹಣೆ ಮಾಡುತ್ತಿದ್ದು,ಕೂಡಲೇಜಿಲ್ಲಾಡಳಿತ ಮತ್ತುಗ್ರಾಮಾಡಳಿತಅಧಿಕಾರಿಗಳು ಬಡವ್ಯಾಪಾರಿಗಳಿಗೆಅನುಕೂಲ ಮಾಡಿಕೊಡಬೇಕು ಎಂದರು. ಒಂದು ವೇಳೆ ವ್ಯಾಪಾರಿಗಳಿಗೆ ಇದೆ ರೀತಿಯ ಧೋರಣೆ ಮುಂದುವರೆಸಿದರೆ ಉಗ್ರ ಹೋರಾಟ ಮಾಡಲಾಗುವುದು ಎಂದರು.

ನಂತರ ಮಾತನಾಡಿದ ಇನ್ನೋರ್ವ ಮಹಿಳಾ ವ್ಯಾಪಾರಿ ಸಾವಿತ್ರಿಕರಜಗಿ ಮಹಿಳೆಯರು ತಮ್ಮ ಜೀವನೋಪಾಯಕ್ಕಾಗಿ ದೇವಸ್ಥಾನದ ಎದುರುಗಡೆ ಹೂವು ಹಣ್ಣು ಮಾರಿಕೊಂಡು ಜೀವನ ಸಾಗಿಸುತ್ತಿದ್ದೆವು. ಆದರೆ ಅಧಿಕಾರಿಗಳು ಹೀಗೆ ಏಕಾಏಕಿಯಾಗಿನಮ್ಮ ವ್ಯಾಪಾರಿ ನಿಲ್ಲಿಸಿರುವುದು ನಮಗೆ ತೊಂದರೆಯಾಗುತ್ತಿದೆ.ನಾವು ಟೆಂಗೂ ಹೂವು ಮಾರಾಟ ಮಾಡುವುದನ್ನುಗಮನಿಸಿದ ಪೊಲೀಸರು ದಂಢವನ್ನು ವಿಧಿಸುತ್ತಿದ್ದಾರೆ.ಕೂಡಲೇ ಇದೆಲ್ಲವನ್ನು ನಿಲ್ಲಿಸಿ ಬೀದಿ ವ್ಯಾಪಾರಿಗಳಿಗೆವ್ಯಾಪಾರಮಾಡಲು ಅನುವು ಮಾಡಿಕೊಡಬೇಕು ಎಂದು ಮನವಿ ಮಾಡಿದರು.

ನಂತರ ಮಾತನಾಡಿದ ವ್ಯಾಪಾರಿ ದತ್ತು ದೇವರಮನಿ ಗ್ರಾಮ ಪಂಚಾಯತಿ ಜಾಗದಲ್ಲಿ ವ್ಯಾಪಾರ ಮಾಡುವ ಜನರ ಮೇಲೆ ಈ ರೀತಿಯ ಧೋರಣೆ ಎಷ್ಟರ ಮಟ್ಟಿಗೆ ಸರಿ.ದೇವಸ್ಥಾನ ಅಭಿವೃದ್ಧಿಗಾಗಿ ಮಾಸ್ಟರ್ ಪ್ಲ್ಯಾನ್ ಮಾಡಿರುವುದಕ್ಕೆನಮ್ಮ ವಿರೋಧವಿಲ್ಲ.ಆದರೆ ಬೀದಿ ಬದಿಯಲ್ಲಿ ಅಲ್ಪಸ್ವಲ್ಪ ಜಾಗದಲ್ಲಿ ಜೀವನ ಮಾಡುವ ನಮಗೆ ಬೇರೆಡೆ ಜಾಗ ಕಲ್ಪಿಸಿಕೊಟ್ಟರೆ ಅನುಕೂಲವಾಗುತ್ತಿತ್ತು ಎಂದರು.ನಂತರ ಗ್ರಾಮ ಪಂಚಾಯತಿಎದುರುಗಡೆನಿರಂತರ ಧರಣಿ ಮುಂದುವರೆಯಿತು.

ಇದೆ ಸಂದರ್ಭದಲ್ಲಿ ಬೀದಿ ವ್ಯಾಪಾರಿಗಳಾದ ದಿಗಂಬರ ಕಾಡಪ್ಪಗೋಳ,ದತ್ತು ದೇವರಮನಿ,ಸೋಪ್ಪಾ ತಾಂಬೋಳಿ,ರಾಜುಬಾಯಿ ಜಮಾದಾರ,ಪಿಂಟುಘತ್ತರಗಿ,ಸಾವಿತ್ರಿ ಕರಜಗಿ,ಗುರುಬಾಯಿಹರಳಯ್ಯ,ಯಲ್ಲಪ್ಪ ಅಳ್ಳಗಿ, ಖಾಜಾಸಾಹೇಬ್ ಚೌಧರಿ,ದಿಗಂಬರತಳವಾರ,ಸುರೇಶ ಮಿಠಾ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಕರ್ನಾಟಕ ಛಾಯಾರತ್ನ ಪ್ರಶಸ್ತಿ ಪುರಸ್ಕೃತರವರಿಗೆ ಕನ್ನಡ ಸೇನೆ ಸಂಘಟನೆಯಿಂದ ಸನ್ಮಾನ



ಬೀದರ. ಜೂ. 28 : ಜಿಲ್ಲೆಯ ಪತ್ರಿಕಾ ಛಾಯಾಗ್ರಾಹಕ ಗೋಪಿಚಂದ್ ತಾಂದಳೆ ಅವರಿಗೆ ಬೆಂಗಳೂರಿನ ಅರಮನೆ ಮೈದಾನದಲ್ಲಿ ಪತ್ರಿಕಾ ಕ್ಷೇತ್ರಕ್ಕೆ ನೀಡಿದ ಕೊಡುಗೆಗಾಗಿ ಕರ್ನಾಟಕ ಛಾಯಾರತ್ನ ಪ್ರಶಸ್ತಿ ಲಭಿಸಿದಕ್ಕಾಗಿ ಇಂದು ಕನ್ನಡ ಸೇನೆ ಸಂಘಟನೆ ವತಿಯಿಂದ ಅವನ್ನು ಸನ್ಮಾನಿಸಿ ಗೌರವಿಸಲಾಯಿತು.

ಬೀದರ ಜಿಲ್ಲೆಯ ಪತ್ರಿಕಾ ಛಾಯಾಗ್ರಾಹಕರಾದ ಗೋಪಿಚಂದ ತಾಂದಳೆ ಅವರು 2 ದಶಕ್ಕೂ ಹೆಚ್ಚು ಪತ್ರಿಕಾರಂಗದಲ್ಲಿ ಸೇವೆ ಸಲ್ಲಿಸಿದ್ದಕ್ಕಾಗಿ ಹಾಗೂ ಅನೇಕ ಐತಿಹಾಸಿಕ ಸ್ಮಾರಕಗಳ ಫೋ–ಟೋ ತೆಗೆದು ಅವುಗಳ ವೈಶಿಷ್ಟ ??ತೆಯನ್ನು ಜನರಿಗೆ ಪರಿಚಯಿಸಿದ ಶ್ರೇಯಸ್ಸು ಅವರಿಗೆ ಸಲ್ಲಿಸುತ್ತದೆ ಅದಕ್ಕಾಗಿ ಅವರನ್ನು ಆಯ್ಕೆ ಮಾಡಿ ಕರ್ನಾಟಕ ಛಾಯಾರತ್ನ ಪ್ರಶಸ್ತಿಗೆ ಭಾಜನರಾಗಿರುವುದು ಕಲ್ಯಾಣ ಕರ್ನಾಟಕ ಭಾಗಕ್ಕೆ ಸಂದ ವಿಶೇಷ ಗೌರವವಾಗಿದೆ ಎಂದು ಕನ್ನಡ ಸೇನೆ ರಾಜ್ಯ ಉಪಾಧ್ಯಕ್ಷರಾದ ರವಿಸ್ವಾಮಿ ನಿರ್ಣಾ ಅವರು ಮಾತನಾಡಿದ್ದರು. ಈ ಸಂದರ್ಭದಲ್ಲಿ ಕನ್ನಡ ಸೇನೆ ಜಿಲ್ಲಾಧ್ಯಕ್ಷರಾದ ಸುಭಾಷ ಕೆನಾಡೆ,ತಾಲೂಕಾ ಅಧ್ಯಕ್ಷರಾದ ರಾಜಶೇಖರ ಮಂಗಲಪೇಟ ಹಾಗೂ ಜಿಲ್ಲಾ ಕಾರ್ಯದರ್ಶಿ ರಮೇಶಧೋಳಉಪಸ್ಥಿತರಿದ್ದರು.

# ಕು.ಶಿವಾನಿ ಸ್ವಾಮಿಯ ಅಭಿನಂದನಾ ಸಮಾರಂಭ ಇಂದು




ಬೀದರ.ಜೂ.28:ಇಂದು ಭಾನುವಾರ ಸಾಯಂಕಾಲ 6 ಗಂಟೆಗೆ ನಗರದ ಲಾಡಗೇರಿ ಹಿರೇಮಠ ಸಂಸ್ಥಾನದಲ್ಲಿ ಬೇಡ ಜಂಗಮ ಸಮಾಜದ ವತಿಯಿಂದ ಇತ್ತಿಚೀಗೆ ಝಿ ಕನ್ನಡ ಟಿ.ವಿ ವಾಹಿನಿಯಲ್ಲಿ ಸರಿಗಮಪ–21 ಸೀಸನ್ ವಿಜೆತೆ ಕು.ಶಿವಾನಿ ಶಿವದಾಸ ಸ್ವಾಮಿ ಅವರ ಅಭಿನಂದನಾ ಸಮಾರಂಭ ಜರುಗಲಿದೆ.

ಲಾಡಗೇರಿ ಹಿರೇಮಠ ಸಂಸ್ಥಾನದ ಪೂಜ್ಯ ಷ.ಬ್ರ ಗಂಗಾಧರ ಶಿವಾಚಾರ್ಯರು ಸಮಾರಂಭದ ದಿವ್ಯ ಸಾನಿಧ್ಯ ವಹಿಸಲಿದ್ದು,ಹಳ್ಳಿಖೇಡ(ಬಿ) ಚಕ್ಕಮಠದ ಪೂಜ್ಯ ಷ.ಬ್ರ ಶ್ರೀಪತಿ ಪಂಡಿತಾರಾಧ್ಯ ಶಿವಾಚಾರ್ಯರು, ಶಿವಣಿ, ಹಲಬರ್ಗಾ ಹಾಗೂ ಹೈದ್ರಾಬಾದ್ ಶ್ರೀಮಠಗಳ ಅಧಿಪತಿ ಪೂಜ್ಯ ಷ.ಬ್ರ ಹಾವಗಿಲಿಂಗೇಶ್ವರ ಶಿವಾಚಾರ್ಯರು ನೇತೃತ್ವ ವಹಿಸುವರು.ಹೆಡಗಾಪುರದ ಶ್ರೀ ಶಿವಲಿಂಗೇಶ್ವರ ಸಂಸ್ಥಾನಮಠದ ಪೂಜ್ಯ ಷ.ಬ್ರ ದಾರೂಕಲಿಂಗ ಶಿವಾಚಾರ್ಯರು ಮತ್ತು ಚಾಂಬೋಳ ಶ್ರೀರುದ್ರಮುನೇಶ್ವರ ಸಂಸ್ಥಾನ ಮಠದ ಪೂಜ್ಯ ಷ.ಬ್ರ ಅಭಿನವ ರುದ್ರಮುನಿ ಶಿವಾಚಾರ್ಯರು ಸಮ್ಮುಖ ವಹಿಸುವರು.

ಖ್ಯಾತ ಸಂಗೀತ ವಿದ್ವಾಂಸರಾದ ಡಾ.ರಾಜೇಂದ್ರಸಿಂಗ ಪವಾರ ಮುಖ್ಯ ಅತಿಥಿಗಳಾಗಿ ಭಾಗವಹಿಸುವರು. ಏಕತಾ ಫೌಂಡೇಷನ್ ಅಧ್ಯಕ್ಷ ರವಿಂದ್ರ ಸ್ವಾಮಿ ಗೌರವ ಅತಿಥಿಗಳಾಗಿ ಪಾಲ್ಗೊಳ್ಳುವರು.ಗಾನಯೋಗಿ ಪಂಚಾಕ್ಷರ ಗವಾಯಿ ಸೇವಾ ಸಂಘದ ಅಧ್ಯಕ್ಷರಾದ ಪ್ರೊ. ಎಸ್.ವಿ ಕಲ್ಮಠ ಕಾರ್ಯಕ್ರಮದ ಅಧ್ಯಕ್ಷತೆ ವಹಿಸುವರು.

# ಮಲೆ ಮಹದೇಶ್ವರ ಬೆಟ್ಟದಲ್ಲಿ ಹುಲಿಗಳ ಸಾವು: ಈಶ್ವರ ಖಂಡ್ರೆ ರಾಜೀನಾಮೆಗೆ ಆಗ್ರಹ



ಬೀದರ. ಜೂ. 28 : 'ಚಾಮರಾಜನಗರದ ಮಲೆ ಮಹದೇಶ್ವರ ಬೆಟ್ಟದಲ್ಲಿ ರಾಷ್ಟ್ರ ಪ್ರಾಣಿ ಹುಲಿಗಳು ಸಾವನ್ನಪ್ಪಿದ್ದು, ದೇಶದೆಲ್ಲೆಡೆ ಚರ್ಚೆಯಾಗುತ್ತಿದೆ. ನಿರ್ಲಕ್ಷ್ಯದ ಬಗ್ಗೆ ಪ್ರಶ್ನೆಗಳು ಎದ್ದಿವೆ. ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆಯವರು ಇದರ ಜವಾಬ್ದಾರಿ ಹೊತ್ತು ಕ್ಷಮೆಯಾಚಿಸಿ,ರಾಜೀನಾಮೆ ನೀಡಬೇಕು' ಎಂದು ಕೇಂದ್ರದ ಮಾಜಿಸಚಿವ ಭಗವಂತ ಖೂಬಾ ಆಗ್ರಹಿಸಿದ್ದಾರೆ.


ಹುಲಿಗಳ ಸಾವಿನಿಂದ ರಾಜ್ಯದ ಮಾನ ಹರಾಜಾಗುತ್ತಿದೆ. ಈ ವಿಷಯದ ಬಗ್ಗೆ ಪತ್ರಕರ್ತರು ಕೇಳಿದ ಪ್ರಶ್ನೆಗೆ ಸಚಿವ ಖಂಡ್ರೆ ಉತ್ತರಿಸಲಾಗದೆ, ಪತ್ರಕರ್ತರಿಗೆ ನಿಮ್ಮ ಧೋರಣೆ ಬದಲಾಯಿಸಿಕೊಳ್ಳಿ ಎಂದು ಗುರಾಯಿಸಿ, ತನ್ನ ರಾಕ್ಷಸ ಪ್ರವೃತ್ತಿ ತೋರಿಸಿದ್ದಾರೆ. ಇದನ್ನು ನಿಲ್ಲಿಸಿ ಕ್ಷಮೆಯಾಚಿಸಬೇಕೆಂದು ಶನಿವಾರ ಒತ್ತಾಯಿಸಿದ್ದಾರೆ.

ಅತಿ ಹೆಚ್ಚು ಹುಲಿಗಳನ್ನು ಹೊಂದಿರುವ ದೇಶದ ಎರಡನೇ ರಾಜ್ಯ ಕರ್ನಾಟಕ. ಈ ಖ್ಯಾತಿ ಪಡೆದಿರುವ ರಾಜ್ಯದಲ್ಲಿ ಇಂತಹ ಘಟನೆ ನಡೆದಿದೆ. ಈ ಇಲಾಖೆಯ ಸಚಿವರಾಗಲಿ, ಸರ್ಕಾರವಾಗಲಿ ಇದರ ಹೊಣೆ ಹೊತ್ತಿಲ್ಲ. ಕೇವಲ ತನಿಖೆ ನಡೆಯುತ್ತಿದೆ ಎನ್ನುವ ಬೇಜವಾಬ್ದಾರಿ ಹೇಳಿಕೆ ನೀಡಿ ನುಣುಚಿಕೊಳ್ಳುತ್ತಿದ್ದಾರೆ ಎಂದಿದ್ದಾರೆ. ಇಂತಹದ್ದೊಂದು ದೊಡ್ಡ ದುರಂತ ಸಂಭವಿಸಿದೆ. ಅರಣ್ಯ ಇಲಾಖೆ ವನ್ಯಜೀವಿಗಳ ರಕ್ಷಣೆಯಲ್ಲಿ ವಿಫಲವಾಗಿದೆ. ಈಶ್ವರ ಖಂಡ್ರೆ ಇದರ ಜವಾಬ್ದಾರಿ ಹೊತ್ತು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು. ಖಂಡ್ರೆ ಅಹಂಕಾರ, ಭಂಡತನದಲ್ಲಿ ಎತ್ತಿದ ಕೈ. ಇವರ ಹಾದಿಯಲ್ಲೆ ಅವರ ಇಲಾಖೆಯೂ ಸಾಗುತ್ತಿದೆ ಎಂಬುದು ಈ ಘಟನೆಯಿಂದ ಗೊತ್ತಾಗುತ್ತದೆ ಎಂದು ಟೀಕಿಸಿದ್ದಾರೆ.

ಮುಖ್ಯಮಂತ್ರಿ ಕುರ್ಚಿಗೆ ಕಂಟಕ ಬಂದಾಗಲೆಲ್ಲಾ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಸಂವಿಧಾನ, ಡಾ.ಬಿ.ಆರ್. ಅಂಬೇಡ್ಕರ್, ಬಿಜೆಪಿ ಹಾಗೂ ಆರ್‌ಎಸ್‌ಎಸ್‌ನವರು ನೆನಪಿಗೆ ಬರುತ್ತಾರೆ. ಯಾವುದೋ ಒಂದು ವೇದಿಕೆ ಬಳಸಿಕೊಂಡು, ಅಲ್ಲಿ ಸಂವಿಧಾನದ ನೆನಪು ಮಾಡಿ, ಬಿಜೆಪಿ ಹಾಗೂ ಆರ್‌ಎಸ್‌ಎಸ್‌ನವರಿಗೆ ಬೈದು ನಾನೊಬ್ಬ ಸಮಾಜವಾದಿ, ಜಾತ್ಯತೀತವಾದಿ ಎಂದು ತೋರಿಸಿಕೊಳ್ಳುವ ಕೆಲಸ ಸಿದ್ದರಾಮಯ್ಯನವರು ಮಾಡುತ್ತಾರೆ ಎಂದು ಹೇಳಿದ್ದಾರೆ.

ಮಾಜಿ ಪ್ರಧಾನಿ ಇಂದಿರಾ ಗಾಂಧಿಯವರು ತುರ್ತು ಪರಿಸ್ಥಿತಿ ಹೇರಿದಾಗ ನಿಜವಾಗಿಯೂ ಸಂವಿಧಾನದ ಕಗ್ಗೊಲೆಯಾಗಿತ್ತು.ಆ ಸಂದರ್ಭದಲ್ಲಿ ಸಿದ್ದರಾಮಯ್ಯನವರು ವಿರೋಧ ಪಕ್ಷದಲ್ಲಿದ್ದು, ಇದನ್ನು ವಿರೋಧಿಸಿದ್ದರು. ಈಗೇಕೆ ಅದರ ನೆನಪು ಮಾಡುತ್ತಿಲ್ಲ ಎಂದು ಪ್ರಶ್ನಿಸಿದ್ದಾರೆ.


# ತಾನಾಜಿ ಸಗರ್‌ಗೆ ಗೌರವ ಡಾಕ್ಟರೇಟ್



ಬೀದರ. ಜೂ. 28 : ಸಾಮಾಜಿಕ ಕ್ಷೇತ್ರಕ್ಕೆ ನೀಡಿದ ಕೊಡುಗೆಗಾಗಿ ಜಿಲ್ಲಾ ಉಪ್ಪಾರ ಸಮಾಜದ ಅಧ್ಯಕ್ಷ ತಾನಾಜಿ ಸಗರ್ ಅವರಿಗೆ ಯುನೈಟೆಡ್ ಸ್ಟೇಟ್ಸ್ ಆಫ್ ಅಮೆರಿಕದ ಗ್ಲೋಬಲ್ ಹ್ಯೂಮನ್ ಪೀಸ್ ವಿಶ್ವವಿದ್ಯಾಲಯ ಗೌರವ ಡಾ–ಕ್ಟರೇಟ್ ನೀಡಿದೆ. ಚೆನ್ನೈನ ದಿವ್ಯ ಭಾರತಿ ಭವನದಲ್ಲಿ ನಡೆದ ಸಮಾರಂಭದಲ್ಲಿ ಗೌರವ ಡಾಕ್ಟರೇಟ್ ಪ್ರದಾನ ಮಾಡಲಾಯಿತು. ತಾನಾಜಿ ಸಗರ್ ಎರಡು ದಶಕಗಳಿಂದ ಸಾಮಾಜಿಕ ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದಾರೆ.

ವಿವಿಧ ಸಂಘ–ಸಂಸ್ಥೆಗಳೊಂದಿಗೆ ಒಡನಾಟ ಹೊಂದಿದ್ದಾರೆ.ಸಮಾರಂಭದಲ್ಲಿ ವಿಶ್ವದ್ಯಾಲಯದ ಪ್ರಮುಖರು, ಗಣ್ಯರು ಹಾಜರಿದ್ದರು.

# ಪಿಂಚಣಿ ವ್ಯವಸ್ಥೆ ರದ್ದುಗೊಳಿಸದಿರಲು ಮನವಿ



ಮಲ್ಲಮ್ಮ ನುಡಿ ವಾರ್ತೆ

ಭಾಲ್ಕಿ:ಜೂ.28: ಪಿಂಚಣಿ ವ್ಯವಸ್ಥೆರದ್ದುಗೊಳಿಸಬಾರದು ಎಂದು ಆಗ್ರಹಿಸಿ ತಾಲೂಕ ನಿವೃತ್ತನೌಕರರ ಸಂಘದಿಂದ ಕೇಂದ್ರ ಸರ್ಕಾರಕ್ಕೆ ಬರೆದ ಮನವಿ ಪತ್ರವನ್ನು ಸೋಮವಾರ 11 ಗಂ–ಟೆಗೆ ನೌಕರರ ಸಂಘದ ಕಾರ್ಯಾಲಯದಿಂದ ತಹಸೀಲ್ದಾರರ ಮುಖಾಂತರ ಪ್ರಧಾನ ಮಂತ್ರಿ ಅವರಿಗೆ ಮನವಿ ಪತ್ರವನ್ನು ಸಲ್ಲಿಸಲಾಗುವುದು ಎಂದು ಸರ್ಕಾರಿ ನೌಕರರ ಸಂಘದ ಅಧ್ಯಕ್ಷರಾದ ಬಸವರಾಜ ಮರೆ ಪತ್ರಿಕಾ ಪ್ರಕಟಣೆಯಲ್ಲಿ ತಿಳಿದಿದ್ದಾರೆ.

ಕೇಂದ್ರ ಸರ್ಕಾರ ಈ ಬಗ್ಗೆ ಮಸೂದೆಗೆ ಮಂಡನೆಗೆ ಸಿದ್ಧತೆ ಕೈಗೊಳ್ಳುತ್ತಿರುವುದು ಸರಿಯಲ್ಲ. ಇದರಿಂದ ಅನೇಕರು ಆರ್ಥಿಕ ಸಂಕಷ್ಟಕ್ಕೆ ಒಳಗಾಗುತ್ತಾರೆ ಎಂದು ಮರೆ ತಿಳಿಸಿದ್ದಾರೆ. ಪ್ರಧಾನ ಕಾರ್ಯದರ್ಶಿ ಮಲ್ಲಿಕಾರ್ಜುನ ಬಿರಾದಾರ ಉಪಸ್ಥಿತರಿದ್ದರು. ನಿವೃತ್ತ ನೌಕರರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಲು ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ 9449274685,7760602100 ಸಂಪರ್ಕಿಸಲು ತಿಳಿಸಿದ್ದಾರೆ.

# ಶಹಾಪುರ ಅರಣ್ಯ ಇಲಾಖೆ ಭ್ರಷ್ಟಾಚಾರ: ತನಿಖೆಗೆ ಪ್ರದೀಪ್ ಅಣಬಿ ಆಗ್ರಹ





ಮಲ್ಲಮ್ಮ ನುಡಿ ವಾರ್ತೆ

ಶಹಾಪುರ: ತಾಲೂಕಾ ಸಮಾಜಿಕ ಅರಣ್ಯ ಇಲಾಖೆಯಲ್ಲಿ ಭ್ರಹ್ಮಾಂಡ ಭ್ರಷ್ಟಾಚಾರ ನಡೆದಿದ್ದು, ಈ ಕುರಿತು ಸಮಗ್ರ ತನಿಖೆಗೆ ಮಾಡಬೇಕು.

ನರೇಗಾ ಯೋಜನಡಿಯಲ್ಲಿ ಗುಂಡಳ್ಳಿ ವಿಬೂತಿಹಳ್ಳಿ ಹೋತಪೇಟ, ಭೀ.ಗುಡಿ ಸೇರಿದಂತೆ ಹಲವಾರು ಗ್ರಾಮಗಳಲ್ಲಿ ನಡುತೋಪುಗಳನ್ನು ಮಾಡಿದ್ದು ಈಗಾಗಲೆ ನೆಟ್ಟ ಗಿಡಮರಗಳು ಯಾವುದೆ ನಿರ್ವಹಣೆ ಇಲ್ಲದೆ ಕಳೆದು ಹೋಗಿವೆ, ಕೊಟ್ಯಾಂತರ ರೂ.ಗಳ ವೆಚ್ಚದಲ್ಲಿ ನಡಿಸಲಾದ ಈ ಗಿಡಗಳು ಇಂದು ಕಾಣ ಸಿಗುತ್ತಿಲ್ಲ. ಕೇವಲ ಬಿದಿರಿನ ಬಡಿಗೆಗಳು ಮಾತ್ರ ಕಾಣ ಸಿಗುತ್ತವೆ. ಸರ್ಕಾರದ ಅನುಧಾನ ದುರ್ಭಳಿಕೆ ಮಾಡಿಕೊಂಡ ವಲಯ ಸಾಮಾಜಿಕ ಅರಣ್ಯ ಅಧಿಕಾರಿಗಳನ್ನು ಕೂಡಲೆ ಅಮಾನತ್ತುಗೊಳಿಸಬೇಕು ಎಂದು ಒತ್ತಾಯಿಸಿ ಸರ್,ಎಮ್,ವಿಶ್ವೇಶ್ವರಯ್ಯ ಕಟ್ಟಡ ಕಾರ್ಮಿಕರ ಸಂಘಟನೆಯ ನೇತೃತ್ವದಲ್ಲಿ ಯಾದಗಿರಿ ಜಿ,ಪಂ, ಕಚೇರಿ ಮುಂದೆ ಧರಣಿ ಸತ್ಯಾಗ್ರಹ ನಡೆಸಿ ಅವರು ಒತ್ತಾಯ ಮಾಡಿದರು, ತೊಟ್ಟಿದಾಖಲೆಗಳನ್ನು ಸೃಷ್ಟಿಸಿ ಸರ್ಕಾರದ ಅನುಧಾನ ಕಬಳಿಕೆ ಮಾಡಿದ್ದಾರೆ ಎಂದು ಪ್ರತಿಭಟನಾಕಾರರು ಜಿಪಂ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳಿಗೆ ನೀಡಿದ ಮನವಿ ಪತ್ರದಲ್ಲಿ ದೂರಿದ್ದಾರೆ. ಈ ಸಂಧರ್ಭದಲ್ಲಿ ಸಂಘದ ಅಧ್ಯಕ್ಷರಾದ ಪ್ರದೀಪ ಅಣಿಬಿ, ಮುಖಂಡರಾದ ಸಿದ್ದು ಮುಂಡಾಸ್ ಮೌನೇಶ ಬೀರನೂರ, ಬೋಜಪ್ಪ ಮುಂಡಾಸ್, ಅಂಬ್ರೇಶ ಶಿರವಾಳ, ಸುರೇಶ ಕಟ್ಟಿಮನಿ,

ಮಲ್ಲಿಖಾರ್ಜುನ ನಾಟೀಕಾರ, ಕಾರ್ಮಿಕರ ಮುಖಂಡರಾದ ವಿಶ ಬೀರನೂರ, ಬಸ್ಸು ಪರಸಾಪುರ, ಬಸವರಾಜ ನಾಟೇಕಾರ, ಖಡಪ್ಪ ಆ0ಜನೆಯ ನಾಗು ಬೀರನೂರ ಸೇರಿದಂತೆ ಹಲವಾರು ಯುವ ಮುಖಂಡರು ಭಾಗವಹಿಸಿದರು.

ಗೌಡುರು ಹೊಸಗುಡ್ಡ ಬಂಡೆ ಬಾವಿ ಬೆಂಚಲದೊಡ್ಡಿ

# ತಾಂಡಾ ಗಳಿಗೆ ಬಸ ವೆವಸ್ಥೆಗೆ ತಾಂಡಾ ದ ಜನರ ಅಗ್ರಹ



ಮಲ್ಲಮ್ಮ ನುಡಿ ವಾರ್ತೆ

ಲಿಂಗಸೂಗೂರು: ಗೌಡುರು ಹೊಸಗುಡ್ಡ ಬಂಡೆ ಬಾವಿ ಬೆಂಚಲದೊಡ್ಡಿ ತಾಂಡಾ ಗಳಿಗೆ ಬಸ ವೆವಸ್ಥೆಗೆ ತಾಂಡಾ ದ ಜನರು ಲಿಂಗಸೂಗೂರು ತಾಲ್ಲೂಕಿನ ಕೆ. ಎಸ್. ಆರ್. ಟಿ. ಸಿ. ಸಾರಿಗೆ ಘಟಕ ವ್ಯವಸ್ಥಾ ಪಕರಿಗೆ ತಂಡಾದ ಜನರು ಬಸ ವ್ಯವಸ್ಥೆ ಮಾಡಬೇಕೆಂದು ತಂಡಾದ ವಿದ್ಯಾರ್ಥಿಗಳಿಗೆ ಇದರಿಂದ ಅನುಕೂಲ ವಾಗುವುದು ಇದ್ದರಿಂದ ವಿದ್ಯಾರ್ಥಿಗಳು ಸರಿಯಾದ ಸಮಯಕ್ಕೆ ಶಾಲಾ ಕಾಲೇಜುಗಳಿಗೆ ಹೋಗಲು ಅನುಕೂಲ ವಾಗುವುದು ಎಂದು ಘಟಕ ವ್ಯವಸ್ಥಾಪಕರಿಗೆ ಮನವಿ ಸಲ್ಲಿಸಿದರು ಈ ಸಂದರ್ಭದಲ್ಲಿ ನಿಲೇಶ್ ಪವಾರ ರಾಜ ಶೇತುರಾಮ ನಾಯಕ ರುದ್ರಣ್ಣ ಸಾಹುಕಾರ ಚಂದ್ರು ವೆಂಕಟೇಶ್ ಯಲ್ಲಪ್ಪ ಶರಣು ರಾಠೋಡ್ ಹನುಮಂತ ಅಮರೇಶ ಲಚಮಪ್ಪ ತಿಮ್ಮಣ್ಣ ಹುಲ್ಲಪ್ಪ ಮೋತಿಲಾಲ್. ಉಪಸ್ಥಿತರಿದ್ದರು.

ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಪ್ರತಿಭಟನೆ

# ಶಹಾಪುರ ತಾಲೂಕಿನ ಹೊಸಕೇರಾ



ಮಲ್ಲಮ್ಮ ನುಡಿ ವಾರ್ತೆ

ಶಹಾಪುರ:"ಕೂಲ ಬೇಡಿಕೆ ಕೇಂಡ ಗ್ರಾಮದ ಬಡವರಿಗೆ ಕೆಲಸ ಕೊಟ್ಟಿಲ್ಲ, ಕೂಡಲೇ ಕುಂಟು ಕುಂಟು ನೆಪ ಹೇಳದೆ

ಜಾಬ್ ಕಾರ್ಡ್ ಕೊಟ್ಟು ಕೆಲಸ ಕೊಡಬೇಕು, ಹೊಸಕೇರಾ ಗ್ರಾಮಕ್ಕೆ ಸಮರ್ಪಕವಾಗಿ ಶುದ್ಧ ಕುಡಿಯುವ

ನೀರು ಒದಗಿಸಬೇಕು ಎಂದು ಆಗ್ರಹಿಸಿ ಕರ್ನಾಟಕ ಪ್ರಾಂತ ರೈತ ಸಂಘ(ಕೆಪಿಆಎಸ್) ವತಿಯಿಂದ

ಹೊಸಕೇರಿ ಗ್ರಾಮ ಪಂಚಾಯತಿ ಎದುರು ಪ್ರತಿಭಟನೆ ನಡೆಸಿದರು.

ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾಧ್ಯಕ್ಷ ಚನ್ನಪ್ಪ ಆನೇಗುಂದಿ ಮಾತನಾಡಿ, ಹೊಸಕೇರಿ ಗ್ರಾ.ಪಂ.

ವ್ಯಾಪ್ತಿಯಲ್ಲಿ ಬರುವ ಹೊಸಕೇರಿ, ರಾಜಾಪುರ, ಶೇಟ್ಟಿಕೇರ ಗ್ರಾಮಗಳಲ್ಲಿ 1000 ಅಭಿವೃದ್ಧಿ ಕೆಲಸಗಳಿಗಾಗಿ ಡಂಗೂರ ಹಾಕಿ ಗ್ರಾಮ ಸಭೆಗಳನ್ನು ನಡೆಸಿ ಕೆಲಸಗಳ ಬಗ್ಗೆ ಬಡವರ ಸಮಸ್ಯೆಗಳನ್ನು ಪರಿಹರಿಸಬೇಕು ಎಂದು ಹೇಳಿದರು. ಶೇಟ್ಟಿ- ಕೇರಾ ಶಾಖಾ ಕಾಲುವೆ ಬಿಡಿ7 ಕಾಲುವೆಯ ಸುರಪುರ ಖಂಡಪ್ಪ

ಜಮೀನಿನಿಂದ ಗುಡ್ಡೆಕೆರೆಯವರೆಗೆ ನಾಲಾ ನೀರು ಹರಿದು ರೈತರ ಜಮೀನು ಹಾಳಾಗುವುದನ್ನು ತಡೆದು ನಾಲದ ಹೂಳು ಎತ್ತಬೇಕು. ಗ್ರಾಮದಲ್ಲಿನ ಸರಕಾರಿ ಶಾಲೆಗೆ 1 ಎಕರೆ 20 ಗುಂಟೆಯ ಕಂಪೌಂಡ್ಕೂಡಲೇ ನಿರ್ಮಿಸಿಕೊಡಬೇಕು. ಮಹಿಳೆಯರಿಗೆ ಪ್ರತ್ಯೇಕ ಶೌಚಾಲಯ ಮತ್ತು ಫಾರಂ 6 ತುಂಬಿದ ರಾಜಾಪುರ ಗ್ರಾಮದವರಿಗೆ ತಕ್ಷಣವೇ 30 ದಿನಗಳ ಕೆಲಸ ಕೊಡಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದ್ದಾರೆ.

ಪಂಚಾಯತ್ ಸಿಬ್ಬಂದಿ ಜಿಕೆಎಮ್ ಇದ್ದವರು ಮಾತ್ರ ಜಿಪಿಎಸ್ ಮಾಡಲು, ಖಾಸಗಿ ವ್ಯಕ್ತಿಗಳನ್ನು ಕಳಿಸಬಾರದು. ಹೊಸಕೇರಾ, ಶೇಟ್ಟಿಕೇರ, ರಾಜಾಪುರ ಗ್ರಾಮಗಳಲ್ಲಿ ವಿದ್ಯುತ್ ಕಂಬಗಳಿದ್ದು ದೀಪವಿಲ್ಲದೆ

ರಾತ್ರಿವೇಳೆಯಲ್ಲಿ ಸಮಸ್ಯೆಯಾಗುತ್ತಿದೆ. ಕೂಡಲೇ ವಿದ್ಯುತ್ ಬಲ್ಬಗಳನ್ನು ಹಾಕಿ ಮುಂದಾಗುವ ಅನಾಹುತಗಳನ್ನು ತಪ್ಪಿಸಬೇಕು. ಬಡವರಿಗೆ

ನಿವೇಶನ ಮತ್ತು ಮನೆಗಳನ್ನು ಒದಗಿಸಬೇಕು ಎಂದು ಆಗ್ರಹಿಸಿದರು. ಈ ಸಂದರ್ಭದಲ್ಲಿ ತಾಲೂಕ ಅಧ್ಯಕ್ಷ ಭೀಮಣ್ಣ ಟಪ್ಪೇದಾರ, ಭೀಮರಾಯ ಪೂಜಾರಿ, ನಿಂಗಣ್ಣ ಬೋನಾಳ, ಯಲ್ಲಪ್ಪ ಹೊಸಕೇರಾ ಸೇರಿದಂತೆ ಅನೇಕರು ಇದ್ದರು.

ಪ್ಯಾನ್- ಇಂಡಿಯಾ ರಕ್ಷಣೆ ಮತ್ತು ಪುನರ್ವಸತಿ ಅಭಿಯಾನ

# ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಸರಕಾರದ ಎಲ್ಲಾ ಇಲಾಖೆಗಳು ಸಹಕಾರ ಅಗತ್ಯ

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ: ಜೂನ್ 28-PAN-INDIA Rescue and Rehabilitation Campaign 3.0 by NCPCR on the Occasion of World Day Against Child Labour Programm 2025ರ ಅಂಗವಾಗಿ-"Progress is Clear, but there's more to do : Lets Speed up Efforts! (ಪ್ಯಾನ್-ಇಂಡಿಯಾ ರಕ್ಷಣೆ ಮತ್ತು ಪುನರ್ವಸತಿ ಅಭಿಯಾನ-ಪ್ರಗತಿ ಸ್ಪಷ್ಟವಾಗಿದೆ ಆದರೆ ಪ್ರಯತ್ನಗಳ ವೇಗವನ್ನು ಮಾಡಲು ಇನ್ನೂ ಹೆಚ್ಚಿನವುಗಳಿವೆ) ಎಂಬ ಧ್ಯೆಯವಾಕ್ಯದೊಂದಿಗೆ ಬಾಲಕಾರ್ಮಿಕಪದ್ಧತಿ ನಿರ್ಮೂಲನೆಗೆ ಸರಕಾರದ ಎಲ್ಲಾ ಇಲಾಖೆಗಳು ಮತ್ತು ಸರ್ಕಾರೇತರ ಸಂಘ ಸಂಸ್ಥೆಗಳ ಸಹಕಾರ ಅಗತ್ಯವಾಗಿದೆ ಎಂದು ಯಾದಗಿರಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿಗಳು ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ಗೌರವಾನ್ವಿತ ಶ್ರೀ ಮರಿಯಪ್ಪ ಅವರು ಜಿಲ್ಲೆಯ ಅಭಿಮತ ವ್ಯಕ್ತಪಡಿಸಿದರು.




ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ನವದೆಹಲಿ ಮತ್ತು ಕಾರ್ಮಿಕ ಆಯುಕ್ತರು ಬೆಂಗಳೂರು ರವರ ಸೂಚನೆಯಂತೆ, PAN-INDIA Rescue and Rehabilitation Campaign 3.0 by NCPCR on the Occasion of World Day Against Child Labour Programm2025gÀಅಂಗವಾಗಿ - "Progress is Clear, but there's more to do : Lets Speed up Efforts! (ಪ್ಯಾನ್-ಇಂಡಿಯಾ ರಕ್ಷಣೆ ಮತ್ತು ಪುನರ್ವಸತಿ ಅಭಿಯಾನದಲ್ಲಿ ಅವರು ಮಾತನಾಡಿದರು.

ಪ್ಯಾನ್-ಇಂಡಿಯಾ ರಕ್ಷಣೆ ಮತ್ತು ಪುನರ್ವಸತಿ ಅಭಿಯಾನ ಪ್ರಗತಿ ಸ್ಪಷ್ಟವಾಗಿದೆ ಆದರೆ ಪ್ರಯತ್ನಗಳ ವೇಗವನ್ನು ಮಾಡಲು ಇನ್ನೂ ಹೆಚ್ಚಿನವುಗಳಿವೆ) ಅಂಗವಾಗಿ ಬಾಲ ಹಾಗೂ ಕಿಶೋರ ಕಾರ್ಮಿಕತೆಯಲ್ಲಿ ತೊಡಗಿರುವ ಮಕ್ಕಳನ್ನು ಹಾಗೂ ಬೀದಿ ಪರಿಸ್ಥಿತಿಯಲ್ಲಿರುವ ಮಕ್ಕಳನ್ನು ರಕ್ಷಿಸಿ, ಪುನರ್ವಸತಿಗೊಳಿಸಿ ಶಿಕ್ಷಣ ಮುಂದುವರಿಕೆಗೆ ಅವಕಾಶ ಮಾಡಿಕೊಡುವ ಉದ್ದೇಶದಿಂದ 2025ರ ಜೂನ್ 1 ರಿಂದ ಆಗಸ್ಟ್ 31ರ ವರೆಗೆ ರಕ್ಷಣಾ ಕಾರ್ಯಚರಣೆಗೆ ಸರಕಾರದ ಪ್ರತಿಯೊಂದು ಇಲಾಖೆಗಳು ಮತ್ತು ಸರ್ಕಾರೇತರ ಸಂಘ ಸಂಸ್ಥೆಗಳ ಕೈಜೊಡಿಸಿದಾಗ ಮಾತ್ರ ಜಿಲ್ಲೆಯಲ್ಲಿ ಬಾಲಕಾರ್ಮಿಕ ಪದ್ಧತಿ ಎಂಬ ಅನಿಷ್ಠ ಪದ್ಧತಿಯನ್ನು ನಿರ್ಮೂಲನೆ ಮಾಡಲು ಸಾಧ್ಯ ಎಂದು ಹೇಳಿದರು.

ತಾಲ್ಲೂಕು ಮಟ್ಟದ ಪೂರ್ವಭಾವಿ ಸಭೆ ಹಾಗೂ ತಾಲ್ಲೂಕು ಮಟ್ಟದ ಕಾರ್ಯಪಡೆ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿದ ಯಾದಗಿರಿ ತಹಸೀಲ್ದಾರರು ಗ್ರೇಡ್-2 ಶ್ರೀ ಶಕೀಲ್ ಅಹ್ಮದ್ ಅವರು ಮಾತನಾಡಿ, ಬಾಲಕಾರ್ಮಿಕ ಪದ್ಧತಿಯನ್ನು ನಿರ್ಮೂಲನೆ ಮಾಡಲು ಪ್ರತಿ ತಿಂಗಳು 15 ತಪಾಸಣೆ ಮತ್ತು ಹಠಾತ್ ದಾಳಿ, ತಪಾಸಣೆ ಆಯೋಜಿಸಿವುದು. ಮತ್ತು ಪ್ರತಿ ತಿಂಗಳು 2 ಕಾನೂನು ಅರಿವು-ನೆರವು ಮತ್ತು ಜನ-ಜಾಗೃತಿ ಕಾರ್ಯಕ್ರಮ ಆಯೋಜಿಸುವಂತೆ ಹಾಗೂ ಬಾಲಕಾರ್ಮಿಕ, ಕಿಶೋರ ಕಾರ್ಮಿಕರ ಹಠಾತ್ ದಾಳಿಗೆ ಸಿಬ್ಬಂದಿಗಳನ್ನು ಕಳುಹಿಸದೇ ಸರಕಾರದ ಇಲಾಖಾ ಮುಖ್ಯಸ್ಥರೇ ಹಾಜರಿರಬೇಕೆಂದು ತಿಳಿಸಿದರು.

ಸಭೆಯ ನಂತರ ನಗರದ ಹೊಸ ಬಸ್ ನಿಲ್ದಾಣ, ಹೊಸಳ್ಳಿ ಕ್ರಾಸ್ ಮಾರ್ಗದಲ್ಲಿರುವ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳು, ಗ್ಯಾರೇಜ್‌ಗಳು ಮತ್ತು ಹೊಟೇಲ್‌ಗಳಲ್ಲಿ ಹಠಾತ್ ದಾಳಿ, ತಪಾಸಣೆ ನಡೆಸಿ 3 ಮಕ್ಕಳನ್ನು ರಕ್ಷಿಸಲಾಯಿತು.

ಜಿಲ್ಲಾ ಬಾಲಕಾರ್ಮಿಕ ಯೋಜನಾ ನಿರ್ದೇಶಕರಾದ ಶ್ರೀ ರಿಯಾಜ್ ಪಟೇಲ್ ವರ್ಕನಳ್ಳಿ ಮಾತನಾಡಿ, ಜಿಲ್ಲೆಯನ್ನು ಬಾಲಕಾರ್ಮಿಕ ಮುಕ್ತ ಜಿಲ್ಲೆಯನ್ನಾಗಿಸಬೇಕೆಂದು ಕಾರ್ಮಿಕ ಇಲಾಖೆಯಿಂದ ನಿರಂತರವಾಗಿ ಜನ-ಜಾಗೃತಿ, ಕಾನೂನು ಅರಿವು-ನೆರವು ಕಾರ್ಯಕ್ರಮ, ಬೀದಿನಾಟಕ ಮತ್ತು ಆಟೋ-ಪ್ರಚಾರ ಕಾರ್ಯಕ್ರಮಗಳನ್ನು ನಿರಂತರವಾಗಿ ನಡೆಸಲಾಗುತ್ತಿದೆ. ಇದನ್ನು ಮೀ-ರಿಯೂ ಸಹ ಮಕ್ಕಳನ್ನು ಕೆಲಸಕ್ಕೆ ನೇಮಿಸಿಕೊಂಡಲ್ಲಿ ಅಂತಹ ಅಂಗಡಿ ಮಾಲೀಕರ ವಿರುದ್ಧ ಕಾನೂನು ರೀತಿ ಕ್ರಮ ತೆಗೆದುಕೊಳ್ಳಲಾಗುವುದೆಂದು ತಿಳಿಸಿದರು. ಯಾದಗಿರಿ ಕಾರ್ಮಿಕ ನಿರೀಕ್ಷಕರಾದ ಶ್ರೀಮತಿ ಸಂಗೀತಾ ಹೊನ್ನೂರು ಮಾತನಾಡಿ ಬಾಲಕಾರ್ಮಿಕ ಮತ್ತು ಕಿಶೋರ ಕಾರ್ಮಿಕ ಮಕ್ಕಳನ್ನು ಕೆಲಸಕ್ಕೆ ಇಟ್ಟುಕೊಂಡಲ್ಲಿ ಅಂತಹ ಅಂಗಡಿ ಮಾಲೀಕರ ವಿರುದ್ಧ 20,000 ರಿಂದ 50,000 ರೂ.ಗಳವರೆಗೆ ದಂಡ ಮತ್ತು 6 ತಿಂಗಳಿಂದ 2 ವರ್ಷದವರೆಗೆ ಜೈಲು ಶಿಕ್ಷೆ ಅಥವಾ ಎರಡನ್ನು ಸಹ ವಿಧಿಸಲಾಗುವುದು ಎಂದು ತಿಳಿಸಿದರು.

ತಪಾಸಣೆ, ಹಠಾತ್ ದಾಳಿ ಸಂದರ್ಭದಲ್ಲಿ ಸಹಾಯಕ ಕಾನೂನು ಅಭಿರಕ್ಷಕರಾದ ಮಲ್ಲಿಕಾರ್ಜುನ ಮನಗನಾಳ, ವಕೀಲರಾದ ಬಿ.ಜಿ ಪಾಟೀಲ್, ಸಹಾಯಕ ಶಿಶುಅಭಿವೃದ್ಧಿ ಯೋಜನಾಧಿಕಾರಿಗಳಾದ ನರೇಂದ್ರ ರೆಡ್ಡಿ, ಆರೋಗ್ಯ ಇಲಾಖೆಯ ಹಣಮಂತರಾವ್, ಶಿರಸ್ತೆದಾರರಾದ ವೆಂಕಟೇಶ್, ಕೃಷಿ ಇಲಾಖೆಯ ಸುರೇಶ್, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಲಕ್ಷ್ಮೀಕಾಂತ, ರೇಷ್ಮೆ ಇಲಾಖೆಯ ಸೈಯದ್ ಹಾಜಿಪಾಷಾ, ಕೈಗಾರಿಕಾ ಇಲಾಖೆಯ ಶಂಕರ ರೆಡ್ಡಿ, ಮಕ್ಕಳ ರಕ್ಷಣ ಘಟಕದ ಮಂಜಮ್ಮ, ಮಕ್ಕಳ ಸಹಾಯವಾಣಿ 1098ನ ಮಹೇಶ್ ಕುಮಾರ್, ಡಾನ್ ಬಾಸ್ಕೋ ಸಂಸ್ಥೆಯ ಫ್ರಾನ್ಸಿಸ್ ಶಾಬು, ಪೋಲಿಸ್ ಇಲಾಖೆಯ ಗುರುನಾಥ ರೆಡ್ಡಿ, ಶಿಲ್ಪ ಎಮ್, ಮಹೇಶ್, ಮಾರ್ಗದರ್ಶಿ ಸಂಸ್ಥೆಯ ಸಂಗೀತಾ, ಚನ್ನಮ್ಮ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸಿಬ್ಬಂದಿ ಮಹೆಮೂದ್ ಪಠಾಣ್, ಕಾರ್ಮಿಕ ಇಲಾಖೆಯ ವೆಂಕಟಪ್ಪ, ವೆಂಕಟೇಶ ಬಾಲುನಾಯಕ, ಅಮೃತ್ ರಾವ್ ಕೊತ್ವಾಲ್ ಉಪಸ್ಥಿತರಿದ್ದರು.

# ಭೀಮ ನದಿಯಲ್ಲಿ ನೀರು ಪಾಲಾದ ಸ್ಥಳಕ್ಕೆ ಮಹೇಶರಡ್ಡಿ ಮುದ್ನಾಳ ಬೇಟಿ..

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ: ಯಾದಗಿರಿ ವಿಧಾನಸಭಾ ಕ್ಷೇತ್ರದ ವಡಗೇರಾ ತಾಲೂಕಿನ ಮಾಚನೂರ ಗ್ರಾಮದ ನಿನ್ನೆ ದಿನ ಹಸುಗಳನ್ನು ಮೇಯಿಸಲು ಹೋಗಿದ್ದ ರಮೇಶ ಮತ್ತು ಸಿದ್ದಪ್ಪ ಅವರು ಭೀಮ ನದಿಯಲ್ಲಿ ಕಾಲು ಜಾರಿ ನೀರು ಪಾಲಾದ ಸ್ಥಳಕ್ಕೆ ಬಿಜೆಪಿ ಯುವ ಮುಖಂಡರ ಮಹೇಶರಡ್ಡಿ ಮುದ್ನಾಳ ಅವರು ಬೇಟಿ ನೀಡಿದರು ಸ್ಥಳದಲ್ಲಿದ್ದ ಕಂದಾಯ ಅಧಿಕಾರಿಗಳ ಮತ್ತು ಅಗ್ನಿಶಾಮಕ ಅಧಿಕಾರಿಗಳ ಜೊತೆ ಸಮಾಲೋಚನೆ ನಡೆಸಿ ಕುಟುಂಬದ ಸದಸ್ಯರಿಗೆ ಧೈರ್ಯ ತುಂಬಿದರು. ಈ ಸಂದರ್ಭದಲ್ಲಿ ಹಿರಿಯ ಮುಖಂಡ ಸಿದ್ದಣ್ಣಗೌಡ ವಡಿಗೇರಿ, ವಿರೂಪಾಕ್ಷಪ್ಪಗೌಡ



ಮಾಚನೂರ್, ಹನುಮಂತರಾಯ ಗೌಡ ಮಾಚನೂರ, ನಗರಸಭೆ ಮಾಜಿ ಅಧ್ಯಕ್ಷ ವಿಲಾಸ್ ಪಾಟೀಲ್, ಸ್ವಾಮಿದೇವ ದಾಸನಕೇರಿ, ಮಲ್ಲಿಕಾರ್ಜುನರೆಡ್ಡಿ ಪೊಲೀಸ್ ಪಾಟೀಲ್ ವಡಿಗೇರಿ, ಮಹಮ್ಮದ್ ಕುರೆಶಿ ವಡಿಗೇರಿ, ಸಂಗರೆಡ್ಡಿ ಗೋಡಿಯಾಲ, ಸಿದ್ದು ಮಾಚನೂರ, ಮತ್ತು ಗ್ರಾಮದ ನೂರಾರು ಜನರು ಸ್ಥಳದಲ್ಲಿ ಹಾಜರಿದ್ದರು.

# ಆಶ್ರಯ ಲೇಔಟ್ ಅಕ್ರಮ ಒತ್ತುವರಿ ತೆರವಿಗೆ ಕ್ರಮ

ಮಲ್ಲಮ್ಮ ನುಡಿ ವಾರ್ತೆ

ಯಾದಗಿರಿ: ಜೂ.28: ನಗರದ ಆಶ್ರಯ ಲೇಔಟ್ ಅಕ್ರಮ ಒತ್ತುವರಿ ತೆರವಿಗೆ ಕಟ್ಟುನಿಟ್ಟಿನ ಕ್ರಮಕೈಗೊಳ್ಳಲಾಗುವುದು ಎಂದು ನಗರಸಭೆ ಅಧ್ಯಕ್ಷೆ ಕು.ಲಲಿತಾ ಮೌಲಾಲಿ ಅನಪೂರ ತಿಳಿಸಿದರು.



ನಗರದ ಪಿಲ್ಲರ್ ಬೆಡ್ ಹಿಂದುಗಡೆಯ ಆಶ್ರಯ ಲೇಔಟ್‌ನಲ್ಲಿ ಅಕ್ರಮವಾಗಿ ಕೆಲವು ನಿವಾಸಿಗಳು ಒತ್ತುವರಿ ಮಾಡಿಕೊಂಡು ಅಕ್ರಮವಾಗಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ ಎನ್ನುವ ದೂರನ್ನು ಆಧರಿಸಿ ಶುಕ್ರವಾರ ಬೆಳಗ್ಗೆ ಆಶ್ರಯ ಲೇಔಟ್‌ಗೆ ಸದಸ್ಯರು ಹಾಗೂ ಪೌರಾಯುಕ್ತರ ತಂಡದೊಂದಿಗೆ ಭೇಟಿ ನೀಡಿ ಪರಿಶೀಲಿಸಿದರು.

ನಿಜವಾದ ಫಲಾನುಭವಿಗಳಿಗೆ ಯಾವುದೇ ತೊಂದರೆ ಮಾಡುವುದಿಲ್ಲ, ಅಕ್ರಮವಾಗಿ ಆಶ್ರಯ ನಿವೇಶನವನ್ನು ಒತ್ತುವರಿ ಮಾಡಿಕೊಂಡು ಮನೆ ನಿರ್ಮಿಸಿ ಮಾರಾಟ ಮಾಡಿದವರ ವಿರುದ್ಧ ಕಠಿಣ ಕ್ರಮಕೈಗೊಳ್ಳಾಗುವುದು, ಇದರಲ್ಲಿ ಯಾವುದೇ ಮುಲಾಜಿ ಇಲ್ಲವೆಂದು ಸ್ಥಳದಲ್ಲಿದ್ದವರಿಗೆ ಹೇಳಿದರು. ಸ್ಥಳ ಪರಿಶೀಲನೆ ವೇಳೆ ಸುಮಾರು 30ಕ್ಕೂ ಹೆಚ್ಚು ಖಾಲಿ ನಿವೇಶನಗಳು ಕಂಡು ಬಂದರೆ, ಇದೇ ವೇಳೆ ಜೆಸ್ಕಾಂ ಮೇನ್ ಲೈನ್ ವಿದ್ಯುತ್ ಸರಬರಾಜಿಗಾಗಿ ಹಾಕಲಾಗಿರುವು ಹೈಟೆನ್ಸ್ ವೈರ್ ಕೆಳಗೆ ಕೆಲವು ಜನರು ಅಕ್ರಮವಾಗಿ ಮನೆಗಳನ್ನು ನಿರ್ಮಿಸಿಕೊಂಡಿರುವುದು ಬೆಳಕಿಗೆ ಬಂದಿದ್ದು, ಇದ-ರಿಂದ ಕುಪಿತರಾದ ಅಧ್ಯಕ್ಷರು, ಇಂತಹ ಅಪಾಯ ಸ್ಥಳದಲ್ಲಿ ಮನೆ ನಿರ್ಮಿಸಿಕೊಂಡಿದ್ದೀರಿ, ಇದರಿಂದ ಅನಾಹುತವಾದರೆ ಯಾರು ಹೊಣೆ ಕೂಡಲೇ ಜೆಸ್ಕಾಂ ಇಲಾಖೆಗೆ ಪತ್ರ ಬರೆದು ಕ್ರಮಕೈಗೊಳ್ಳವಂತೆ ಸ್ಥಳದಲ್ಲಿದ್ದ ಪೌರಾಯುಕ್ತ ಉಮೇಶ ಚವ್ಹಾಣ ಅವರಿಗೆ ಸೂಚಿಸಿದರು. ಆಶ್ರಯ ಲೇಔಟ್‌ನಲ್ಲಿ ಯಾರೂ ಅತಿಕ್ರಮಿಸಬಾರದು, ಒಂದು ವೇಳೆ ಯಾರಾದರೂ ಅಕ್ರಮವಾಗಿ ಲೇಔಟ್‌ನಲ್ಲಿ ಮನೆ ನಿರ್ಮಿಸಿಕೊಂಡಿದ್ದರೆ ಅಂತಹವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲಾಗುವುದು, ಹೈಟೆನ್ಸ್ ವೈರ್ ಕೆಳಗಡೆ ಮನೆ ನಿರ್ಮಿಸಿಕೊಂಡವರು ವಿರುದ್ಧ ಕಾನೂನುಕ್ರಮಕೈಗೊಳ್ಳಲಾಗುವುದು ಎಂದು ತಿಳಿಸಿದರು. ಈ ಸಂದರ್ಭದಲ್ಲಿ ನಗರಸಭೆ ಉಪಾಧ್ಯಕ್ಷ ರುಖಿಯಾ ಬೇಗಂ, ಸದಸ್ಯರಾದ ವಿಜಯಲಕ್ಷ್ಮಿ ??ೀ, ಮಂಜುನಾಥ ದಾಸನಕೇರಿ, ಅಂಬಯ್ಯ ಶಾಬಾದಿ, ಚನ್ನಕೇಶಗೌಡ ಬಾಣತಿಹಾಳ, ಮಶೆಪ್ಪ ನಾಯಕ, ಹಣಮಂತ ನಾಯಕ, ಹಣಮಂತ ಇಟಗಿ, ವಾಹಬ್, ಇಸ್ಮಾಯಿಲ್ ಖಾನ್, ವೆಂಕಟರಡ್ಡಿ ಹೊನಕೇರಿ, ಮನ್ಸೂರ್ ಅಹ್ಮದ್, ಗಣೇಶ ದುಪ್ಪಲ್ಲಿ, ಖಲೀಂ, ಚಂದ್ರಕಾಂತ ಮಡ್ಡಿ, ನಗರಸಭೆ ಎಇಇ ರಜನಿಕಾಂತ ಶೃಂಗೇರಿ, ಪರಿಸರ ಅಭಿಯಂತರ ಪ್ರಶಾಂತ, ಕಂದಾಯ ಅಧಿಕಾರಿ ಅಂಬಿಕೇಶ್ವರ, ಮಲ್ಲಿಕಾರ್ಜುನ ಕುರಕುಂಬಳ ಸೇರಿದಂತೆ ನಗರಸಭೆ ಸಿಬ್ಬಂದಿಗಳು ಇದ್ದರು.

# ಪಟ್ಟಭದ್ರರಿಂದ ಗೋಮಾಳ ಕಿತ್ತುಕೊಳ್ಳುವ ಹುನ್ನಾರ - ಜಿಲ್ಲಾಧಿಕಾರಿಗಳಿಗೆ ದೂರು

ಮಲ್ಲಮ್ಮ ನುಡಿ ವಾರ್ತೆ

ಕೊಪ್ಪಳ : ಜಿಲ್ಲೆಯ ಬೇವಿನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಶಹಪುರ ಗ್ರಾಮದ ಸವುಳು ಹಳ್ಳದ ಕೆರೆ ಪ್ರದೇಶದ ದಡದಲ್ಲಿರುವ ಗೋಮಾಳ ಜಾಗೆಯನ್ನು ಕೆಲವು ಪಟ್ಟಭದ್ರರು ಕಿತ್ತುಕೊಳ್ಳುವ ಹುನ್ನಾರ ನಡೆಸಿದ್ದು ಗೋಮಾಳ ರಕ್ಷಿಸಿಕೊಡುವಂತೆ ಕುರಿಗಾಹಿಗಳು ಕೊಪ್ಪಳ ಜಿಲ್ಲಾಡಳಿತ, ಕೊಪ್ಪಳ ಜಿಲ್ಲಾ ಪೊಲೀಸ್ ಇಲಾಖೆ, ಡಿವೈಎಸ್‌ಪಿ ಮತ್ತು ತಾಲೂಕು ತಹಶೀಲ್ದಾರರಿಗೆ ಮನವಿ ಮಾಡಿದ್ದಾರೆ.



ಗ್ರಾಮದ ಸರ್ವೆ ನಂಬರ್ 14, 15, 16, 20 ಮತ್ತು 27ರ ಸಂಖ್ಯೆಯ ವ್ಯಾಪ್ತಿಯಲ್ಲಿ ಸವುಳು ಹಳ್ಳದ ಕೆರೆ ಪ್ರದೇಶ 30 ಎಕರೆಗೂ ಅಧಿಕ ಇದೆ. ಕೆರೆಯ ಸುತ್ತಲೂ ಗ್ರಾಮದ ಐವತ್ತಕ್ಕೂ ಹೆಚ್ಚು ಕುಟುಂಬಗಳು ಈ ಹಿಂದೆ ಕುರಿ, ದನ, ಕರುಗಳನ್ನು ಸಾಕಣೆ ಮಾಡಿಕೊಂಡು ಉಪಜೀವಿಸುತ್ತಿದ್ದರು. ಇದೀಗ ಹದಿನೈದಕ್ಕೂ ಹೆಚ್ಚು ಕುರಿಗಾಹಿಗಳು ಮತ್ತು ದನಗಾಹಿಗಳು ಗೋಮಾಳದಲ್ಲಿ ನಮ್ಮ ಪೂರ್ವಜರಂತೆಯೇ ಬೀಡು ಬಿಟ್ಟು ಜೀವನ ನಡೆಸುತ್ತಿದ್ದೇವೆ. ಪ್ರತಿನಿತ್ಯ ಹಿಟ್ನಾಳ, ಅಗಳಕೇರಿ, ಶಿವಪುರ, ಕೆರೆಹಳ್ಳಿ, ಲಿಂಗದಹಳ್ಳಿ, ಗುಡದಳ್ಳಿ ಮತ್ತಿತರೆ ಗ್ರಾಮಗಳ ಅಡವಿಗೆ ತೆರಳಿ ಕುರಿ ಮತ್ತು ದನಗಳನ್ನು ಮೇಯಿಸಿಕೊಂಡು ಬರುತ್ತಿದ್ದೇವೆ. ರಾಸುಗಳನ್ನು ಮೇಯಿಸಲೆಂದು ಹೋದಾಗ ಗೋಮಾಳ ಜಾಗೆಯನ್ನು ಆಕ್ರಮಿಸಿಕೊಳ್ಳಲು ಪಟ್ಟಭದ್ರರು ಹುನ್ನಾರ ನಡೆಸುತ್ತಿದ್ದಾರೆಂದು ಕುರಿಗಾಹಿಗಳು ಮತ್ತು ದನಗಾಹಿಗಳು ಜಿಲ್ಲಾಡಳಿತಕ್ಕೆ ತಿಳಿಸಿದ್ದಾರೆ.

ಕುರಿಗಾಹಿಗಳಾದ ವೀರಣ್ಣ ಕೋಮಲಾಪುರ, ಮಲ್ಲೇಶ್ ಕುರಿ, ಕಂಪ್ಲೆಪ್ಪ ಕಂಬಳಿ ಇನ್ನಿತರರ ನೇತೃತ್ವದಲ್ಲಿ ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ ಶಹಪುರ ಗ್ರಾಮದ ಉತ್ತರ ದಿಕ್ಕಿನಲ್ಲಿರುವ ಸವುಳು ಹಳ್ಳದ ಕೆರೆ ದಂಡೆಯ ಮೇಲೆ ಕುರಿ ಮತ್ತು ದನಗಳು ಸೇರಿ ಒಟ್ಟು ಸಾವಿರಾರು ಸಾಕು ಪ್ರಾಣಿಗಳನ್ನು ಈ ಗೋಮಾಳದಲ್ಲಿ ತಂಗಲು ವ್ಯವಸ್ಥೆ ಮಾಡಿಕೊಳ್ಳಲಾಗಿದೆ. ಇತ್ತೀಚೆಗೆ ಆಂಧ್ರಪ್ರದೇಶದಿಂದ ಬಂದ ಕೆಲವೊಂದು ಪಟ್ಟಭದ್ರ ವ್ಯಕ್ತಿಗಳು ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಕರ್ನಾಟಕದ ಶಹಪುರ ಗ್ರಾಮದ ಸರ್ಕಾರಿ ಜಮೀನು ಹೊಂದಿರುವ ಮತ್ತು ಸದರಿ ಗೋಮಾಳವನ್ನು ಆಕ್ರಮಿಸಿಕೊಳ್ಳಲು ಹುನ್ನಾರ ನಡೆಸಿದ್ದಾರೆ. ಇದನ್ನು ಪ್ರಶ್ನಿಸಲು ಹೋದ ಕುರಿಗಾಹಿಗಳು ಮತ್ತು ದನಗಾಹಿಗಳ ಮೇಲೆ ದೌರ್ಜನ್ಯ ನಡೆಸುತ್ತಿದ್ದಾರೆ. ಇದರಿಂದ ನಮ್ಮ ಜೀವಕ್ಕೆ ಆತಂಕ ಎದುರಾಗಿದೆ. ಕೂಡಲೇ ಜಿಲ್ಲಾಧಿಕಾರಿಗಳು ಮಧ್ಯೆ ಪ್ರವೇಶಿಸಿ ಗೋಮಾಳ ಜಮೀನನನ್ನು ಯಥಾವತ್ತಾಗಿ ಉಳಿಸಿಕೊಡಬೇಕು. ತಮ್ಮ ಜೀವ ಮತ್ತು ಜೀವನಕ್ಕೆ ಭದ್ರತೆ ಕಲ್ಪಿಸಿಕೊಡಬೇಕೆಂದು ಮನವಿ ಮಾಡಿದ್ದಾರೆ.

ನೂರಾರು ಕೋಟಿ ರೂಪಾಯಿ ಬೆಳೆ ಬಾಳುವ ಈ ಗೋಮಾಳ ಜಾಗೆಯನ್ನು ಕಳೆದ ಹದಿನೈದು ವರ್ಷಗಳಿಂದ ಆಕ್ರಮಿಸಿಕೊಳ್ಳಲು ಪಟ್ಟಭದ್ರರಿಂದ ಎಲ್ಲ ರೀತಿಯ ಚಿತಾವಣೆ ನಡೆಯುತ್ತಿದೆ. ಕಳೆದ ಹದಿನೈದು ವರ್ಷಗಳಿಂದಲೂ ನಾವುಗಳು ಪ್ರತಿಯೊಂದು ಹಂತದಲ್ಲೂ ಜಿಲ್ಲಾಡಳಿತದ ಮೂಲಕ ಸರ್ಕಾರಕ್ಕೆ ಮನವಿ ಮಾಡುತ್ತಲೇ ಬಂದಿದ್ದೇವೆ. ಈ ಹಿಂದೆ ತಹಶೀಲ್ದಾರರು, ಪೊಲೀಸ್ ಅಧಿಕಾರಿಗಳು ಸಹಿತ ಸ್ಥಳಕ್ಕೆ ಭೇಟಿ ನೀಡಿ ನೈತಿಕ ಬೆಂಬಲ ನೀಡಿದ್ದಾರೆ. ಇತ್ತೀಚಿನ ದಿನಗಳಲ್ಲಿ ಪಟ್ಟಭದ್ರರು ಮತ್ತೆ ಷಡ್ಯಂತ್ರ ನಡೆಸುವ ಮೂಲಕ ಗೋಮಾಳ ಜಾಗೆಯನ್ನು ಹೇಗಾದರೂ ಮಾಡಿ ಲಪಟಾಯಿಸುವ ಗುರಿ ಹೊಂದಿದ್ದು, ನಮ್ಮ ಮೇಲೆ ಆಗಂತುಕರನ್ನು ಬಿಟ್ಟು ದೌರ್ಜನ್ಯ ಎಸಗುತ್ತಿದ್ದಾರೆ. ನಮಗೆ ಜೀವ ಭಯ ಕಾಡುತ್ತಿದೆ. ಸಾವಿರಾರು ಸಂ-ಖ್ಯೆಯ ಕುರಿ, ದನಗಳನ್ನು ಮೇಯಿಸಿ, ಸಂರಕ್ಷಿಸುವುದು ಒಂದೆಡೆಯಾದರೆ, ಮಗದೊಂದೆಡೆ ಪಟ್ಟಭದ್ರರ ದೌರ್ಜನ್ಯ ನಮ್ಮನ್ನು ಅಧೀರಗೊಳ್ಳುವಂತೆ ಮಾಡುತ್ತಿದೆ. ಇದರಿಂದ ಹಗಲೂ ರಾತ್ರಿ ಜೀವಭಯದಲ್ಲಿ ಕುರಿ, ದನಗಳನ್ನು ಮೇಯಿಸುವಂತಾಗಿದೆ. ನಮ್ಮ ಜೀವಕ್ಕೆ ಭಯ ಕಾಡುತ್ತಿದೆ. ಹೀಗಾಗಿ ಗೋಮಾಳ ಕಿತ್ತುಕೊಳ್ಳುವ ಹುನ್ನಾರ ನಡೆಸುತ್ತಿರುವವರ ವಿರುದ್ಧ ಕಾನೂನು ಕ್ರಮ ಜರುಗಿಸಿ, ನಮ್ಮ ಬದುಕಿಗೆ ಭದ್ರತೆ ಒದಗಿಸಬೇಕೆಂದು ಸರ್ಕಾರಕ್ಕೆ ಮನವಿ ಮಾಡಿದ್ದಾರೆ.

ಈ ಸಂದರ್ಭದಲ್ಲಿ ಬೇವಿನಹಳ್ಳಿ ಗ್ರಾಮ ಪಂಚಾಯಿತಿ ಸದಸ್ಯರಾದ ನಾಗರಾಜ ದೊಡ್ಡಮನಿ, ಹಾಲಪ್ಪ ತೋಟದ, ಶಹಪುರ ಗ್ರಾಮದ ಧುರೀಣರಾದ ನಿಂಗಪ್ಪ ನಾಗಲಾಪುರ, ಕುರಿಗಾಹಿಗಳಾದ ಗುಡದಪ್ಪ ಕಿನ್ನಾಳ, ಹುಲ್ಲೇಶ್ ಕುರಿ, ಎಲ್ಲಪ್ಪ ಹಳ್ಳಿಗುಡಿ ಇನ್ನಿತರರು ಇದ್ದರು.


## LOST OF DOCUMENT

I Arvind Belkune S/o Dhanraj Belkune aged 42 Years Occ: Agriculture R/o Hedgapur Tq:Aurad Dist: Bidar. Has lost my Original Documents of Property Sale Deed Document No. 12335/2016 Date:25-06-2025 Dist: While Shifting my residence in Hedgapur in any found Please Call:9036669789,7019485058.

# ಸಣ್ಣ ಉದ್ಯಮದ ಮೇಲೆ ಬೆಳಕು ಚೆಲ್ಲಿದಎಂಎಸ್ ಎಂಇ ಮಹೋತ್ಸವ



ಮಲ್ಲಮ್ಮ ನುಡಿ ವಾರ್ತೆ

ಬಳ್ಳಾರಿ,ಜೂ.28:ಅಂತರಾಷ್ಟ್ರೀಯ ಎಂ ಎಸ್ ಎಂ ಈ ದಿನಾಚರಣೆ ನಿನ್ನೆ ನಗರದ ಬಸವ ಭವನದಲ್ಲಿ ಭಾರತೀಯ ಚಾರ್ಟೆಡ್ ಅಕೌಂ–ಟೆಂಟ್ ಸಂಸ್ಥೆ ಬಳ್ಳಾರಿ ಶಾಖೆ ಆಯೋಜಿಸಿತ್ತು. ಯುವಕರಲ್ಲಿ ನೀವು ಉದ್ಯಮಿಯಾಗಿ ಉದ್ಯೋಗ ನೀಡಬೇಕು ಮತ್ತು ರೈತರು ತಮ್ಮ ಉತ್ಪನ್ನಗಳನ್ನು ಲಾಭದಾಯಕವಾಗಿ ಹೇಗೆ ಮಾಡಬೇಕೆಂದು ಈ ಎಂಎಸ್ ಎಂ ಇ ಮಹೋತ್ಸವದಲ್ಲಿ ತಿಳಿಸಿಕೊಡಲಾಯ್ತು.

ಯುವಕರಿಗೆ ಉದ್ಯಮ ಸ್ಥಾಪಿಸಲು ಮತ್ತು ರೈತರಿಗೆ ಲಾಭದಾಯಕ ಬೆಳೆ ಬೆಳೆಯಲು ಸಹಕಾರ ನೀಡುವದಾಗಿ ಸಂಸ್ಥೆಯ ಸದಸ್ಯರಿಂದ ಸಂಕಲ್ಪವನ್ನು ಮಾಡಲಾಯಿತು. ಉದ್ಯಮದಾರಿಕೆ ಮತ್ತು ಯುವಕರಲ್ಲಿ ಕೌಶಲ್ಯ ಅಭಿವೃದ್ಧಿ ಹೇಗೆ ಮಾಡಿಕೊಳ್ಳಬೇಕು. ಎಂದು ಲೆಕ್ಕ ಪರಿಶೋದಕರ ಸಂಘದ ದಕ್ಷಿಣ ಭಾರತ ಶಾಖೆಯ ಮಾಜಿ ಅಧ್ಯಕ್ಷ ಪನ್ನರಾಜ್ ಸಿರಿಗೆರೆ ತಿಳಿಸಿದರು.

ಎಂಎಸ್ಎಂ.ಇ ಗಳಿಗೆ ರಾಜ್ಯ ಮತ್ತು ಕೇಂದ್ರ ಸರಕಾರದಿಂದ ಬರುವ ಸಹಾಯಧನ ಮತ್ತು ಸೌಲಭ್ಯಗಳ ಬಗ್ಗೆ ಕೈಗಾರಿಕಾ ಇಲಾಖೆಯ ಜಂಟಿ ನಿರ್ದೇಶಕ ಸೋಮಶೇಖರ್ ತಿಳಿಸಿದರು.

ವಿವಿಧ ಬ್ಯಾಂಕಿನ ಅಧಿಕಾರಿಗಳು ಎಂ ಎಸ್ ಎಂ ಈಗೆ ಸಾಲ ಸೌಲಭ್ಯಗಳ ವಿಷಯವನ್ನು ಮಂಡಿಸಿದರು. ಲಾಭದಾಯಕ ಕೃಷಿಗೆ ಮಾಡಬೇಕಾದ ಮಾರ್ಗೋಪಾಯಗಳ ಬಗ್ಗೆ

ಹಗರಿ ಕೃಷಿ ವಿಶ್ವವಿದ್ಯಾಲಯದ ಜಿ ರವಿಶಂಕರ್, ಸಿರಿಧಾನ್ಯ ಸಂಸ್ಕರಣೆ, ಮಾರಾಟ ಮತ್ತು ಯುವಕರಿಗೆ ಸಿರಿಧಾನ್ಯಗಳ ವ್ಯವಹಾರದಲ್ಲಿ ಅನೇಕ ಅವಕಾಶಗಳು ಇರುವುದರ ಮಾಹಿತಿಯನ್ನು ದವಲಪ್ಪ ಕೆ ಹಿಪ್ಪರಗಿ ರಾಯಚೂರು ಅವರು ತಿಳಿಸಿದರು. ಕೋಳಿ ಸಾಕಾಣಿಕೆ, ವ್ಯವಹಾರದಲ್ಲಿ ಇರುವ ಅವಕಾಶಗಳು ಮತ್ತು ಹೇಗೆ ಕೋಳಿ ಸಾಕಾಣಿಕೆ ಲಾಭದಾಯಕವಾಗಿದೆ ಎಂಬುದನ್ನು ಪಶು ಸಂಗೋಪನೆ ಇಲಾಖೆಯ ಡಾ. ಮಲ್ಲಿಕಾರ್ಜುನ್, ಪಶು ಸಂಗೋಪನೆಯಲ್ಲಿರುವ ವಿಪುಲ ಅವಕಾಶಗಳ ಬಗ್ಗೆ ಡಾ. ಬಿಕೆ ರಮೇಶ್ ತಿಳಿಸಿದರು.

ಬಳ್ಳಾರಿ ಶಾಖೆಯ ಅಧ್ಯಕ್ಷರ ಗಜರಾಜ ಡಿ, ಉಪಾಧ್ಯಕ್ಷ ಪುರುಷೋತ್ತಮರೆಡ್ಡಿ,ಕಾರ್ಯದರ್ಶಿ ವಿಶ್ವನಾಥ್ ಆಚಾರಿ, ಖಜಾಂಚಿ ಸ್ವಪ್ನ ಪ್ರಿಯ.ಕೆ , ವಿದ್ಯಾರ್ಥಿ ಸಂಘದ ಅಧ್ಯಕ್ಷ ಶರಣ ಪಾಟೀಲ್ ಮತ್ತು ಸದಸ್ಯರುಗಳು ಭಾಗವಹಿಸಿದ್ದರು.

# ಪಿ.ಎಮ್‌ಶ್ರೀ ಜವಾಹರ ನವೋದಯ: 6ನೇ ತರಗತಿ ಪ್ರವೇಶಕ್ಕೆ ಅರ್ಜಿ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ

ರಾಯಚೂರು ಜೂನ್ 27– ಜಿಲ್ಲೆಯ ಲಿಂಗಸುಗೂರು ತಾಲೂಕಿನ ಕನ್ನಾಪೂರ ಹಟ್ಟಿಯ ಪಿ.ಎಮ್‌ಶ್ರೀಜವಾಹರನವೋದಯ ವಿದ್ಯಾಲಯದಿಂದ 2026–27ನೇ ಸಾಲಿನ 6ನೇ ತರಗತಿ ಪ್ರವೇಶಕ್ಕೆ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ವಿದ್ಯಾಲಯದ ಪ್ರಾಚಾರ್ಯರು ತಿಳಿಸಿದ್ದಾರೆ.

ವಿದ್ಯಾಲಯದದಲ್ಲಿ ಎನ್‌ಇಪಿ 2020ರ ಆದರಿತ ಶಿಕ್ಷಣ ವ್ಯವಸ್ಥೆ, ಬಾಲಕ, ಬಾಲಕಿಯರಿಗೆ ಪ್ರತ್ಯೇಕ ಉಚಿತ ಊಟ ಮತ್ತು ವಸತಿ ವ್ಯವಸ್ಥೆ, ಅನುಭವಿ ಮತ್ತು ನುರಿತ ಸಿಬ್ಬಂದಿ, ಅಂತರ್ಜಾಲ, ಎಜುಸ್ಯಾಟ್ ಸೌಲಭ್ಯ, ಮಕ್ಕಳ ಸರ್ವಾಂಗೀಣ ವ್ಯಕ್ತಿತ್ವ ವಿಕಸನಕ್ಕಾಗಿ ಸಹಪಠ್ಯ ಚಟುವಟಿಕೆ, ಕ್ರೀಡೆ ಮತ್ತು ಆಟೋಟ, ಯೋಗ ತರಬೇತಿಗೆ ವಿಶೇಷ ಪ್ರೋತ್ಸಾಹ ನೀಡಲಾಗುವುದು.

ಅರ್ಹತೆ: ಅರ್ಜಿ ತುಂಬುವ ವಿದ್ಯಾರ್ಥಿಗಳು 2025–26ನೇ ಸಾಲಿನಲ್ಲಿ 5 ನೇ ತರಗತಿ ರಾಯಚೂರು ಜಿಲ್ಲೆಯಲ್ಲಿ ಓದುತ್ತಿರಬೇಕು. ಪ್ರವೇಶ ಪಡೆ–ಯ ಬಯಸುವ ಅಭ್ಯರ್ಥಿಯು ದಿನಾಂಕ: 01–05–2014ಕ್ಕಿಂತ ಮೊದಲು ಮತ್ತು ದಿನಾಂಕ 31–07–2016ನಂತರಜನಿಸಿರಬಾರದು. ಸರಕಾರದ ಮಾನ್ಯತೆ ಪಡೆದ ಯಾವುದೇ ಶಾಲೆಯಲ್ಲಿ 3, 4ನೇ ತರಗತಿ ಉತ್ತೀರ್ಣನಾಗಿದ್ದು, 5ನೇ ತರಗತಿಯಲ್ಲಿ ಓದುತ್ತಿರಬೇಕು. 2025–26ನೇ ಸಾಲಿನಲ್ಲಿ ದಿನಾಂಕ: 31–07–20025ರ ಒಳಗಾಗಿ ಜಿಲ್ಲೆಯಲ್ಲಿ 5ನೇ ತರಗತಿ ಪ್ರವೇಶ ಪಡೆದಿರಬೇಕು.

ಅರ್ಜಿ ಸಲ್ಲಿಸುವುದು: ಜವಾಹರ ನವೋದಯ ವಿದ್ಯಾಲಯ ಪ್ರವೇಶ ಪರೀಕ್ಷೆ 2026ರ ಅರ್ಜಿಯನ್ನು ಆನ್ ಲೈನ್ ಮುಖಾಂತರ ಸಲ್ಲಿಸತಕ್ಕದ್ದು. ಮುಖ್ಯೋಪಾಧ್ಯಾಯರು ನೀಡಿದ ಪ್ರಮಾಣ ಪತ್ರ. ಅಭ್ಯರ್ಥಿಯ ಭಾವಚಿತ್ರ

ಅಭ್ಯರ್ಥಿಯ ಸಹಿ ಮತ್ತು ಪಾಲಕರ ಸಹಿ, ಅಭ್ಯರ್ಥಿಯ ಆಧಾರ ಸಂಖ್ಯೆ, ಪಾಲಕರ ಮೊಬೈಲ್ ಸಂಖ್ಯೆ, ವಾಸಸ್ಥಳ ಪ್ರಮಾಣ ಪತ್ರದೊಂದಿಗೆ ಆಸಕ್ತರು ವೆಬ್‌ಸೈಟ್ ವಿಳಾಸ: www.navodaya.gov.in CxÀªÁhttps://cbseitms.rcil.gov.in/nvsನಲ್ಲಿ ಜುಲೈ 29ರೊಳಗಾಗಿ ಸಲ್ಲಿಸಬಹುದಾಗಿದೆ. ಪ್ರವೇಶ ಪರೀಕ್ಷೆಯನ್ನು ಡಿಸೆಂಬರ್ 13ರ ಬೆಳಿಗ್ಗೆ 11.30ಗಂಟೆಗೆ ಹಮ್ಮಿಕೊಳ್ಳಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಜವಾಹರ ನವೋದಯ ವಿದ್ಯಾಲಯದ ಪ್ರಾಚಾರ್ಯರು ಮೊಬೈಲ್ ಸಂಖ್ಯೆ: 7204109046 ಅಥವಾ 7899009900ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಪಿ.ಎಮ್‌ಶ್ರೀಜವಾಹರನವೋದಯ ವಿದ್ಯಾಲಯದ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನೇತಾಜಿ ನಗರದ ಮಹಿಳೆ ಕಾಣೆ: ಪತ್ತೆಗೆ ಪೊಲೀಸರ ಮನವಿ

ಮಲ್ಲಮ್ಮ ನುಡಿ ವಾರ್ತೆ

ರಾಯಚೂರು ಜೂನ್ 27 –ಇಲ್ಲಿನ ನೇತಾಜಿ ನಗರ ಪೊಲೀಸ್ ಠಾಣಾ ವ್ಯಾಪ್ತಿಯ ನಿವಾಸಿ ರೇಣುಕಾ ಬುಜ್ಜಪ್ಪ (32) ಎಂಬ ಮಹಿಳೆಯು ಜೂನ್ 18ರ ಬೆಳಿಗ್ಗೆ 8.30ಕ್ಕೆ ಮನೆಯಿಂದ ಹೊರಗಡೆ ಹೋದವಳು ಮರಳಿ ಮನೆಗೆ ಬಾರದೆ ಕಾಣೆಯಾಗಿದ್ದು, ಈ ಕುರಿತು

ನೇತಾಜಿ ನಗರ ಪೊಲೀಸ್ ಠಾಣೆಯಲ್ಲಿ ಗುನ್ನೆ ನಂ. 70/2025 ಕಲಂರಡಿ ಪ್ರಕರಣ ದಾಖಲಾಗಿದೆ.

ಕಾಣೆಯಾದ ಮಹಿಳೆಗೆ ಮಗ ರಾಕೇಶ್ (13) ತಂಗಿ ಮಲ್ಲಮ್ಮ (30) ಸೇರಿದಂತೆ ಒಟ್ಟು 5 ಜನ ವಾಸವಾಗಿದ್ದು, ತನ್ನ ಆಧಾರ್ ಕಾರ್ಡ, ಬ್ಯಾಂಕ್ ಪಾಸ್ ಬುಕ್, ಎಟಿಎಮ್ ಕಾರ್ಡ ತೆಗೆದು–ಕೊಂಡು ಹೋಗಿರುತ್ತಾಳೆ.

ಮಹಿಳೆಯ ಚಹರೆ ಪಟ್ಟಿ: ಎತ್ತರ 5.0 ಫೀಟ್, ದುಂಡು ಮುಖ, ಸದೃಢ ಮೈ ಕಟ್ಟು, ಸಾದ ಕೆಂಪು ಬಣ್ಣ, ಕಪ್ಪು ಬಣ್ಣದ ಕೂದಲು, ನೀಲಿ ಬಣ್ಣದ ಸೀರೆ, ಬಿಳಿ ಬಣ್ಣದ ಕುಪ್ಪಸ ಉಡುಪುಗಳನ್ನು ಧರಿಸಲಾಗಿದ್ದು, ಕನ್ನಡ ಹಾಗೂ ತೆಲುಗು ಭಾಷೆ ಮಾತನಾಡುತ್ತಾಳೆ.

ಈ ಮಹಿಳೆಯ ಸುಳಿವು ಸಿಕ್ಕಲ್ಲಿ ನೇತಾಜಿನಗರ ಪೊಲೀಸ್ ಠಾಣೆ ದೂರವಾಣಿ ಸಂಖ್ಯೆ: 08532–240222 ಅಥವಾ ರಾಯಚೂರು ನಗರ ಪೊಲೀಸ್ ಕಂಟ್ರೋಲ್ ರೂಂ ದೂರವಾಣಿ ಸಂಖ್ಯೆ: 08532–235635, 08532–235100, 9480803800 ಅಥವಾ ಪಿ.ಎಸ್.ಐ (ಕಾ.ಸು) 9480803846 ನೇತಾಜಿ ನಗರ ಠಾಣೆ ಹಾಗೂ ಸಿ.ಪಿ.ಐ ಪಶ್ಚಿಮ ವೃತ್ತ ರಾಯಚೂರು 9480803831ಗೆ ಸಂಪರ್ಕಿಸಬಹುದಾಗಿದೆ. ಮಾಹಿತಿ ನೀಡಿದವರಿಗೆ ಪೊಲೀಸ್ ಇಲಾಖೆಯಿಂದ ಸೂಕ್ತ ಬಹುಮಾನ ನೀಡಲಾಗುವುದು ಎಂದು ನೇತಾಜಿ ನಗರ ಪೊಲೀಸ್ ಠಾಣೆಯ ಪಿ.ಎಸ್.ಐ ಲಕ್ಷ್ಮಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸೇಡಂ: ಕಮ್ಯುನಿಟಿ ಮೊಬಿಲೈಜರ್ ಹುದ್ದೆಯ ನೇಮಕಾತಿಗಾಗಿ ಅರ್ಜಿ ಆಹ್ವಾನ

ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಜೂನ್.28–ಸೇಡಂ ಪುರಸಭೆ ವ್ಯಾಪ್ತಿಯಲ್ಲಿ ಸ್ವಚ್ಛ ಭಾರತ್ ಮಿಷನ್ 2.0ರ ಅಡಿಯಲ್ಲಿ ಐ.ಇ.ಸಿ. ಚಟುವಟಿಕೆಗಳನ್ನು ಕೈಗೊಳ್ಳಲು ಸ್ವಸಹಾಯ ಗುಂಪು ಮಹಿಳಾ (ನಲ್ಮ್ ಎಸ್.ಹೆಚ್.ಜಿ.) ಸದಸ್ಯರನ್ನು ಕಮ್ಯುನಿಟಿ ಮೊಬಿಲೈಜರ್ ಹುದ್ದೆಗೆ ನೇಮಕಾತಿಗಾಗಿ ಆಸಕ್ತಿಯುಳ್ಳ ಮಹಿಳಾ ಸದಸ್ಯರಿಂದ ಅರ್ಜಿ ಆಹ್ವಾನಿಸಲಾಗಿದೆ ಎಂದು ಸೇಡಂ ಪುರಸಭೆಯ ಮುಖ್ಯಾಧಿಕಾರಿಗಳು ತಿಳಿಸಿದ್ದಾರೆ.

ನಲ್ಮ್–ಡೇ ಅಡಿಯಲ್ಲಿ ನೋಂದಾಯಿಸಿಕೊಂಡ ಆಸಕ್ತಿಯುಳ್ಳ ಮಹಿಳಾ ಎಸ್.ಹೆಚ್.ಜಿ. (ಖಊಉ) ಸದಸ್ಯರು ತಮ್ಮ ಇಚ್ಛಾನುಸಾರ ನಲ್ಮ್–ಡೇ ಹಿಂಬರಹದೊಂದಿಗೆ ಸೇಡಂ ಪುರಸಭೆ ಮುಖ್ಯಾಧಿಕಾರಿಗಳ ಕಾರ್ಯಾಲಯಕ್ಕೆ ಭೇಟಿ ನೀಡಿ ನಿಗದಿತ ನಮೂನೆಯನ್ನು ಪಡೆದು ಭರ್ತಿ ಮಾಡಿ ಅವಶ್ಯಕ ದಾಖಲೆಗಳನ್ನು ಲಗತ್ತಿಸಿ 2025ರ ಜುಲೈ 8 ರ ಸಂಜೆ 5 ಗಂಟೆಯೊಳಗಾಗಿ ಖುದ್ದಾಗಿ ಸೇಡಂ ಪುರಸಭೆ ಮುಖ್ಯಾಧಿಕಾರಿಗಳ ಕಾರ್ಯಾಲಯಕ್ಕೆ ಬಂದು ಅರ್ಜಿ ಸಲ್ಲಿಸಬೇಕು.

ಅರ್ಜಿಯೊಂದಿಗೆ ಲಗತ್ತಿಸಬೇಕಾದ ದಾಖಲೆಗಳು, ಆಯ್ಕೆ ಪ್ರಕ್ರಿಯೆ ಹಾಗೂ ಗೌರವಧನಕ್ಕೆ ಸಂಬಂಧಿಸಿದಂತೆ ಮತ್ತಿತರ ಹೆಚ್ಚಿನ ಮಾಹಿತಿಗಾಗಿ ಸೇಡಂ ಪುರಸಭೆ ಕಚೇರಿಯನ್ನು ಸಂಪರ್ಕಿಸಲು ಕೋರಲಾಗಿದೆ.

# ಹೊಸಪೇಟೆ ಕೇಂದ್ರ ಬಸ್ ನಿಲ್ದಾಣಕ್ಕೆ ಡಿಸಿ ಧೀಡಿರ್ ಭೇಟಿ.ಸ್ವಚ್ಛತೆ, ಮಾರಾಟ ಮಳಿಗೆ, ಶುದ್ಧ ಕುಡಿಯುವ ನೀರಿನ ಘಟಕ, ಶೌಚಾಲಯ ವೀಕ್ಷಣೆ.



ಮಲ್ಲಮ್ಮ ನುಡಿ ವಾರ್ತೆ

ಹೊಸಪೇಟೆ (ವಿಜಯನಗರ) ಜೂ.28–ಸರ್ಕಾರದಯೋಜನೆಗಳು ಮತ್ತು ಸಾಧನೆಗಳನ್ನು ಬಿಂಬಿಸುವ ವಸ್ತು ಪ್ರದರ್ಶನಕ್ಕೆ ಚಾಲನೆ ನೀಡಲು ಆಗಮಿಸಿದ್ದ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಅವರು ಕೇಂದ್ರ ಬಸ್ ನಿಲ್ದಾಣದ ಆವರಣದಲ್ಲಿ ಪರಿಶೀಲನೆ ನಡೆಸಿ ಅಧಿಕಾರಿಗಳಿಗೆ ತರಾಟೆ ತೆಗೆದುಕೊಂಡರು.

ಬಳಿಕ ಮಾರಾಟ ಮಳಿಗೆಗಳಲ್ಲಿನ ಸಿಹಿ ತಿನಿಸುಗಳು, ಕುಡಿಯುವ ನೀರಿನ ಬಾಟಲ್, ಪ್ಯಾಕಿಂಗ್ ತಿನಿಸುಗಳ ಕವರ್ ಮೇಲಿನ ವ್ಯಾಲಿಡಿಟಿ ಪರಿಶೀಲಿಸಿ ಮಾರಾಟಗಾರರಿಗೆ ಕೆಲವು ಸಲಹೆಗಳನ್ನು ನೀಡಿದರು. ನಿಲ್ದಾಣದಲ್ಲಿನ ಶುದ್ಧ ಕುಡಿಯುವ ನೀರಿನ ಘಟಕ ವೀಕ್ಷಿಸಿ ಡಿಟಿಓ ರಾಜಶೇಖರ್ ವಾಜಂತ್ರಿರಿಗೆ ಒಂದು ಗ್ಲಾಸ್ ನೀರು ಕುಡಿಸಿದರು. ಘಟಕದಲ್ಲಿ ಮುದ್ರಿಸಿದ್ದ 1 ಲೀಟರ್ ನೀರಿಗೆ ರೂ.2 ನಾಮಫಲಕವನ್ನು ತೆರವುಗೊಳಿಸಿ, ಉಚಿತ ಕುಡಿಯುವ ನೀರು ನೀಡುವಂತೆ ಸೂಚಿಸಿದರು.

ಬಸ್ ನಿಲ್ದಾಣದಲ್ಲಿನ ಶೌಚಾಲಯದಲ್ಲಿ ಮಹಿಳೆಯರಿಂದ ರೂ.10 ಸಂಗ್ರಹಿಸುತ್ತಿದ್ದಾರೆಂದು ಸ್ಥಳೀಯ ಆಟೋ ಚಾಲಕರು ಡಿಸಿಯವರಿಗೆ ದೂರಿದರು. ಸ್ವತಃ ಜಿಲ್ಲಾಧಿಕಾರಿಗಳು ಶೌಚಾಲಯ ಸ್ವಚ್ಛತೆಯನ್ನು ಪರಿಶೀಲಿಸಿ ಹೊರ ಬರುತ್ತಿದ್ದ ಮಹಿಳೆಯರಿಗೆ ಹಣ ಎಷ್ಟು ಕೊಟ್ಟಿರಿ ಎಂದು ಕೇಳಿದರು. ಮಹಿಳೆರು ತಲಾ 10 ರೂ ಕೊಟ್ಟಿದ್ದೇವೆ ಎಂದು ಪ್ರತಿಕ್ರಿಯಿಸಿದ್ದಕ್ಕೆ ಗರಂ ಆದ ಜಿಲ್ಲಾಧಿಕಾರಿಗಳು ಕೂಡಲೇ ಡಿಟಿ–ಓರಿಗೆ ಶಿಸ್ತು ಕ್ರಮ ವಹಿಸುವಂತೆ ಸೂಚಿಸಿದರು. ಬಸ್ ನಿಲ್ದಾಣದಲ್ಲಿನ ಮೂರು ಶೌಚಾಲಯಗಳನ್ನು ಹಾಗೂ ನಿಲ್ದಾಣದ ಆವರಣ ಸೇರಿದಂತೆ ಕ್ಯಾಂಟಿನ್ ಒಳಗಡೆ ಅಡುಗೆ ಮನೆ, ವಿತರಣೆ ಹಾಗೂ ಅಡುಗೆಗೆ ಬಳಸುವ ಎಣ್ಣೆಯ ಗುಣಮಟ್ಟ, ಸ್ವಚ್ಛತೆಯನ್ನು ಪರಿಶೀಲಿಸಿದರು.

ಹೊಸಪೇಟೆ ಪಟ್ಟಣ ಪೊಲೀಸ್ ಠಾಣೆಯ ಪಿಐ ಲಖನ್ ಮಸಗುಪ್ಪಿ ಅವರು ಬಸ್ ನಿಲ್ದಾಣದಲ್ಲಿ ಕಳ್ಳತನ ಜಾಗೃತಿ ನಡೆಸುವ ಕುರಿತು ಮೈಕ್ ವ್ಯವಸ್ಥೆ ಮಾಡಿಸುವಂತೆ ಮನವಿ ಮಾಡಿದರು. ಜಿಲ್ಲಾಧಿಕಾರಿಗಳು ಪ್ರಥಮ ಆದ್ಯತೆ ನೀಡಿ ಕೂಡಲೇ ಅವರಿಗೆ ಮೈಕ್ ವ್ಯವಸ್ಥೆ ಕಲ್ಪಿಸುವಂತೆ ಡಿಟಿಓ ರಾಜಶೇಖರ್ ವಾಜಂತ್ರಿರಿಗೆ ಸೂಚನೆ ನೀಡಿದರು.

ಈ ವೇಳೆ ಹುಡಾ ಅಧ್ಯಕ್ಷ ಇಮಾಮ್ ನಿಯಾಜಿ, ವಾರ್ತಾಧಿಕಾರಿ ಧನಂಜಯಪ್ಪ.ಬಿ ಸೇರಿ ಕೆಕೆಎಸ್‌ಆರ್‌ಟಿಸಿ ಸಿಬ್ಬಂದಿಗಳು ಇದ್ದರು.

# ಮೊಹರಂ ಹಿನ್ನೆಲೆ :ಸಾರ್ವಜನಿಕವಾಗಿ ಮೆರವಣಿಗೆ ನಡೆಸುವುದನ್ನು ನಿರ್ಬಂಧಿಸಿ ಆದೇಶ.



ಮಲ್ಲಮ್ಮ ನುಡಿ ವಾರ್ತೆ

ರಾಯಚೂರು ಜೂನ್ 28–ಜಿಲ್ಲೆಯ ಸಿಂಧನೂರು, ಮಾನವಿ, ಸಿರವಾರ, ಮಸ್ಕಿ ಹಾಗೂ ದೇವದುರ್ಗ ತಾಲೂಕಿನ ಗ್ರಾಮಗಳಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವದೃಷ್ಟಿಯಿಂದ ಮೋಹರಂ ಹಬ್ಬವನ್ನು ಸಾರ್ವಜನಿಕವಾಗಿ ಗುಂಪುಗುಂಪಾಗಿ ಆಚರಿಸುವುದನ್ನು ಮತ್ತು ಸಾರ್ವಜನಿಕವಾಗಿ ಮೆರವಣಿಗೆ ಮಾಡುವುದನ್ನು ನಿಷೇಧಿಸಿ ಜಿಲ್ಲಾಧಿಕಾರಿಗಳಾದ ನಿತೀಶ್ ಕೆ ಅವರು ಆದೇಶ ಹೊರಡಿಸಿದ್ದಾರೆ.

ಜಿಲ್ಲೆಯಲ್ಲಿ ವಿವಿಧ ತಾಲ್ಲೂಕಿನ 23 ಗ್ರಾಮಗಳಲ್ಲಿ ಜೂನ್ 27ರಿಂದ ಜುಲೈ 6ರವರೆಗೆ ನಡೆಯಲಿರುವ ಮೊಹರಂ ಹಬ್ಬದ ಆಚರಣೆಯ ವೇಳೆ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಪೊಲೀಸ್ ಬಂದೋಬಸ್ತ್ ಪರಿಣಾಮಕಾರಿಯಾಗಿ ಜಾರಿ ತರಲು ಕರ್ನಾಟಕ ಪೊಲೀಸ್ ಕಾಯ್ದೆ 1963ರ ಕಲಂ 35 (ಎ) (ಬಿ) (ಡಿ) (ಇ)ರ ಅಡಿ ಕ್ರಮವಹಿಸಲಾಗುತ್ತದೆ.

ಜಿಲ್ಲೆಯ ಸಿಂಧನೂರು, ಮಾನವಿ, ಸಿರವಾರ, ಮಸ್ಕಿ ಹಾಗೂ ದೇವದುರ್ಗ ತಾಲೂಕಿನ ಕೆಲವು ಗ್ರಾಮಗಳಲ್ಲಿ ಈ ಹಿಂದೆ ಮೊಹರಂ ಆಚರಣೆ ಸಂದರ್ಭದಲ್ಲಿ ಅಲಾಯಿ ಕುಣಿಯುವ ಕಾಲಕ್ಕೆ ಕಾಲ್ತುಳಿತಕ್ಕೆ ಒಳಗಾಗಿ ಕ್ಷುಲ್ಲಕ ಕಾರಣಗಳಿಂದ ಯುವಕರು ಕೈಗಳಲ್ಲಿ ಬಡಿಗೆ, ಬೆತ್ತಗಳನ್ನು ಹಿಡಿದು ಜಗಳುಗಳಾಗಿ ಪ್ರಕರಣಗಳು ದಾಖಲಾಗಿರುತ್ತವೆ. 2025ನೇ ಸಾಲಿನ ಮೊಹರಂ ಹಬ್ಬದ ಹಿನ್ನೆಲೆಯಲ್ಲಿ ಈ ಗ್ರಾಮಗಳಲ್ಲಿ ಅಧಿಕಾರಿ ಸಿಬ್ಬಂದಿಯವರು ಭೇಟಿ ನೀಡಿ, ಭಾತ್ಮಿದಾರರಿಂದ ಗುಪ್ತ ಮಾಹಿತಿ ಸಂಗ್ರಹಿಸಲಾಗಿದೆ. ಪ್ರಸ್ತುತ ಸಾಲಿನಲ್ಲಿ ಗ್ರಾಮದಲ್ಲಿ ಮೊಹರಂ ಹಬ್ಬ ಆಚರಣೆ ನಡೆದಲ್ಲಿ ವಿವಿಧ ಸಮುದಾಯಗಳ ಯುವಕರ ಮಧ್ಯೆ ಪುನಃ ಹಿಂದಿನ ದ್ವೇಷದಿಂದ ಒಬ್ಬರಿಗೊಬ್ಬರು ಹೊಡೆದಾಡಿ ಗ್ರಾಮದಲ್ಲಿ ಜೀವ ಹಾನಿ ಹಾಗೂ ಆಸ್ತಿಪಾಸ್ತಿಗೆ ಹಾನಿಯಾಗಿ ಕಾನೂನು ಸುವ್ಯವಸ್ಥೆಯು ಹದೆಗೆಡುವ ಸಂಭವ ಇರುವುದರಿಂದ ಕಾನೂನು ಸುವ್ಯವಸ್ಥೆ ಕಾಪಾಡುವ ಸಲುವಾಗಿ ಮುಂಜಾಗ್ರತಾ ಕ್ರಮವಾಗಿ ಈ ವರ್ಷವೂ ಕೂಡ ಮೊಹರಂ ಹಬ್ಬವನ್ನು ಸಾರ್ವಜನಿಕವಾಗಿ ಗುಂಪು ಗುಂಪಾಗಿ ಆಚರಿಸುವುದು ಹಾಗೂ ಸಾರ್ವಜನಿಕವಾಗಿ ಮೆರವಣಿಗೆ ಮಾಡುವುದನ್ನು ನಿಷೇಧಿಸಲಾಗಿದೆ.

ಮೆರವಣಿಗೆ ನಿಷೇಧವಿರುವ ಗ್ರಾಮಗಳು: ಜಿಲ್ಲಾ ಪೊಲೀಸ್ ಅಧೀಕ್ಷಕರು ರಾಯಚೂರು ಇವರ ವರದಿನ್ವಯ ಸಿಂಧನೂರು ಪೊಲೀಸ್ ಠಾಣೆ ವ್ಯಾಪ್ತಿಯ ಗಿಣಿವಾರ, ಅರಳಹಳ್ಳಿ, ಉಪ್ಪಳ, ಗೋರೆಬಾಳ ಹಾಗೂ ಗುಂಡಾ, ತುರ್ವಿಹಾಳ ಪೊಲೀಸ್ ಠಾಣೆ ವ್ಯಾಪ್ತಿಯ ನಿಡಿಗೊಳ–ತಿಡಿಗೋಳ, ಎಲೆಕೂಡ್ಲಿಗಿ, ಚಿಕ್ಕಬೇರಿ, ಮಾನವಿ ಪೊಲೀಸ್ ಠಾಣೆಯ ವ್ಯಾಪ್ತಿಯ ನಂದಿಹಾಳ, ಜಾಗೀರ ಪನ್ನೂರು, ಜಾನೇಕಲ್ ಹಾಗೂ ಮದ್ಲಾಪೂರು, ಸಿರವಾರ ಪೊಲೀಸ್ ಠಾಣೆಯ ವ್ಯಾಪ್ತಿಯ ಸಿರವಾರ ಪಟ್ಟಣ, ಕಡದಿನ್ನಿ, ಬೊಮ್ಮನಾಳ. ಕವಿತಾಳ ಪೊಲೀಸ್ ಠಾಣೆಯ ವ್ಯಾಪ್ತಿಯ ಕವಿತಾಳ ಪಟ್ಟಣ, ಹಿರೆಬಾದರದಿನ್ನಿ, ಬಾಗಲವಾಡ, ಅಮೀನಗಡ, ಗೊಗೆಬಾಳ. ಮಸ್ಕಿ ಪೊಲೀಸ್ ಠಾಣೆಯ ವ್ಯಾಪ್ತಿಯ ತಲೇಖಾನ್. ಗಬ್ಬೂರು ಪೊಲೀಸ್ ಠಾಣೆ–ಯ ವ್ಯಾಪ್ತಿಯ ಖಾನಾಪೂರ, ಜಾಲಹಳ್ಳಿ ಪೊಲೀಸ್ ಠಾಣೆ–ಯ ವ್ಯಾಪ್ತಿಯ ಚಿಂಚೋಡಿ ಈ ಗ್ರಾಮಗಳಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ಶಾಂತಿ, ಕಾನೂನು ಮತ್ತು ಸುವ್ಯವಸ್ಥತೆ ಕಾಪಾಡುವ ಸಲುವಾಗಿ ಮುಂಜಾಗ್ರತಾ ಕ್ರಮವಾಗಿ ಮೊಹರಂ ಹಬ್ಬವನ್ನು ಸಾರ್ವಜನಿಕವಾಗಿ, ಗುಂಪು ಗುಂಪಾಗಿ ಆಚರಿಸುವುದು ಹಾಗೂ ಸಾರ್ವಜನಿಕವಾಗಿ ಮೆರವಣಿಗೆಯನ್ನು ನಿರ್ಬಂಧಿಸುವುದು ಸೂಕ್ತವೆಂದು ನಿಷೇಧಾಜ್ಞೆ ಜಾರಿಗೊಳಿಸಿ ಆದೇಶ ಹೊರಡಿಸಲಾಗಿದೆ.

# ಬಾಲ ಕಾರ್ಮಿಕ ಪದ್ಧತಿ ತಡೆ ಹಿನ್ನೆಲೆಯಲ್ಲಿ ಸಿಂಧನೂರಲ್ಲಿ ಆಟೋ ಪ್ರಚಾರದ ಜನಜಾಗೃತಿ

ಮಲ್ಲಮ್ಮ ನುಡಿ ವಾರ್ತೆ

ರಾಯಚೂರು ಜೂನ್ 27– ಸಿಂಧನೂರ ತಾಲೂಕಿನಲ್ಲಿ ಬಾಲಕಾರ್ಮಿಕ ಹಾಗೂ ಕಿಶೋರ ಕಾರ್ಮಿಕತೆ ನಿರ್ಮೂಲನೆ ಕುರಿತು ಜನಜಾಗೃತಿ ಮೂಡಿಸಲು ಎಸ್.ಸಿ.ಎಸ್.ಪಿ ಮತ್ತು ಟಿ.ಎಸ್.ಪಿ ಉಪಯೋಜನೆಯಡಿ ಹಾಗೂ ಜಿಲ್ಲಾ ಬಾಲಕಾರ್ಮಿಕ ಯೋಜನೆಯಡಿ ಆಟೋ ಪ್ರಚಾರದ ಜನಜಾಗೃತಿ ಸಂಚಾರಿ ವಾಹನಕ್ಕೆ ಸಿಂಧನೂರಿನ ಗೌರವಾನ್ವಿತ ಸಿವಿಲ್ ಪ್ರಧಾನ ನ್ಯಾಯಾಧೀಶರಾದ ಶ್ರೀಮತಿ ರೂಪ ಸಿ ವಗ್ಗ ಅವರು ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಅವರು, ಮಕ್ಕಳನ್ನು ಕೆಲಸಕ್ಕೆ ನೇಮಿಸಿಕೊಳ್ಳುವುದು ಶಿಕ್ಷಾರ್ಹ ಅಪರಾಧವಾಗಿದೆ. ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಎಲ್ಲರೂ ಸಹಕಾರ ನೀಡಬೇಕು. ಶಿಕ್ಷಣದಿಂದ ಮಾತ್ರ ಅಭಿವೃದ್ಧಿ ಸಾಧ್ಯ ಎಂದು ಹೇಳಿದರು.

ಈ ಸಂಚಾರಿ ಜನಜಾಗೃತಿ ವಾಹನವು ಎಸ್.ಸಿ ಮತ್ತು ಎಸ್.ಟಿ ಜನಾಂಗದವರು ಹೆಚ್ಚಾಗಿ ವಾಸಿಸುವ ಪ್ರದೇಶಗಳಲ್ಲಿ ತಾಲೂಕಿನಾದ್ಯಂತ ಎರಡು ದಿನಗಳ ಕಾಲ ಸಂಚರಿಸಲಿದೆ. ಈ ವೇಳೆ ಕರಪತ್ರಗಳನ್ನು ಹಂಚುವುದರ ಮತ್ತು ಸ್ಟಿಕರಗಳನ್ನು ಅಂಟಿಸುವ ಮುಖಾಂತರ ಜಾಗೃತಿ ಮೂಡಿಸಲಾಗುತ್ತದೆ. ಮಕ್ಕಳನ್ನು ಕೆಲಸಕ್ಕೆ ಕಳುಹಿಸದೇ ಶಾಲೆಗೆ ಕಳುಹಿಸಬೇಕೆಂದು ಜನರಿಗೆ ತಿಳಿವಳಿಕೆ ಮೂಡಿಸಲಾಗುತ್ತದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು.

ಇದೇ ಸಂದರ್ಭದಲ್ಲಿ ಸಿಂಧನೂರಿನ 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರಾದ ಶ್ರೀಮತಿ ಸರಸ್ವತಿ ಒಟೆಕರ್, ಸಿಂಧನೂರು ನ್ಯಾಯವಾದಿಗಳ ಸಂಘದ ಅಧ್ಯಕ್ಷರಾದ ಎನ್. ರಾಮನಗೌಡ, ವಕೀಲರಾದ ಉರುಕುಂದಪ್ಪ ಎಸ್. ಹೆಚ್.ಪಿ ಖಾದ್ರಿ, ಯು. ಬಸವಂತರಾವ್ ವಕೀಲರು, ಹನುಮಂತಪ್ಪ ಸೇರಿದಂತೆ ಕಾರ್ಮಿಕ ಇಲಾಖೆ ಸಿಬ್ಬಂದಿ ಇದ್ದರು.

# ಮುಂದೆ ಬರುವ ಪಾರ್ಮ ಕಂಪನಿಗಳ ಸ್ಥಾಪನೆಗೆ ಅವಕಾಶ ನೀಡಬೇಡಿ



ಮಲ್ಲಮ್ಮ ನುಡಿ ವಾರ್ತೆ

ಸೈದಾಪುರ:ಜೂ.27:ಇರುವ ಪಾರ್ಮ ಕಂಪನಿಗಳು ಸಾಕು ಮುಂದೆ ಬರುವ 36 ರಾಸಾಯನಿಕ ಕಂಪನಿಗಳಿಗೆ ಕಡೇಚೂರು–ಬಾಡಿಯಾಳ ಕೈಗಾರಿಕಾ ಪ್ರದೇಶದಲ್ಲಿ ಅವಕಾಶ ನೀಡಬೇಡಿ ಎಂದು ಕೈಗಾರಿಕಾ ಇಲಾಖೆಯ ಅಧಿಕಾರಿಗಳಿಗೆ ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ಟಿ ನಾರಾಯಣಸ್ವಾಮಿ ತಾಕೀತು ಮಾಡಿದರು.

ಕಡೇಚೂರು–ಬಾಡಿಯಾಳ ಕೈಗಾರಿಕಾ ಪ್ರದೇಶದ ಕೈಗಾರಿಕೆಗಳ ಭೇಟಿ ಮಾಡಿ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿ ಮಾತನಾಡಿದರು. ಈ ಪ್ರದೇಶದಲ್ಲಿ ದಿನನಿತ್ಯ ಜನರು ಅನುಭವಿಸುತ್ತಿರುವ ತೊಂದರೆಗಳನ್ನು ಪತ್ರಿಕಾ ಮಾಧ್ಯಮಗಳಲ್ಲಿ ಮತ್ತು ಗ್ರಾಮಸ್ಥರಿಂದ ಕೇಳಿದ್ದೇನೆ. ಕೆಲವೊಂದು ಭಾಗಗಳ ಅಭಿವೃದ್ಧಿಯಾಗಬೇಕಾದರೆ ಕೈಗಾರಿಕೆಗಳು ಅವಶ್ಯಕ, ಆದರೆ ಪರಿಸರಕ್ಕೆ ಮತ್ತು ಜನರಿಗೆ ತೊಂದರೆಯಾಗುವ ಕಂಪನಿಗಳ ಸ್ಥಾಪನೆ ಮಾರಕವಾಗಿದೆ. ಈ ಭೂಮಿ ಅವರ ಪೂರ್ವಿಕರಿಂದ ಬಂದ ಬಳವಳಿಯಾಗಿದ್ದು, ಕೈಗಾರಿಕೆಗಳಿಗೆ ನೀಡಿದ ಕೈಗಳಿಗೆ ಉದ್ಯೋಗ ದೊರಕುವಂತೆ ಮಾಡುವುದು ಅಧಿಕಾರಿಗಳ ಮತ್ತು ಜನಪ್ರತಿನೀಧಿಗಳ ಕರ್ತವ್ಯವಾಗಿದೆ. ಪ್ರಸ್ಥುತ ಇರುವ ಕಂಪನಿಗಳು ಪರಿಸರದ ನಿಯಮಗಳನ್ನು ಮೀರದಂತೆ ಕ್ರಮವಹಿಸಬೇಕು. ಜನರಿಗೆ ತೊಂದರೆಯಾಗದಂತೆ ಕಂಪನಿಗಳು ಕಾರ್ಯನಿರ್ವಹಿಸುವಂತೆ ಮಾಡಬೇಕು ಎಂದು ಕೈಗಾರಿಕಾ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಬಾಕ್ಸ್1: ಕೈಗಾರಿಕೆಗಳಿಗೆ ಯಾವ ರೀತಿಯಾಗಿ ಪ್ರೇಂಡ್ಲಿ ಇರಬೇಕು.?: ಸ್ಥಳಿಯ ಶಾಸಕರು ಕೈಗಾರಿಕಾ ಸಚಿವರಿಗೆ ಇಲ್ಲಿರುವ ಪರಿಸ್ಥಿಯ ಬಗ್ಗೆ ತಿಳಿಸಿದರೆ, ಅಭಿವೃದ್ಧಿಯಾಗಬೇಕಾದರೆ ಕೈಗಾರಿಕಾ ಪ್ರಂಡ್ಲಿಯಾಗಿರಬೇಕು ಎಂದು ಹೇಳಿದ್ದಾರಂತೆ, ಅವರು ಯಾವ ಅರ್ಥದಲ್ಲಿ ಹೇಳಿದಾರೊ ಗೊತ್ತಿಲ್ಲ. ಕೈಗಾರಿಕೆಗಳು ಬರಬೇಕು ಆದರೆ ಪ್ರಾಣ ಕಳೆಯೋದಕಲ್ಲ. ಪ್ರೇಂಡ್ಲಿ ಇರಬೇಕು ಅಂದರೆ ಯಾವ ರೀತಿ ಇರಬೇಕು ಎಂದು ಸಚಿವರೆ ಇಲ್ಲಿನ ಜನರಿಗೆ ಬಂದು ತಿಳಿಸಲಿ ಎಂದು ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ಟಿ ನಾರಾಯಣಸ್ವಾಮಿ ವರದಿಗಾರರ ಕೇಳಿದ ಪ್ರಶ್ನೆಗೆ ಉತ್ತರಿಸದರು.

ಈ ವೇಳೆ ಬಿಜೆಪಿ ಜಿಲ್ಲಾಧ್ಯಕ್ಷ ಬಸವರಾಜ ವಿಭೂತಿಹಳ್ಳಿ, ಯುವ ಮುಖಂಡ ಮಹೇಶರೆಡ್ಡಿ ಮುದ್ನಾಳ್, ನಾಗರತ್ನ ಕುಪ್ಪಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪರಶುರಾಮ ಕುರುಕುಂದಿ, ಗುರುಮಠಕಲ್ ಮಂಡಲ ಅಧ್ಯಕ್ಷ ನರಸಿಂಹಲು ನೀರೆಟ್ಟಿ, ಹಿರಿಯ ಮುಖಂಡ ಭೀಮಣ್ಣಗೌಡ ಕ್ಯಾತ್ನಾಳ್, ಶರಣುಗೌಡ ಬಾಡಿಯಾಳ, ಮಲ್ಲಿಕಾರ್ಜುನ ಹೋನಗೇರಾ, ಪ್ರಧಾನ ಕಾರ್ಯದರ್ಶಿ ಲಕ್ಷ್ಮಣ ನಾಯಕ್, ಯುವ ಘಟಕ ಅಧ್ಯಕ್ಷ ಶ್ರೀಧರ ಸಾಹುಕಾರ, ಮೌನೇಶ ಬೇಳಗೇರಾ, ಶ್ರೀದೇವಿ ಶೆಟ್ಟಿಹಳ್ಳಿ, ಅಮರೇಶ ನಾಯಕ್ ಕೂಡಲೂರು, ಶ್ರೀನಿವಾಸ ಕಡೇಚೂರು, ಮರಲಿಂಗ ಜೀನಿಕೆರಾ ಸೇರಿದಂತೆ ಇತರರಿದ್ದರು.

# ನಾಡಪ್ರಭು ಕೆಂಪೇಗೌಡರ ಆದರ್ಶಗಳನ್ನು ಪಾಲನೆ ಮಾಡಲು ಬಿಇಓ ಈರಣ್ಣ ಸಲಹೆ

ಮಲ್ಲಮ್ಮ ನುಡಿ ವಾರ್ತೆ

ರಾಯಚೂರು ಜೂನ್ 28– ಇಂದಿನ ಪೀಳಿಗೆಯು ನಾಡಪ್ರಭು ಕೆಂಪೇಗೌಡರು ಹಾಕಿಕೊಟ್ಟಿರುವ ಹಾದಿಯಲ್ಲೇ ನಡೆದು, ಅವರ ಆದರ್ಶಗಳನ್ನು ಪಾಲನೆ ಮಾಡಬೇಕೆಂದು ರಾಯಚೂರು ಕ್ಷೇತ್ರ ಶಿಕ್ಷಣಾಧಿಕಾರಿ ಈರಣ್ಣ ಕೋಸಗಿ ಅವರು ವಿದ್ಯಾರ್ಥಿಗಳಿಗೆ ಕಿವಿ ಮಾತು ಹೇಳಿದರು.

ಜೂ.27ರ ಶುಕ್ರವಾರ ದಂದು ನಗರದ ಪಂಡಿತ ಜಂಬಲದಿನ್ನಿ ರಂಗಮಂದಿರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರು ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ನಾಡಪ್ರಭು ಕೆಂಪೇಗೌಡ ಜಯಂತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ನಾಡಪ್ರಭು ಕೆಂಪೇಗೌಡರ ಜನ್ಮದಿನವು ಕನ್ನಡ ನಾಡಿನ ಪಾಲಿಗೆ ಒಂದು ಶುಭದಿನ. ಬೆಂಗಳೂರಿನಂಥ ಮಹಾ ನಗರಕ್ಕೆ ತಳಪಾಯ ಹಾಕಿದ ನಾಡಪ್ರಭುಗಳ ಜನ್ಮದಿನವಿದು. ಇದನ್ನು ಸರ್ಕಾರವು ವಿಜೃಂಭಣೆಯಿಂದ ಆಚರಿಸುತ್ತಿದ್ದು, ಈ ಮೂಲಕ ಬೆಂಗಳೂರಿನ ಜನಕನ್ನು ಸ್ಮರಿಸುತ್ತಿದೆ. ಈ ಮೂಲಕ, ಕೆಂಪೇಗೌಡರ ವೈಭವದ ಪರಂಪರೆಯನ್ನು ಹೊಸ ತಲೆಮಾರುಗಳಿಗೆ ವರ್ಗಾಯಿಸುವ ಕೆಲಸವೂ ಆಗುತ್ತಿದೆ ಎಂದರು.

ಈ ವೇಳೆ ಉಪನ್ಯಾಸಕರಾಗಿ ರಾಯಚೂರಿನ ಹಿರಿಯ ಸಾಹಿತಿ ವೀರಹನುಮಾನ್ ಅವರು ಮಾತನಾಡಿ, ಬೆಂಗಳೂರು ಇಂದು ಬಹುದೊಡ್ಡ ಶಿಕ್ಷಣ ತಾಣವಾಗಿದೆ. ಸಾವಿರಾರು ಜನರ ಪಾಲಿಗೆ ಸೂರಾಗಿದೆ. ವಿದೇಶೀಯರ ಪಾಲಿಗೆ ಅಚ್ಚುಮೆಚ್ಚಿನ ಹೂಡಿಕೆ, ಕೈಗಾರಿಕೆ, ಆಡಳಿತ, ಸಂಸ್ಕೃತಿ, ಶಾಂತಿ ಸೇರಿದಂತೆ ಇತರೆ ಕ್ಷೇತ್ರದಲ್ಲಿ ಬೆಂಗಳೂರು ಹೆಸರಾಗಿದೆ ಎಂದು ಹೇಳಿದರು.

ಕೆಂಪೇಗೌಡರು ಬೆಂಗಳೂರನ್ನು ತುಂಬಾ ವೈಜ್ಞಾನಿಕವಾದ ಒಂದು ನಗರವನ್ನಾಗಿ ಬೆಳೆಸಬೇಕೆಂಬ ಮಹಾದಾಸೆ ಹೊತ್ತಿದ್ದರು.

ಜನಜೀವನ ಮತ್ತು ನಾಗರಿಕತೆಗಳ ವಿಕಸನಕ್ಕೆ ನೀರಿನ ಆಸರೆ ಇರಬೇಕು. ಕೆಂಪೇಗೌಡರು ಬೆಂಗಳೂರಿನ ತುಂಬೆಲ್ಲ ಕೆರೆಗಳನ್ನು ಕಟ್ಟುತ್ತ, ಇದನ್ನು ಸಾವಿರ ಕೆರೆಗಳ ನಾಡನ್ನಾಗಿ ಮಾಡಿದರು. ಇದಕ್ಕೆ ಉದಾಹರಣೆಯಾಗಿ ಇಂದಿಗೂ ಆನೇಕ ಕೆರೆಗಳನ್ನು ನಾವು ನೋಡಬಹುದಾಗಿದೆ ಎಂದರು.

ವಿದ್ಯಾರ್ಥಿಗಳಿಂದ ನೃತ್ಯ ಪ್ರದರ್ಶನ: ರಂಗಮಂದಿರದಲ್ಲಿ ನಾಡಪ್ರಭು ಕೆಂಪೇಗೌಡ ಅವರ ಜಯಂತಿ ಅಂಗವಾಗಿ ಎಂ ಜೆ ಡ್ಯಾನ್ಸ್ & ಫಿಟ್ನೆಸ್ ಅಕಾಡೆಮಿ ವತಿಯಿಂದ ಕೆಂಪೇಗೌಡರಿಗೆ ಸಂಬಂಧಿಸಿದ ಸಾಂಗ್‌ಗೆ ವಿದ್ಯಾರ್ಥಿಗಳು ನೃತ್ಯ ಮಾಡಿ ಪ್ರೇಕ್ಷಕರ ಗಮನ ಸೆಳೆದರು.

ಇದೇ ಸಂದರ್ಭದಲ್ಲಿ ರಾಯಚೂರು ಮಹಾನಗರ ಪಾಲಿಕೆಯ ಅಧ್ಯಕ್ಷರಾದ ನರಸಮ್ಮ ಮಾಡಗಿರಿ ಸೇರಿದಂತೆ ವಿವಿಧ ಕಾಲೇಜಿನ ಪ್ರಾಂಶುಪಾಲರು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಇದ್ದರು.

## ಮೂರು ದಿನಗಳ ವಸ್ತು ಪ್ರದರ್ಶನ-ಆಕರ್ಷಿಸಿದ ಸೆಲ್ಫಿ ಕಾರ್ನರ್ ಸರಕಾರದ ಸಾಧನೆಯ ವಸ್ತು ಪ್ರದರ್ಶಕ್ಕೆ ಮೇಟಿ ಚಾಲನೆ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಜೂ.28-ಸರಕಾರದ 2 ವರ್ಷದ ಸಾಧನೆ ಹಾಗೂ ಯೋಜನೆಗಳನ್ನು ಬಿಂಬಿಸುವ ಉದ್ದೇಶದಿಂದ ನವನಗರದ ಬಸ್ ನಿಲ್ದಾಣದ ಆವರಣದಲ್ಲಿ ಜೂನ್ 28 ರಿಂದ 30ವರೆಗೆ ಹಮ್ಮಿಕೊಂಡ ವಸ್ತು ಪ್ರದರ್ಶನ ಮಳಿಗೆಗೆ ಶಾಸಕ ಹಾಗೂ ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎಚ್.ವಾಯ್.ಮೇಟಿ ಶುಕ್ರವಾರ ಚಾಲನೆ ನೀಡಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ ಹಮ್ಮಿಕೊಂಡ ಈ ವಸ್ತು ಪ್ರದರ್ಶನಕ್ಕೆ ಚಾಲನೆ ನೀಡಿದ ಶಾಸಕರು, ಸರಕಾರದ ಯೋಜನೆಗಳು ಹಾಗೂ ಸಾಧನೆ ಬಿಂಬಿಸುವ ಮಾಹಿತಿಗಳನ್ನು ವೀಕ್ಷಣೆ ಮಾಡಿದರು. ನಂತರ ಸರಕಾರದ ಯೋಜನೆಗಳ ಮಾಹಿತಿಯುಳ್ಳ ವಸ್ತು ಪ್ರದರ್ಶನ ಕುರಿತು ತಮ್ಮ ಅನಿಸಿಕೆಗಳನ್ನು ಪುಸ್ತಕದಲ್ಲಿ ಬರೆಯುವ ಮೂಲಕ ವ್ಯಕ್ತಪಡಿಸಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಸರಕಾರದ ಸಾಧನೆಗಳನ್ನು ಬಿಂಬಿಸುವ ಹಾಗೂ ಜನಪರ ಯೋಜನೆಗಳ ಮಾಹಿತಿಯನ್ನು ನೀಡುವ ವಸ್ತು ಪ್ರದರ್ಶನ ಹಮ್ಮಿಕೊಂಡಿರುವುದಕ್ಕೆ ಶಾಸಕ ಮೇಟಿ ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಸಂಗಪ್ಪ ಎಂ, ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕಿ ಕಸ್ತೂರಿ ಪಾಟೀಲ, ತಹಶೀಲ್ದಾರ ಅಮರೇಶ ಪಮ್ಮಾರ, ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ ಸಹಾಯಕ ಸಂಚಾರಿ ನಿಯಂತ್ರಣಾಧಿಕಾರಿ ಕಳ್ಳೊಳ್ಳಿ, ತಾಲೂಕಾ ಗ್ಯಾರಂಟಿ ಯೋಜನೆ ಪ್ರಾಧಿಕಾರದ ಅಧ್ಯಕ್ಷ ಎಸ್.ಎನ್. ರಾಂಪೂರ, ನಾಗರಾಜ ಹದ್ಲಿ, ದ್ಯಾಮಣ್ಣ ಗಾಳಿ ಹಾಗೂ ಇತರರು ಉಪಸ್ಥಿತರಿದ್ದರು.

ವಸ್ತು ಪ್ರದರ್ಶನದಲ್ಲಿ ಗೃಹಲಕ್ಷ್ಮೀ, ಗೃಹಜ್ಯೋತಿ, ಅನ್ನಭಾಗ್ಯ, ಶಕ್ತಿ ಯೋಜನೆ ಹಾಗೂ ಯುವನಿಧಿ ಯೋಜನೆಗಳ ಸಮಗ್ರ ಮಾಹಿತಿ ಜೊತೆಗೆ ಅನ್ನದಾತನ ಮೊಗದಲ್ಲಿ ಮಂದಹಾಸ, ಸರ್ವರಿಗೂ ಸೂರು, ಮಹಿಳೆಯರಿಗೆ ಶಕ್ತಿ, ಸರ್ವರಿಗೂ ಗುಣಮಟ್ಟದ ಆರೋಗ್ಯ ಸೌಲಭ್ಯ, ಗ್ಯಾರಂಟಿ ಬದುಕು, ಪ್ರಗತಿಯತ್ತ ಕರ್ನಾಟಕ ಹಾಗೂ ಪಂಚ ಗ್ಯಾರಂಟಿ ಯೋಜನೆಗಳ ಲಾಭ ಪಡೆದ ಫಲಾನುಭವಿಗಳ ಮಾಹಿತಿ ಸೇರಿದಂತೆ ಅನೇಕ ಯೋಜನೆಗಳ ಸಾಧನೆಗಳ ಮಾಹಿತಿಗಳನ್ನು ಅಳವಡಿಸಲಾಗಿದೆ.

### ಸಿಎಂ ಜೊತೆ ಮೇಟಿ ಸೆಲ್ಫಿ

ವಸ್ತು ಪ್ರದರ್ಶನದಲ್ಲಿ ನಾಡಿನ ಜನರ ಬದುಕು ಬೆಳಗಿಸಿದ ಗ್ಯಾರಂಟಿ ಯೋಜನೆಗಳ ಸಮಗ್ರ ಮಾಹಿತಿ, ಯಶೋಗಾಥೆಯನ್ನೊಳಗೊಂಡ ಗ್ಯಾರಂಟಿಯ ಸಮರ್ಪಣೆ, ಅಭಿವೃದ್ದಿಯ ಸಂಕಲ್ಪದ 2 ವರ್ಷಗಳ ಸಾಧನಾ ಸಂಭ್ರಮದ ಪುಸ್ತಕವನ್ನು ಮುಖ್ಯಮಂತ್ರಿಗಳಿಂದ ಪಡೆದುಕೊಳ್ಳುವಂತೆ ಬಿಂಬಿಸುವ ಸೆಲ್ಫಿಯನ್ನು ಎಚ್.ವಾಯ್.ಮೇಟಿ ತೆಗೆದುಕೊಂಡಿರುವುದು ಎಲ್ಲರ ಗಮನ ಸೆಳೆಯಿತು. ಸೆಲ್ಫಿಯಲ್ಲಿ ಜಿಲ್ಲಾಧಿಕಾರಿ ಸಂಗಪ್ಪ ಎಂ. ಸೇರಿದಂತೆ ಇತರರು ಭಾಗವಹಿಸಿದ್ದರು.

## ಬಾಗಲಕೋಟೆಯಲ್ಲಿ ಖೇಲೋ ಇಂಡಿಯಾ ಅಸ್ಮೀತಾ ವುಶು -ಚರಂತಿಮಠ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಜೂ.28-ವುಶು ಕ್ರೀಡೆಯಲ್ಲಿ ಜಿಲ್ಲೆ ಹಾಗೂ ರಾಜ್ಯದಲ್ಲಿ ಉತ್ತಮ ಕ್ರೀಡಾಪಟುಗಳಿದ್ದು ಖೇಲೋ ಇಂಡಿಯಾ ಅಸ್ಮೀತಾ ವುಶು ಲೀಗ್ ಕ್ರೀಡಾಕೂಟವನ್ನು ಬಾಗಲಕೋಟೆಯಲ್ಲಿ ಹಮ್ಮಿಕೊಳ್ಳುವ ಚಿಂತನೆಯಿದೆ ಎಂದು ರಾಜ್ಯ ವುಶು ಸಂಸ್ಥೆಯ ಅಧ್ಯಕ್ಷ ವೀರಣ್ಣ ಚರಂತಿಮಠ ಹೇಳಿದರು. ನಗರದ ಬಿ.ವಿ.ವಿ.ಸಂಘದ ಮೆಡಿಕಲ್ ಕಾಲೇಜಿನ ಆವರಣದಲ್ಲಿ ರಾಷ್ಟ್ರೀಯ ವುಶು ಚಾಂಪಿಯನ್‌ಶಿಪ್‌ನಲ್ಲಿ ಪದಕ ಪಡೆದ ರಾಜ್ಯದ ಕ್ರೀಡಾಪಟುಗಳಿಗೆ ಹಮ್ಮಿಕೊಂಡಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಕ್ರೀಡಾಪಟುಗಳನ್ನು ಸನ್ಮಾನಿಸಿ ಅವರು ಮಾತನಾಡಿದರು.

ತಮಿಳುನಾಡಿನಲ್ಲಿ ನಡೆದ 25ನೇ ರಾಷ್ಟ್ರೀಯ ಸಹ ಜೂನಿಯರ ವುಶು ಚಾಂಪಿಯನ್‌ಶಿಪ್‌ನಲ್ಲಿ ರಾಜ್ಯದ ಕ್ರೀಡಾಪಟುಗಳು ಉತ್ತಮ ಪ್ರದರ್ಶನ ನೀಡಿ ಪದಕಗಳನ್ನು ತಂದಿದ್ದು ಶ್ಲಾಘನೀಯವಾಗಿದೆ, ಜಿಲ್ಲೆ ಹಾಗೂ ರಾಜ್ಯದಲ್ಲಿ ಅತ್ಯುತ್ತಮ ಕ್ರೀಡಾ ಸಾಧಕರಿರುವುದರಿಂದ ಮುಂದಿನ ದಿನಗಳಲ್ಲಿ ರಾಜ್ಯಮಟ್ಟದ ಖೇಲೋ ಇಂಡಿಯಾ ಅಸ್ಮೀತಾ ವುಶು ಲೀಗ್ ಕ್ರೀಡಾಕೂಟವನ್ನು ಬಾಗಲಕೋಟೆಯಲ್ಲಿ ಅಯೋಜಿಸುವ ಕುರಿತು ಈಗಾಗಲೇ ಯೋಜನೆಯನ್ನು ರೂಪಿಸಲಾಗಿದೆ ಎಂದು ಹೇಳಿದರು. ರಾಜ್ಯ ವುಶು ಸಂಸ್ಥೆ ಉಪಾಧ್ಯಕ್ಷ ಅಶೋಕ ಸಜ್ಜನ, ರಾಜಶೇಖರ ಹಿರೇಮಠ, ವಾಣಿಶ್ರೀ ಎ.ಎಮ್, ರಾಜ್ಯ ವುಶು ಸಂಸ್ಥೆಯ ಖಜಾಂಚಿ ಸಂಗಮೇಶ ಲಾಯದಗುಂದಿ, ಪ್ರಧಾನ ಕಾರ್ಯದರ್ಶಿ ಅಶೋಕ ಮೊಖಾಶಿ ಇದ್ದರು. ಮೇ. 26ರಿಂದ 31ರ ವರಗೆ ನಡೆದ 25ನೇ ರಾಷ್ಟ್ರೀಯ ಸಹ ಜೂನಿಯರ ವುಶು ಚಾಂಪಿಯನ್‌ಶಿಪ್‌ನಲ್ಲಿ ಪ್ರಣತಿ ಜಿ, ಸಾನ್ವಿ ಶೆಟ್ಟಿ, ನೈನಾ ಜೈನ್ ಬೆಳ್ಳಿಯ ಪದಕ ಹಾಗೂ ಸಾನ್ವಿ ನೇಟಿಕಟ್ಟಿ, ಪಿ.ಸಾನ್ವಿ, ಅನ್ನಪೂರ್ಣೇಶ್ವರಿ, ಸಾನ್ವಿ ಪಿ, ದೃವಿನಕುಮಾರ ಅಬುಬಕರ್ ಹಾಗೂ ಸಾನಿಯಾ ಕಂಚಿನ ಪದಕ ಪಡೆದುಕೊಂಡಿದ್ದಾರೆ.

ಜೂನ 14 ರಿಂದ 19 ರವರೆಗೆ ಜೈಪುರದ ಪೂರ್ಣಿಮಾ ವಿಶ್ವವಿದ್ಯಾಲಯದಲ್ಲಿ ನಡೆದ 34 ನೇ ರಾಷ್ಟ್ರೀಯ ಸೀನಿಯರ ವುಶು ಚಾಂಪಿಯನ್ ಶಿಪ್‌ನಲ್ಲಿ ರಾಜ್ಯದ ವಿನೋದಕುಮಾರ 75 ಕೆಜಿ ಸಾಚಿಡಾ ವಿಭಾಗದಲ್ಲಿ ಬೆಳ್ಳಿಯ ಪದಕ ಹಾಗೂ ಅನಿತಾ ಚವ್ಹಾಣ ತಾವಲು ವಿಭಾಗದಲ್ಲಿ ಉತ್ತಮ ಪ್ರದರ್ಶನ ನೀಡಿ ಕಂಚಿನ ಪದಕ ಪಡೆದು ರಾಜ್ಯಕ್ಕೆ ಹಾಗೂ ಜಿಲ್ಲೆಗೆ ಕೀರ್ತಿ ತಂದಿದ್ದಾರೆ. ರಾಜ್ಯ ವುಶು ಸಂಸ್ಥೆ ಉಪಾಧ್ಯಕ್ಷ ಅಶೋಕ ಸಜ್ಜನ, ರಾಜಶೇಖರ ಹಿರೇಮಠ, ವಾಣಿಶ್ರೀ ಎ.ಎಮ್, ರಾಜ್ಯ ವುಶು ಸಂಸ್ಥೆಯ ಖಜಾಂಚಿ ಸಂಗಮೇಶ ಲಾಯದಗುಂದಿ, ಪ್ರಧಾನ ಕಾರ್ಯದರ್ಶಿ ಅಶೋಕ ಮೊಖಾಶಿ ಇದ್ದರು.

## ಜು.2 ಹೋಮಿಯೋಪಥಿ ಔಷಧ ದೃಢಪಡಿಸುವ ಕೇಂದ್ರದ ಉದ್ಘಾಟನೆ




ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಜೂ.28-ಭಾರತ ಸರಕಾರದ ಆಯುಷ್ ಇಲಾಖೆ ನಗರದ ಬಸವೇಶ್ವರ ವೀರಶೈವ ವಿದ್ಯಾವರ್ಧಕ ಸಂಘದ ಹೋಮಿಯೋಪಥಿ ಹಾಗೂ ಆಸ್ಪತ್ರೆಗೆ ಮಂಜೂರಿ ಮಾಡಿರುವ ಹೋಮಿಯೋಪಥಿ ಔಷಧಿ ದೃಢಪಡಿಸುವ ಕೇಂದ್ರದ ಉದ್ಘಾಟನೆ ಜುಲೈ 2 ರಂದು ನಡೆಯಲಿದೆ.

ಶೈಕ್ಷಣಿಕ ಕ್ರಾಂತಿಯ ಮೂಲಕ ಕರ್ನಾಟಕದಲ್ಲಿ ಹೆಸರುವಾಸಿಯಾಗಿರುವ ಬಸವೇಶ್ವರ ವೀರಶೈವ ವಿದ್ಯಾ ವರ್ಧಕ ಸಂಘಕ್ಕೆ ಈ ಕೇಂದ್ರ ಮತ್ತೊಂದು ಮೈಲಿಗಲ್ಲು ಆಗಲಿದೆ. ಇದು ಉತ್ತರ ಕರ್ನಾಟಕದಲ್ಲೇ ಮೊದಲ ಕೇಂದ್ರವಾಗಿದೆ ಎಂದು ಪ್ರಾಚಾರ್ಯ ಡಾ.ಅರುಣ ಹೂಲಿ ತಿಳಿಸಿದ್ದಾರೆ. ಸಮಾರಂಭದ ಅಧ್ಯಕ್ಷತೆಯನ್ನು ಕಾರ್ಯಾಧ್ಯಕ್ಷ ವೀರಣ್ಣ ಚರಂತಿಮಠ ವಹಿಸುವರು. ಕಾಲೇಜು ಆಡಳಿತ ಮಂಡಳಿಯ ಕಾರ್ಯಾಧ್ಯಕ್ಷ ಮಲ್ಲಿಕಾರ್ಜುನ ಸಾಸನೂರ ಉಪಸ್ಥಿತರಿರುವರು. ಆಯುಷ್ ಇಲಾಖೆಯ ಹೋಮಿಯೋಪಥಿ ಔಷಧಿ ಧೃಢಪಡಿಸುವ ಕೇಂದ್ರದ ಚೇರಮನ್ ಡಾ.ಶಶಿಕಾಂತ ತಿವಾರಿ, ಸದಸ್ಯ ಡಾ.ಶ್ರೀಪಾದ ಹೆಗಡೆ ಹಾಗೂ ಹಿರಿಯ ಹೋಮಿಯೋ ವೈದ್ಯ ವಿಜ್ಞಾನಿ ಡಾ.ಪ್ರೀತಾ ಮೆಹರಾ ಕೇಂದ್ರವನ್ನು ಉದ್ಘಾಟಿಸಿ ವೈದ್ಯ ಉಪನ್ಯಾಕಸರಿಗೆ ಹಾಗೂ ವೈದ್ಯ ವಿದ್ಯಾರ್ಥಿಗಳಿಗೆ ತರಬೇತಿ ಕಾರ್ಯಾಗಾರ ನಡೆಸಿಕೊಡಲಿದ್ದಾರೆ ಎಂದು ಹೇಳಿದರು. ಹೊಸ ಹೊಸ ರೋಗಗಳ ಕುರಿತು ಸಂಶೋಧನೆ, ಔಷಧ ನಿರ್ಣಯದಂತಹ ವಿಶಿಷ್ಠ ಚಟುವಟಿಕೆಗಳನ್ನು ಇಲ್ಲಿ ಕೈಗೊಳ್ಳುವುದರಿಂದ ಈ ಕೇಂದ್ರ ಜನಸಾಮಾನ್ಯರಿಗೆ ಸಂಜೀವಿನಿಯಾಗಲಿದೆ ಎಂದು ಪ್ರಾಧ್ಯಾಪಕ ಡಾ.ರವಿ.ಕೋಟೆಣ್ಣವರ. ಡಾ.ವಿ.ಎಸ್.ಸಂಕೇಶ್ವರಿ, ಡಾ.ಸುಧೀರ ಬೆಟಗೇರಿ ತಿಳಿಸಿದ್ದಾರೆ.

## ನಾಟಕಕ್ಕೆ ಭಾವನೆ ಶುದ್ಧೀಕರಿಸುವ ಶಕ್ತಿಯಿದೆ-ಡಾ.ಶ್ರೀಶೈಲ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಜೂ.28-ನವರಸಗಳ ಮೂಲಕ ಜೀವನದ ಅನೇಕ ಸಂಗತಿಗಳನ್ನು ರಂಗದ ಮೇಲೆ ಸಶಕ್ತವಾಗಿ ನಿರೂಪಿಸುವ ಹಾಗೂ ಮನುಷ್ಯನ ಭಾವನೆಗಳನ್ನು ಶುದ್ಧೀಕರಣಗೊಳಿಸುವ ಶಕ್ತಿ ನಾಟಕಗಳಿಗಿದೆ ಎಂದು ಹುನಗುಂದ ವಿಜಯ ಮಹಾಂತೇಶ ಪದವಿ ಕಾಲೇಜಿನ ಪ್ರಾಚಾರ್ಯ ಡಾ.ಶ್ರೀಶೈಲ ಗೋಲಗೊಂಡ ಹೇಳಿದರು.

ಜಿಲ್ಲೆಯ ಹುನಗುಂದ ಪಟ್ಟಣದ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಪಿ.ಬಿ.ಧುತ್ತರಗಿ ಟ್ರಸ್ಟ್ (ಸೂಳೇಭಾವಿ) ಬಾಗಲಕೋಟೆ ವತಿಯಿಂದ ನಡೆದ ಕವಿ ಪಿ.ಬಿ.ಧುತ್ತರಗಿಯವರ ಜನ್ಮ ದಿನಾಚರಣೆ ನಿಮಿತ್ತ ಧುತ್ತರಗಿಯವರ 'ಸಂಪತ್ತಿಗೆ ಸವಾಲ್' ಮತ್ತು ಡಾ.ಚಂದ್ರಶೇಖರ ಕಂಬಾರ ಅವರ 'ಬೋಳೇಶಂಕರ' ನಾಟಕಗಳ ಓದು-ವಿಮರ್ಶೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು ಮಾತನಾಡಿದರು.

ನಾಟಕ ಪರಂಪರೆಗೆ ಕನ್ನಡದ ಅನೇಕ ನಾಟಕಕಾರರು ತಮ್ಮದೇ ಕೊಡುಗೆ ನೀಡಿದ್ದು ಗುಬ್ಬಿ ವೀರಣ್ಣ ಪ್ರಶಸ್ತಿ ಪುರಸ್ಕೃತರಾದ ಪಿ.ಬಿ.ಧುತ್ತರಗಿಯವರು ಅನೇಕ ಸಾಮಾಜಿಕ, ಪೌರಾಣಿಕ, ಐತಿಹಾಸಿಕ, ಭಕ್ತಿಪ್ರಧಾನ ನಾಟಕಗಳನ್ನು ಬರೆದು ನಾಟಕ ಪರಂಪರೆಗೆ ಮಹತ್ತರ ಕೊಡುಗೆ ನೀಡಿದ್ದಾರೆ ಎಂದು ಡಾ.ಶ್ರೀಶೈಲ ಹೇಳಿದರು.

ಧುತ್ತರಗಿ ಅವರ ಸಂಪತ್ತಿಗೆ ಸವಾಲ್ ನಾಟಕ ಕುರಿತು ಮಾತನಾಡಿದ ಹಿರಿಯ ರಂಗಕರ್ಮಿ, ವಕೀಲ ಮಹಾಂತೇಶ ಅವಾರಿ, ಶೋಷಣೆಯ ವಿರುದ್ಧ ಮಾತನಾಡುವ, ಬಂಡವಾಳಶಾಹಿ ವ್ಯವಸ್ಥೆಯನ್ನು ಪ್ರಶ್ನಿಸುವ ಮತ್ತು ಅನ್ಯಾಯದ ವಿರುದ್ಧ ಧ್ವನಿ ಎತ್ತುವಿಕೆಯ ಮೂಲಕ ಸಮಾಜವನ್ನು ಎಚ್ಚರಿಸುವ ನಾಟಕ ಇದಾಗಿದೆ ಎಂದರು.


ಡಾ.ಚಂದ್ರಶೇಖರ ಕಂಬಾರರ ಬೋಳೇಶಂಕರ ನಾಟಕ ಕುರಿತು ಮಾತನಾಡಿದ ಉಪನ್ಯಾಸಕ ವೀರಭದ್ರಯ್ಯ ಶಶಿಮಠ, ನೆಲಮೂಲ ಸಂಸ್ಕೃತಿಯೊಂದಿಗೆ ಆಧುನಿಕತೆಯ ಸಂಘರ್ಷದ ವಿವಿಧ ಮಜಲುಗಳನ್ನು, ಉತ್ತರ ಕರ್ನಾಟಕದ ಭಾಷೆಯನ್ನು ಸಶಕ್ತವಾಗಿ ಬಳಸಿಕೊಂಡು ಗ್ರಾಮ ಮತ್ತು ನಗರಗಳ ಮಧ್ಯದ ಹೋಲಿಕೆಗಳನ್ನು, ಸೂಕ್ಷ್ಮ ಸ್ವಭಾವದವರು ಅನುಭವಿಸುವ ಯಾತನೆಗಳನ್ನು, ಶ್ರಮ ಸಂಸ್ಕೃತಿ ಮತ್ತು ವರ್ಗ ಸಂಘರ್ಷವನ್ನು, ನೋವು ಕೊಟ್ಟವರಿಗೂ ಮಾನವೀಯತೆ ಮೂಲಕ ಉತ್ತರಿಸುವ ಆಶಯವನ್ನು ವಿಶೇಷವಾಗಿ ಶಿವಾಪುರ ಗ್ರಾಮದಲ್ಲಿ ನಡೆಯುವ ಅನೇಕ ಘಟನೆಗಳನ್ನು ಈ ನಾಟಕದ ಮೂಲಕ ತಿಳಿಯಬಹುದು ಎಂದರು. ಅಧ್ಯಕ್ಷತೆ ವಹಿಸಿದ್ದ ಪಿ.ಬಿ.ಧುತ್ತರಗಿ ಟ್ರಸ್ಟ್ ಅಧ್ಯಕ್ಷ ಎಸ್.ಕೆ.ಕೊನೆಸಾಗರ, ನಾಟಕಗಳು ಮಾನವ ಸಮಾಜದ ಬದುಕಿನ ಪ್ರತಿಬಿಂಬಗಳಂತಿದ್ದು, ಸಮಾಜದ ಮಹತ್ವದ ಸ್ಥಿತ್ಯಂತರಗಳಿಗೆ ಕಾರಣವಾಗುತ್ತದೆ. ಜೊತೆಗೆ ಸಮಾಜದಲ್ಲಿ ವೈಚಾರಿಕ ಬೆಳಕು ನೀಡಿ ಹಲವು ಬದಲಾವಣೆಗೆ ಕಾರಣವಾಗುತ್ತದೆ ಎಂದರು.

ನಗರದ ಹಿರಿಯ ರಂಗ ಕಲಾವಿದ ಅನಂತ ಬಬಲೇಶ್ವರ, ಟ್ರಸ್ಟಿನ ಸದಸ್ಯರಾದ ಇಬ್ರಾಹಿಂ ಕನಸಾವಿ ಮತ್ತು ಸುನಂದಾ ಕಂದಗಲ್ಲ, ಕಾಲೇಜು ಅಭಿವೃದ್ಧಿ ಸಮಿತಿ ಸದಸ್ಯರಾದ ಮುತ್ತಣ್ಣ ಗಂಜೀಹಾಳ, ಹುಚ್ಚೇಶ ಕಾಳಹಸ್ತಿಮಠ, ಪ್ರಭು ನಾಗೂರ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ರಂಗಾಸಕ್ತರಾದ ಜಿ.ಬಿ.ಕಂಬಾಳಿಮಠ, ಡಾ.ಎಂ.ಬಿ.ಒಂಟಿ, ಸಿದ್ದಲಿಂಗಪ್ಪ ಬೀಳಗಿ, ಶಿವಪುತ್ರಪ್ಪ ತಾರಿವಾಳ, ಪಿ.ಐ.ಮುಚಖಂಡಿ, ಟ್ರಸ್ಟಿನ ಸಿಬ್ಬಂದಿ ರಾಜೇಶ ಸರೂರ, ಕಾಲೇಜಿನ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಕುವೆಂಪು ಮತ್ತು ಇತರ ನಾಟಕಗಳ ಫೋಟೋ ಪ್ರದರ್ಶನ ಏರ್ಪಡಿಸಲಾಗಿತ್ತು.

ಸೇವಂತಿ ಬೆಣಗಿ ಪ್ರಾರ್ಥಿಸಿದರು. ಪ್ರಭಾರ ಪ್ರಾಚಾರ್ಯ ಶರಣಪ್ಪ ಹೂಲಗೇರಿ ಸ್ವಾಗತಿಸಿದರು. ಟ್ರಸ್ಟಿನ ಕಾರ್ಯದರ್ಶಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಕರ್ಣಕುಮಾರ ಜೈನಾಪೂರ ವಂದಿಸಿದರು. ಉಪನ್ಯಾಸಕ ಐ.ಎಚ್.ನಾಯಕ ನಿರೂಪಿಸಿದರು.

## ಶ್ರವಣ ಸಾಧನಗಳ ಉಚಿತ ವಿತರಣೆ: ಆರೋಗ್ಯ ಯೋಜನೆ ಸದುಪಯೋಗಪಡಿಸಿಕೊಳ್ಳಿ-ಚರಂತಿಮಠ



ಮಲ್ಲಮ್ಮ ನುಡಿ ವಾರ್ತೆ


ಬಾಗಲಕೋಟೆ,ಜೂ.28-ಆರ್ಥಿಕವಾಗಿ ಹಿಂದುಳಿದ ಕುಟುಂಬಗಳಿಗೆ ನೆರವಾಗುವ ಉದ್ದೇಶದಿಂದ ಕೇಂದ್ರ ಸರ್ಕಾರ ಜಾರಿಗೊಳಿಸಿರುವ ಆರೋಗ್ಯ ಯೋಜನೆಗಳನ್ನು ಸಾರ್ವಜನಿಕರು ಸದುಪಯೋಗಪಡಿಸಿಕೊಳ್ಳಬೇಕು ಎಂದು ಬಿ.ವಿ.ವಿ ಸಂಘದ ಕಾರ್ಯಾಧ್ಯಕ್ಷ ವೀರಣ್ಣ ಚರಂತಿಮಠ ಹೇಳಿದರು.

ಎಸ್.ನಿಜಲಿಂಗಪ್ಪ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಹಾನಗಲ್ಲ ಕುಮಾರೇಶ್ವರ ಆಸ್ಪತ್ರೆಯಲ್ಲಿ ರೋಗಿಗಳಿಗೆ ಉಚಿತ ಶ್ರವಣ ಸಾಧನಗಳನ್ನು ವಿತರಿಸಿ ಮಾತನಾಡಿದ ಅವರು, ಕೇಂದ್ರ ಸರ್ಕಾರದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆ ಅಡಿಪ್ ಯೋಜನೆಯಡಿ ರೋಗಿಗಳಿಗೆ ಶ್ರವಣ ಸಾಧನಗಳನ್ನು ಉಚಿತವಾಗಿ ವಿತರಿಸಲಾಗುತ್ತಿದೆ. ಸುಸ್ಥಿರ ಆರೋಗ್ಯಕ್ಕಾಗಿ ಕೇಂದ್ರ ಸರ್ಕಾರ ವಿಶೇಷಚೇತನರಿಗೆ ಅತ್ಯುತ್ತಮ ಮಾದರಿಯ ಉಪಕರಣಗಳನ್ನು ವಿತರಿಸುತ್ತಿದೆ ಎಂದರು.

ಈ ಯೋಜನೆಯ ಭಾಗವಾಗಿ ಇಂದು ಕುಮಾರೇಶ್ವರ ಆಸ್ಪತ್ರೆಯಲ್ಲಿ ಶ್ರವಣ ಸಾಧನಗಳನ್ನು ವಿತರಿಸಲಾಗುತ್ತಿದೆ. ಆರೋಗ್ಯಕರ ಸಮಾಜ ನಿರ್ಮಾಣಕ್ಕಾಗಿ ಕೇಂದ್ರ ಸರ್ಕಾರದ ಕಾರ್ಯಯೋಜನೆಗಳನ್ನು ಸಾರ್ವಜನಿಕರಿಗೆ ತಲುಪಿಸಲು ಕುಮಾರೇಶ್ವರ ಆಸ್ಪತ್ರೆ ಪ್ರಯತ್ನಿಸುತ್ತಿದೆ ಎಂದು ಚರಂತಿಮಠ ಹೇಳಿದರು.

ಕಾರ್ಯಕ್ರಮದಲ್ಲಿ ಬಿ.ಪಿ.ಎಲ್ ಕುಟುಂಬಗಳ ಒಟ್ಟು 22 ರೋಗಿಗಳಿಗೆ ಉಚಿತವಾಗಿ ಮತ್ತು ಎ.ಪಿ.ಎಲ್ ಕುಟುಂಬಗಳ 4 ರೋಗಿಗಳಿಗೆ ಪ್ರತಿಶತ 50 ರ ರಿಯಾಯಿತಿ ದರದಲ್ಲಿ ಶ್ರವಣ ಸಾಧನಗಳನ್ನು ವಿತರಿಸಲಾಯಿತು. ಈ ಸಂದರ್ಭದಲ್ಲಿ ವೈದ್ಯಕೀಯ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಅಶೋಕ ಎಮ್.ಸಜ್ಜನ (ಬೇವೂರ), ಕಟ್ಟಡ ಸಮಿತಿ ಕಾರ್ಯಾಧ್ಯಕ್ಷ ಮಹೇಶ ಕಕರಡ್ಡಿ, ಮೆಡಿಕಲ್ ಕಾಲೇಜಿನ ಪ್ರಾಚಾರ್ಯ ಡಾ.ಭುವನೇಶ್ವರಿ ಯಳಮಲಿ, ವೈದ್ಯಕೀಯ ಅಧೀಕ್ಷಕ ಡಾ.ಶ್ರೀರಾಮ ಕೋರಾ, ಇ.ಎನ್.ಟಿ ವಿಭಾಗದ ಮುಖ್ಯಸ್ಥ ಡಾ.ಸಿ.ಎಸ್.ಹಿರೇಮಠ, ಬಿ.ವಿ.ವಿ.ಎಸ್ ವಾಕ್ ಮತ್ತು ಶ್ರವಣ ಸಂಸ್ಥೆಯ ಪ್ರಾಚಾರ್ಯ ಡಾ.ಶ್ರೀವಿದ್ಯಾ ಮತ್ತು ಸಿಬ್ಬಂದಿ, ಮೆಡಿಕಲ್ ಕಾಲೇಜಿನ ವಿವಿಧ ವಿಭಾಗಗಳ ಮುಖ್ಯಸ್ಥರು, ವೈದ್ಯರು, ವಿದ್ಯಾರ್ಥಿಗಳು ಮತ್ತು ಫಲಾನುಭವಿಗಳು ಹಾಗೂ ಅವರ ಕುಟುಂಬದ ಸದಸ್ಯರು ಉಪಸ್ಥಿತರಿದ್ದರು.

## ಇಂದು ಮೂರ್ತಿ ಪ್ರತಿಷ್ಠಾಪನೆ ನಿಮಿತ್ಯ ಬೃಹತ್ ಬೈಕ್ ರ್ಯಾಲಿ



ಮಲ್ಲಮ್ಮ ನುಡಿ ವಾರ್ತೆ

ತಾಳಿಕೋಟಿ: ಪಟ್ಟಣದ ಆರಾಧ್ಯ ದೈವ ಶ್ರೀ ಖಾಸ್ಗತೇಶ್ವರ ಮಠದ ಲಿಂಗೈಕ್ಯ ವಿರಕ್ತ ಮಹಾಸ್ವಾಮಿಗಳ ನೂತನ ಮೂರ್ತಿ ಪ್ರತಿಷ್ಠಾಪನೆ ನಿಮಿತ್ಯವಾಗಿ ಪಟ್ಟಣದಲ್ಲಿ ಬೃಹತ್ ಯುವ ಬೈಕ್ ರ್ಯಾಲಿ ಇಂದು(ಜೂ.29) ನಡೆಯಲಿದೆ. ಪಟ್ಟಣದ ಮಿಣಜಗಿ ಕ್ರಾಸ್ ನಲ್ಲಿರುವ ಕೌಟಿಲ್ಯ ಅಕಾಡೆಮಿ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ, ಶ್ರೀ ಖಾಸ್ಗತೇಶ್ವರ ಮಠದ ಪರಮ ಭಕ್ತ ರಾಜಶೇಖರ ಸಜ್ಜನ ಇವರ ಕುಟುಂಬಸ್ಥರ ನೇತೃತ್ವದಲ್ಲಿ ನಿರ್ಮಾಣಗೊಂಡಿರುವ ಲಿಂಗೈಕ್ಯ ಪರಮ ಪೂಜ್ಯ ವಿರಕ್ತಮಹಾಸ್ವಾಮಿಗಳ 4ಅಡಿ ಎತ್ತರದ ಈ ಭವ್ಯ ಮೂರ್ತಿಯನ್ನು ಶ್ರೀ ಕೌಟಿಲ್ಯ ಅಕಾಡೆಮಿಯಿಂದ ಮೆರವಣಿಗೆಯ ಮೂಲಕ ತರಲಾಗುತ್ತಿದ್ದು ಇದರ ನಿಮಿತ್ಯವಾಗಿ ಇಂದು ಸಂಜೆ 4:30 ಘಂಟೆಗೆ ಪಟ್ಟಣದ ಬಸವೇಶ್ವರ ವೃತ್ತದಿಂದ ಶ್ರೀ ಖಾಸ್ಗತೇಶ್ವರ ಮಠದವರೆಗೆ ಬೈಕ್ ರ್ಯಾಲಿ ಮೂಲಕ ತರಲು ನಿರ್ಧರಿಸಿದ್ದು ಇದರಲ್ಲಿ ಮಠದ ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕೆಂದು ಶ್ರೀಮಠದ ಪರಮ ಪೂಜ್ಯ ಸಿದ್ಧಲಿಂಗ ದೇವರು ತಿಳಿಸಿದ್ದಾರೆ.


## ಬದ್ಧತೆ, ನಿಷ್ಠೆಯ ಸೇವೆಯಿಂದ ಸಾರ್ಥಕತೆ ಸಾಧ್ಯ




ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ : ಜೂ.28:ಸರ್ಕಾರಿ ನೌಕರಿ ಪಡೆಯುವುದು, ದೀರ್ಘಕಾಲ ಸೇವೆ ಸಲ್ಲಿಸುವುದೇ ಸಾಧನೆಯಲ್ಲ. ಬದಲಿಗೆ ದೊರೆತ ಹುದ್ದೆಯನ್ನು ಬದ್ಧತೆ, ನಿಷ್ಠೆಯಿಂದ ನಿಭಾಯಿಸುವ ಮೂಲಕ ಹುದ್ದೆಗೆ ನ್ಯಾಯವನ್ನು ಒದಗಿಸಿಕೊಟ್ಟರೆ ಅಂತಹ ಸೇವೆ ನಿಜಕ್ಕೂ ಸಾರ್ಥಕತೆ ಪಡೆಯಲು ಸಾಧ್ಯವಾಗುತ್ತದೆ ಎಂದು ಉಪನ್ಯಾಸಕಿ ರೇಣುಕಾ ಚಿಕ್ಕಮೇಟಿ ಮಾರ್ಮಿಕವಾಗಿ ಹೇಳಿದರು. ಜೇವರ್ಗಿ ಪಟ್ಟಣದ ಬಸವೇಶ್ವರ ವೃತ್ತದ ಸಮೀಪವಿರುವ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ಶುಕ್ರವಾರ ತಮಗೆ ಜರುಗಿದ ವರ್ಗಾವಣೆ ಬೀಳ್ಕೊಡುಗೆಯಲ್ಲಿ ಸತ್ಕಾರ ಸ್ವೀಕರಿಸಿ, ಅವರು ಮಾತನಾಡುತ್ತಿದ್ದರು. ನಾನು ಗುಡಿ-ಗುಂಡಾರಗಳಲ್ಲಿ ದೇವರನ್ನು ಕಾಣುವುದಿಲ್ಲ. ನನ್ನ ಅನ್ನದಾತ ವಿದ್ಯಾರ್ಥಿ ಬಂಧುಗಳಲ್ಲಿ ದೇವರನ್ನು ಕಾಣುತ್ತೇನೆ. ನಾನು ಇಲ್ಲಿ ಸಲ್ಲಿಸಿರುವ ಸೇವೆ ಆತ್ಮತೃಪ್ತಿ ತಂದಿದೆ. ನನ್ನ ವಿದ್ಯಾರ್ಥಿಗಳು ಉನ್ನತವಾದ ಸಾಧನೆಯನ್ನು ಮಾಡಿ, ಕಾಲೇಜಿನ ಕೀರ್ತಿಯನ್ನು ತರಬೇಕು. ಕಾಲೇಜಿನ ಎಲ್ಲಾ ಸಿಬ್ಬಂದಿಗಳ ಸಹಕಾರಕ್ಕೆ ಧನ್ಯವಾದ ಸಲ್ಲಿಸುತ್ತೇನೆ. ಶಿಕ್ಷಕರು ತಮ್ಮ ವೈಯಕ್ತಿಕ ಕಷ್ಟಗಳು ಏನೇ ಇರಲಿ, ಎಂದಿಗೂ ಕೂಡಾ ವಿದ್ಯಾರ್ಥಿಗಳಿಗೆ ತೊಂದರೆಯಾಗದಂತೆ ಬೋಧನೆ ಮಾಡಿ, ಅವರ ಬದುಕನ್ನು ಕಟ್ಟಿಕೊಟ್ಟಿದ್ದೆಯಾದರೆ, ಖಂಡಿತವಾಗಿಯೂ ವಿದ್ಯಾರ್ಥಿಗಳು ಅಂತಹ ಶಿಕ್ಷಕರನ್ನು ಎಂದಿಗೂ ಕೂಡಾ ಮರೆಯಲಾರರು ಎಂದು ತಮ್ಮ ಮನದಾಳದ ಇಂಗಿತವನ್ನು ವ್ಯಕ್ತಪಡಿಸಿದರು. ಪ್ರಾಚಾರ್ಯ ರವೀಂದ್ರಕುಮಾರ ಸಿ. ಬಟಗೇರಿ, ಉಪನ್ಯಾಸಕರಾದ ಮಲ್ಲಿಕಾರ್ಜುನ ದೊಡ್ಡಮನಿ, ಎಚ್.ಬಿ.ಪಾಟೀಲ್, ಮಲ್ಲಪ್ಪ ರಂಜಣಗಿ, ದುಂಡಪ್ಪ ಯರಗೋಳ, ಶಿಕ್ಷಣ ಪ್ರೇಮಿ ಬಸವರಾಜ ಹಡಪದ, ಚಂದ್ರು, ಸೇವಕ ಭಾಗಣ್ಣ ಹರನೂರ ಸೇರಿದಂತೆ ಇನ್ನಿತರರು ಇದ್ದರು.

## ಸಂತ್ರಸ್ಥರ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ನಾಳೆ ಪ್ರತಿಭಟನೆ



ಮಲ್ಲಮ್ಮ ನುಡಿ ವಾರ್ತೆ

ಬಾಗಲಕೋಟೆ,ಜೂ.28-ಯುಕೆಪಿ ಸಂತ್ರಸ್ತರ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ಭಾರತೀಯ ಕಿಸಾನ್ ಸಂಘವು ಬಾಗಲಕೋಟೆ ಜಿಲ್ಲಾ ಘಟಕದಿಂದ ಜೂ.30ರಂದು ಬೆಳಗ್ಗೆ 10 ಗಂಟೆಗೆ ವಿಜಯಪುರ ಜಿಲ್ಲೆಯ ನಿಡಗುಂದಿ ಬಸ್ ನಿಲ್ದಾಣ ಎದುರಿಗೆ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಜಿಲ್ಲಾಧ್ಯಕ್ಷ ವಿರುಪಾಕ್ಷ ಹಿರೇಮಠ ಹೇಳಿದರು.

ಶನಿವಾರ ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರತಿಭಟನೆಯಲ್ಲಿ ಬಾಗಲಕೋಟೆ ಜಿಲ್ಲೆಯ ಬೀಳಗಿ, ಜಮಖಂಡಿ ಹಾಗೂ ಮುಧೋಳ ತಾಲೂಕಿನ ಸಂತ್ರಸ್ತರು ಪಾಲ್ಗೊಳ್ಳಲಿದ್ದಾರೆ ಎಂದರು.

ಕೃಷ್ಣಾ ಮೇಲ್ದಂಡೆ ಯೋಜನೆಯ ಹಿನ್ನಿರಿನಿಂದ ಮುಳುಗಡೆಯಾಗಿರುವ ಹಳ್ಳಿಗಳ ಪುನರ್‌ವಸತಿ ಹಾಗೂ 521.6 ಮೀಟರ್ ವರೆಗೆ ಮುಳುಗಿ 524 ರವರೆಗೆ ಸವಳು-ಜವಳು ಆಗಿರುವ ರೈತರ ಜಮೀನುಗಳಿಗೆ ಯೋಗ್ಯ ಪರಿಹಾರ ಹಾಗೂ ಈಗಾಗಲೇ ಸರ್ವೆಯಾಗಿ ಐತೀರ್ಪು ಹಂತಕ್ಕೆ ಬಂದಿರುವ ಗ್ರಾಮಗಳ ಜಮೀನುಗಳಿಗೆ ತಕ್ಷಣ ಪರಿಹಾರ ನೀಡುವಂತೆ ಪ್ರತಿಭಟನೆಯಲ್ಲಿ ಸರಕಾರವನ್ನು ಒತ್ತಾಯಿಸಲಾಗುವುದು.

ಆಲಮಟ್ಟಿ ಜಲಾಶಯದಲ್ಲಿ 524.6 ಮೀಟರ್ ನೀರು ಸಂಗ್ರಹಿಸಿ 25ಲಕ್ಷ ಎಕರೆ ಜಮೀನಿಗೆ ನೀರಾವರಿ ಸೌಲಭ್ಯ ಒದಗಿಸಬೇಕು ಎಂದು ಆಗ್ರಹಿಸಿದ ಹಿರೇಮಠ, ಪ್ರತಿಭಟನೆಯಲ್ಲಿ ಎಲ್ಲ ಸಂತ್ರಸ್ಥ ರೈತ ಬಾಂಧವರು ಪಾಲ್ಗೊಳ್ಳಬೇಕೆಂದು ಮನವಿ ಮಾಡಿದರು. ಪತ್ರಿಕಾಗೋಷ್ಠಿಯಲ್ಲಿ ಸಿದ್ಧನಗೌಡ ಪಾಟೀಲ, ಸುಬ್ಬರಾಯಗೌಡ ಪಾಟೀಲ, ಕುಮಾರ ಯಡಹಳ್ಳಿ ಇದ್ದರು.

## ಜೋಶಿಗೆ ಕರ್ನಾಟಕ ಛಾಯಾರತ್ನ ಪ್ರಶಸ್ತಿ



ಮಲ್ಲಮ್ಮ ನುಡಿ ವಾರ್ತೆ

ಕಲಬುರಗಿ,ಜೂ.27-ಬೆಂಗಳೂರಿನ ಅರಮನೆ ಮೈದಾನದಲ್ಲಿ ಕರ್ನಾಟಕ ವಿಡಿಯೋ ಮತ್ತು ಫೋಟೋ ಅಸೋಷಿಯೇಶನ್ ಹಾಗೂ ಕರ್ನಾಟಕ ರಾಜ್ಯ ಪತ್ರಿಕಾ ಛಾಯಾಚಿತ್ರಕಾರರ ಸಂಘದ ಸಹಯೋಗದಲ್ಲಿ ಹಮ್ಮಿಕೊಂಡ ಫೋಟೋ ಟುಡೇ ವಸ್ತುಪ್ರದರ್ಶನ ಹಾಗೂ ಕರ್ನಾಟಕ ಛಾಯಾರತ್ನ ಪ್ರಶಸ್ತಿ ಪ್ರದಾನ ಸಮಾರಂಭ ಜರುಗಿತು.


ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರು ಸಮಾರಂಭ ಉದ್ಘಾಟಿಸಿ ಕಲಬುರಗಿ ಹಿರಿಯ ಛಾಯಾಗ್ರಾಹಕ ನಾರಾಯಣ ಎಂ.ಜೋಶಿ ಸೇರಿದಂತೆ ಪ್ರಶಸ್ತಿ ಪುರಸ್ಕೃತರಿಗೆ ಛಾಯಾರತ್ನ ಪ್ರಶಸ್ತಿ ನೀಡಿ ಅವರಿಗೆ ಸನ್ಮಾನಿಸಿದರು.

ಜಾಹೀರಾತಿಗಾಗಿ ಇಂದೇ ಸಂಪರ್ಕಿಸಿರಿ:9449732000

# ಜು. 1ರಂದು ಸತ್ಯಕಾಮ ಸಮ್ಮಾನ್ ಪ್ರಶಸ್ತಿ ಪ್ರದಾನ ಸಮಾರಂಭ






ಕಲಬುರಗಿ: ಜೂ.28: ಹಿರಿಯ ಪತ್ರಕರ್ತ ಹಾಗೂ ಸತ್ಯಕಾಮ ಕನ್ನಡ ದಿನಪತ್ರಿಕೆಯ ಸಂಸ್ಥಾಪಕ ಸಂಪಾದಕ ದಿ. ಪಿ.ಎಂ. ಮಣ್ಣೂರ್ ಅವರ 77ನೇ ಹುಟ್ಟುಹಬ್ಬದ ಸಂಭ್ರಮವಾಗಿ ಜುಲೈ 1ರಂದು ಬೆಳಿಗ್ಗೆ 11–30ಕ್ಕೆ ನಗರದ ಕಲ್ಯಾಣ ಕರ್ನಾಟಕ ಚೇಂಬರ್ ಆಫ್ ಕಾಮರ್ಸ್ ಆಡಿಟೋರಿಯಂನಲ್ಲಿ ಸತ್ಯಕಾಮ ಸಮ್ಮಾನ್ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಹಿರಿಯ ವಿಜ್ಞಾನಿ ಡಾ. ಡಿ.ಎಂ. ಮಣ್ಣೂರ ಅವರು ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜೈಭೀಮ್ ಗದೆ ಪತ್ರಿಕೆ ಸಂಪಾದಕ ಮತ್ತು ಎಸ್‌ಎಸ್‌ಟಿವಿ ವ್ಯವಸ್ಥಾಪಕ ಶಂಕರ್ ಕೋಡ್ಲಾ, ಬಹುಮನಿ ಉರ್ದು ಪತ್ರಿಕೆ ಸಂಸ್ಥಾಪಕ ಸಂಪಾದಕ ಅಜೀಜುಲ್ಲ ಸರ್ಮಸ್ತ, ದಿ ನ್ಯೂ ಇಂಡಿಯಾ ಎಕ್ಸ್‌ಪ್ರೆಸ್ ವಿಶೇಷ ವರದಿಗಾರ ರಾಮಕೃಷ್ಣ ಬಡಶೇಷಿ, ಉದಯವಾಣಿ ಸ್ಥಾನಿಕ ಸಂಪಾದಕ ಹಣಮಂತರಾವ್ ಭೈರಾಮಡಗಿ, ಸಂಜೆವಾಣಿ ಪ್ರಧಾನ ವರದಿಗಾರ ಚಂದ್ರಕಾಂತ ಹುಣಸಗಿ, ವಿಜಯಪುರದಲ್ಲಿ ಸತ್ಯಕಾಮ ಪತ್ರಿಕೆಯ ಮೂರು ದಶಕಗಳ ಕಾಲ ಸೇವೆ ಸಲ್ಲಿಸಿದ ಸ್ಥಾನಿಕ ಸಂಪಾದಕ ಪ್ರದೀಪ್ ಕುಲಕರ್ಣಿ ಅವರಿಗೆ ಸತ್ಯಕಾಮ ಸಮ್ಮಾನ್ ಪ್ರಶಸ್ತಿ ನೀಡಿ ಪುರಸ್ಕರಿಸಲಾಗುವುದು ಎಂದರು. ಉದ್ಘಾಟನೆಯನ್ನು ವಿಶ್ವ ಹಿಂದೂ ಪರಿಷತ್‌ನ ಉಪಾಧ್ಯಕ್ಷ ಡಾ. ಲಿಂಗರಾಜಪ್ಪ ಅಪ್ಪ ಅವರು ನೆರವೇರಿಸುವರು. ಸಾನಿಧ್ಯವನ್ನು ಮಕ್ತಂಪುರ ಗದ್ದುಗೆ ಮಠದ ಚರಲಿಂಗ ಮಹಾಸ್ವಾಮೀಜಿ ವಹಿಸುವರು. ಮುಖ್ಯ ಅತಿಥಿಗಳಾಗಿ ಮಹಾಪೌರ ಯಲ್ಲಪ್ಪ ಎಸ್. ನಾಯ್ಕೋಡಿ, ಅತಿಥಿಗಳಾಗಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಉಪ ನಿರ್ದೇಶಕ ಜಡಿಯಪ್ಪ ಗೆದ್ಲಗಟ್ಟಿ, ಬುದ್ಧ ಲೋಕ ಪತ್ರಿಕೆ ಹಿರಿಯ ಸಂಪಾದಕ ದೇವೇಂದ್ರಪ್ಪ ಕಪನೂರ್, ಆರ್ಥೋಪೆಡಿಕ್ ಸರ್ಜನ್ ಮತ್ತು ವೈದ್ಯ ಸಾಹಿತಿ ಡಾ. ಎಸ್.ಎಸ್. ಗುಬ್ಬಿ, ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಬಾಬುರಾವ್ ಯಡ್ರಾಮಿ, ಮಾಧ್ಯಮ ಮಾನ್ಯತೆ ಸಮಿತಿಯ ಸದಸ್ಯ ಗುರುರಾಜ್ ಕುಲಕರ್ಣಿ, ಕಲ್ಯಾಣ ಕರ್ನಾಟಕ ಕೈಗಾರಿಕೆ ಮತ್ತು ವಾಣಿಜ್ಯ ಮಂಡಳಿಯ ಅಧ್ಯಕ್ಷ ಶರಣಬಸಪ್ಪ ಪಪ್ಪಾ ಅವರು ಆಗಮಿಸುವರು ಎಂದು ಅವರು ವಿವರಿಸಿದರು. ಸುಕಿಮೆಲೋಡಿಯಸ್‌ನ ಕಿರಣ್ ಪಾಟೀಲ್ ತಂಡದವರಿಂದ ರಸಮಂಜರಿ ಕಾರ್ಯಕ್ರಮ ಜರುಗಲಿದೆ ತಿಳಿಸಿದ ಅವರು, ಪ್ರತಿ ವರ್ಷ ಸತ್ಯಕಾಮ ಸಮ್ಮಾನ್ ಪುರಸ್ಕಾರ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿತ್ತು. ಕಳೆದ ವರ್ಷ ಪಿ.ಎಂ. ಮಣ್ಣೂರ್ ಅವರು ವಿಧಿವಶರಾಗಿದ್ದರಿಂದ ಕಳೆದ ವರ್ಷ ಕಾರ್ಯಕ್ರಮ ಏರ್ಪಡಿಸಲಿಲ್ಲ. ಈ ಬಾರಿ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಸತ್ಯಕಾಮ ಕನ್ನಡ ದಿನಪತ್ರಿಕೆಯ ಸಂಪಾದಕ ಆನಂದ್ ಪಿ. ಮಣ್ಣೂರ ಅವರು ಉಪಸ್ಥಿತರಿದ್ದರು.

# ನೀರು ಪಾಲಾದ ಯುವಕರಿಬ್ಬರ ಕುಟುಂಬಕ್ಕೆ ಸರಕಾರದಿಂದ ಸಿಗುವ ಪರಿಹಾರ ಕಲ್ಪಿಸಲು : ಶಾಸಕ ತುನ್ನೂರು ಭರವಸೆ

ಯಾದಗಿರಿ:ಭೀಮಾನದಿ ಪಾಲಾದ ಯುವಕರಿಬ್ಬರ ಕುಟುಂಬಕ್ಕೆ ಸರಕಾರದಿಂದ ಸಿಗುವ ಅಗತ್ಯ ಪರಿಹಾರ ಕಲ್ಪಿಸಲಾಗುತ್ತದೆ ಎಂದು ಶಾಸಕ ಚನ್ನಾರೆಡ್ಡಿ ಪಾಟೀಲ ತುನ್ನೂರು ಅವರು ಹೇಳಿದ್ದಾರೆ.

ಅವರು ಜಿಲ್ಲೆಯ ವಡಗೇರಾ ತಾಲೂಕಿನ ಮಾಚನೂರು ಗ್ರಾಮದ ಭೀಮಾನದಿಯಲ್ಲಿ ಶುಕ್ರವಾರ ಪರಶುರಾಮ ನಾಟೇಕರ್ ಹಾಗೂ ಸಿದ್ದಪ್ಪ ನೀರು ಪಾಲಾದ ಘಟನೆ ಹಿನ್ನಲೆ ಇಂದು ಶಾಸಕ ಚನ್ನಾರೆಡ್ಡಿ ಪಾಟೀಲ ತುನ್ನೂರು ಅವರು ಮಾಚನೂರು ಗ್ರಾಮದ ಭೀಮಾನದಿ ತೀರಕ್ಕೆ ಆಗಮಿಸಿ ಘಟನೆ ನಡೆದ ಸ್ಥಳ ಪರಿಶೀಲನೆ ಮಾಡಿದರು.ಅಗ್ನಿಶಾಮಕದಳ ಹಾಗೂ ರಾಜ್ಯ ವಿಪತ್ತು ನಿರ್ವಹಣಾ ( ಎಸ್ ಡಿಆರ್ ಎಫ್ ) ತಂಡದಿಂದ ಶವ ಶೋಧ ಕಾರ್ಯಾಚರಣೆ ಬಗ್ಗೆ ಅಗತ್ಯ ಮಾಹಿತಿಯನ್ನು ಪಡೆದರು.ಈ ವೇಳೆ ತಹಶಿಲ್ದಾರ ಮಂಗಳಾ ಹಾಗೂ ಸಿಪಿಐ ಸುನೀಲ್ ಮೂಲಿಮನಿ ಅವರು ಘಟನೆ ನಡೆದ ಬಗ್ಗೆ ಮಾಹಿತಿ ನೀಡಿದರು.

ಭೀಮಾನದಿಗಿಳಿದ ಶಾಸಕ ತುನ್ನೂರು

ಸುಮಾರು 29 ಗಂಟೆ ಕಳೆದರು ಯುವಕರಿಬ್ಬರ ಶವ ಶೋಧ ಕಾರ್ಯಾಚರಣೆ ನಡೆಸಿದರು ಮೃತ ದೇಹಗಳು ಪತ್ತೆಯಾಗಿಲ್ಲ.ಈ ಸಂದರ್ಭದಲ್ಲಿ ಶಾಸಕ ಚನ್ನಾರೆಡ್ಡಿ ಪಾಟೀಲ ತುನ್ನೂರು ಅಗ್ನಿಶಾಮಕ ದಳ ಹಾಗೂ ಎಸ್ ಡಿಆರ್ ಎಫ್ ತಂಡದೊಂದಿಗೆ ಬೋಟ್ ನಲ್ಲಿ ಭೀಮಾನದಿಗಿಳಿದರು.ಅಗ್ನಿಶಾಮಕ ದಳ ಹಾಗೂ ಎಸ್ ಡಿಆರ್ ಎಫ್ ತಂಡದೊಂದಿಗೆ ಶಾಸಕ ತುನ್ನೂರು ಅವರು ಬೋಟ್ ನಲ್ಲಿ ತೆರಳಿ ತಂಡಗಳೊಂದಿಗೆ ತಾವು ಕೂಡ ಶವ ಶೋಧ ಕಾರ್ಯ ಮಾಡಿದರು.ಸುಮಾರು ಕಿಮೀ ಗಟ್ಟಲೆ ತೆರಳಿ ಶವ ಶೋಧ ನಡೆಸಿದರು. ಸುಮಾರು ಒಂದು ಗಂಟೆಗಳ ಕಾಲ ಬೋಟ್ ನಲ್ಲಿ ಶಾಸಕ ತುನ್ನೂರು ಅವರು ಅಧಿಕಾರಿಗಳೊಂದಿಗೆ ತಾವು ಖುದ್ದಾಗಿ ಶವ ಶೋಧ ನಡೆಸಿದರು.ಶವ ಶೋಧ ಕಾರ್ಯಾಚರಣೆ ವೇಳೆ ಶಾಸಕರಿಗೆ ನದಿಯೊಳಗೆ ಮೊಸಳೆಗಳು ಕಾಣಿಸಿಕೊಂಡವು.ಸುಮಾರು 20 ಕ್ಕೂ ಹೆಚ್ಚು ಮೊಸಳೆಗಳು ನದಿ ಹಾಗೂ ನದಿ ತೀರದಲ್ಲಿ ಇರುವದು ಕಾಣಿಸಿಕೊಂಡಿದವು.ಮೊಮ್ಮಗನನೆನೆದು ಅಜ್ಜ ಕಣ್ಣೀರು ಶಾಸಕ ತುನ್ನೂರು ಬಾವುಕ ಮೊಮ್ಮಗ ಪರಶುರಾಮ ಸಾವಿನ ಅಘಾತದಿಂದ ಅಜ್ಜ ಸಿದ್ದಪ್ಪ ಮೊಮ್ಮಗನನೆನಪಿನಲ್ಲಿಯೇ ಕೊರಗುತ್ತಾ ನಿದ್ದೆ ಹಾಗೂ ಊಟ ಮಾಡದೆ ರೋಧಿಸುತ್ತಿದ್ದನು.ರೋಧಿಸುತ್ತಿರುವ ಅಜ್ಜನಿಗೆ ಶಾಸಕ ತುನ್ನೂರು ಸಾಂತ್ವನ ಹೇಳಿ ಧೈರ್ಯ ತುಂಬಿದರು.ಶಾಸಕ ತುನ್ನೂರು ಅವರ ಕಾಲಿಗೆ ಅಜ್ಜ ಸಿದ್ದಪ್ಪ ನಮಸ್ಕರಿಸಿ ಗಳ ಗಳನೇ ಕಣ್ಣೀರು ಹಾಕಿ ಕೈ ಮುಗಿದನು. ಯಪ್ಪಾ ನನ್ನ ಮೊಮ್ಮಗ ಇಲ್ಲ .ಎರಡು ದಿನ ಆಯ್ತು ಊಟ ಮಾಡಿಲ್ಲ.ನೀನು ಧೈರ್ಯದಿಂದ ಇರು ಅಳಬೇಡ.ಸರಕಾರ ನಿಮ್ಮ ಜೊತೆ ಇರುತ್ತದೆ . ಶವ ಸಿಗುವರಗೆ ಇಲ್ಲಿಯೇ ಅಧಿಕಾರಿಗಳು ಶವ ಶೋಧ ಮಾಡಿ ಪತ್ತೆ ಹಚ್ಚುತ್ತಾರೆ ಎಂದು ಧೈರ್ಯ ತುಂಬಿದರು.ಈ ವೇಳೆ ಶಾಸಕ ತುನ್ನೂರು ಬಾವುಕರಾದರು.ಸಿಎಂ ಸಲಹೆಗಾರರಿಗೆ ಫೋನಾಯಿಸಿ ಶಾಸಕ ಮಾತು,ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಅವರಿಗೆ ಫೋನ್ ಮಾಡಿ ಶಾಸಕ ತುನ್ನೂರು ಅವರು ಮಾತನಾಡಿ,ಮಾಚನೂರು ಗ್ರಾಮದಲ್ಲಿ ಯುವಕರಿಬ್ಬರ ನೀರು ಪಾಲಾಗಿ ಮೃತಪಟ್ಟಿದ್ದು.ಸಿಎಂ ಅವರ ಗಮನಕ್ಕೆ ತಂದು ಸರಕಾರದಿಂದ ಪರಿಹಾರ ಕಲ್ಪಿಸಬೇಕೆಂದರು.ಈ ವೇಳೆ ನಾನು ಖುದ್ದು ಸಿಎಂ ಸಿದ್ದರಾಮಯ್ಯ ಅವರಿಗೆ ಭೇಟಿಯಾಗಿ ಗಮನಕ್ಕೆ ತರುತ್ತೇನೆಂದರು.

ಈ ವೇಳೆ ಅಪರ ಜಿಲ್ಲಾಧಿಕಾರಿ ರಮೇಶ್ ಕೋಲಾರ,ತಹಶಿಲ್ದಾರ ಮಂಗಳಾ ಎಮ್. ಡಿವೈಎಸ್ಪಿ ಅರುಣಕುಮಾರ್ ಪಿ.ಕೊಳ್ಳುರು, ಸಹಾಯಕ ಆಯುಕ್ತ ಹಂಪಣ್ಣ ಸಜ್ಜನ್,ತಾಪಂ ಇಓ ಮಲ್ಲಿಕಾರ್ಜುನ ಸಂಗ್ವಾರ ಸಿಪಿಐ ಸುನೀಲ್ ಮೂಲಿಮನಿ,ಪಿಎಸ್ ಐ ಮಹೆಬೂಬ್ ಅಲಿ,ಎಸ್ ಡಿಆರ್ ಎಫ್ ಆರ್ ಪಿಐ ಅಮರೀಶ್ ಚವ್ಹಾಣ,ಅಗ್ನಿಶಾಮಕ ದಳ ಅಧಿಕಾರಿ ಮನೋಹರ್ ರಾಠೋಡ,ಮುಖಂಡರಾದ ವೀರುಪಾಕ್ಷಪ್ಪಗೌಡ ಮಾಚನೂರು, ಮರೆಪ್ಪ ಬಿಳ್ಹಾರ,ವಿಶ್ವನಾಥರೆಡ್ಡಿ ಮಾಚನೂರು,ಮಲ್ಲಣ್ಣಗೌಡ ಗೌಡ–ರೆಡ್ಡಿ, ಸಿದ್ದಣ್ಣಗೌಡ ಕಾಡಂನೋರ್ ,ಬಾಷುಮೀಯಾ, ಬಸವರಾಜ ಪಾಟೀಲ, ಸೇರಿದಂತೆ ಅನೇಕರು ಇದ್ದರು.



ಭೀಮಾನದಿಯಲ್ಲಿ ಇಬ್ಬರು ಯುವಕರು ನೀರು ಪಾಲಾಗಿದ್ದಾರೆ. ಯಾವುದೇ ಕುಟುಂಬದಲ್ಲಿ ಇಂತಹ ಘಟನೆ ಆಗಬಾರದಿತ್ತು.ಮೃತ ಕುಟುಂಬ ಸದಸ್ಯರಿಗೆ ಭಗವಂತ ಧೈರ್ಯ ಕೊಡಲಿ,ಮೃತ ಯುವಕರ ಆತ್ಮಕ್ಕೆ ಭಗವಂತ ಶಾಂತಿ ಸಿಗಲಿ ಎಂದರು.ಶವ ಪತ್ತೆಯಾಗಿಲ್ಲ.ಅಗ್ನಿಶಾಮಕ ದಳ ಹಾಗೂ ಎಸ್ ಡಿ ಆರ್ ಎಫ್ ತಂಡ ನಿರಂತರ ಶವ ಶೋಧ ಕಾರ್ಯಾಚರಣೆ ಮಾಡುತ್ತಿದ್ದಾರೆ. ಮೃತ ಪರಶುರಾಮ ಹಾಗೂ ಸಿದ್ದಪ್ಪ ಕುಟುಂಬ ಸದಸ್ಯರಿಗೆ ಸರಕಾರದಿಂದ ಸೂಕ್ತ ಪರಿಹಾರ ಕಲ್ಪಿಸಲು ಪ್ರಯತ್ನ ಮಾಡುತ್ತೆನೆ.ಶವ ಹುಡುಕುತ್ತಿದ್ದು ಶವ ಪತ್ತೆಯಾದರೆ ಪರಿಹಾರ ಕೊಡಲು ಬೇಗ ಅನುಕೂಲವಾಗಲಿದೆ ಎಂದರು.

# ರೈತರಿಗೆ ವರವಾದ ನಾಲಾ ಸೇತುವೆ: ಮಳೆ ನೀರಿನಿಂದ ಬೆಳೆಗಳಿಗೆ ರಕ್ಷಣೆ

ಮಲ್ಲಮ್ಮ ನುಡಿ ವಾರ್ತೆ

ಬೀದರ. ಜೂ. 28 : ತಾಲ್ಲೂಕಿನ ಹೊಕ್ರಾಣ (ಬಿ) ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 11 ನಾಲಾ ಸೇತುವೆಗಳನ್ನು ನಿರ್ಮಿಸಲಾಗಿದ್ದು, ಇವುಗಳು ರೈತರಿಗೆ ವರವಾಗಿ ಪರಿಣಮಿಸಿವೆ.

ಪಂಚಾಯಿತಿ ವ್ಯಾಪ್ತಿಯ ಚಿಂತಲಗೀರಾ ಗ್ರಾಮದಲ್ಲಿ ಅತಿ ಹೆಚ್ಚು 8 ನಾಲಾ ಸೇತುವೆಗಳನ್ನು ನಿರ್ಮಿಸಿದರೆ, ಹೊಕ್ರಾಣದಲ್ಲಿ 2 ಹಾಗೂ ಧರ್ಮಾಪೂರದಲ್ಲಿ 1 ಸೇತುವೆ ನಿರ್ಮಿಸಲಾಗಿದೆ.

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಈ ಕಾಮಗಾರಿ ಪೂರ್ಣಗೊಳಿಸಲಾಗಿದೆ.ಪ್ರತಿಯೊಂದು ನಾಲಾ ಸೇತುವೆ ನಿರ್ಮಾಣಕ್ಕೆ ?1.50ರಿಂದ ?2 ಲಕ್ಷ ವೆಚ್ಚ ಮಾಡಲಾಗಿದೆ.

ಏನು ಪ್ರಯೋಜನ?:

ಮಳೆ ಬಂದಾಗ ಎಲ್ಲೆಲ್ಲಿ ಹೆಚ್ಚಿನ ಪ್ರಮಾಣದಲ್ಲಿ ನೀರು ಹರಿದು ಹೋಗುತ್ತದೆಯೋ ಅಂತಹ ಸ್ಥಳಗಳನ್ನು ಗುರುತಿಸಿ, ಅಲ್ಲಿ ಈ ನಾಲಾ ಸೇತುವೆಗಳನ್ನು ನಿರ್ಮಿಸಲಾಗಿದೆ. ಎಷ್ಟೇ ಮಳೆ ಸುರಿದರೂ ನೀರು ಸುಗಮವಾಗಿ ಹರಿದು ಹೋಗುತ್ತದೆ. ಹೊಲಗಳಿಗೆ ಹೋಗುವ ಮಾರ್ಗದ ಬದಿಯಲ್ಲಿ ಕಾಲುವೆ ಮಾದರಿಯಲ್ಲಿ ದೊಡ್ಡದಾಗಿ ಟ್ರೆಂಚ್ ನಿರ್ಮಿಸಲಾಗಿದ್ದು, ನೀರು ಅದರ ಮೂಲಕವೇ ಹರಿದು ಹೋಗುವಂತೆ ಮಾಡಲಾಗಿದೆ. ಈ ಹಿಂದೆ ಮಳೆ ಬಿದ್ದಾಗ ನೀರು ಹೊಲಗಳಿಗೆ ನುಗ್ಗಿ ಬೆಳೆಗಳೆಲ್ಲ ಹಾಳಾಗುತ್ತಿತ್ತು. ಈಗ ಅದು ತಪ್ಪಿದೆ. ನಾಲಾ ಅಡಿಯಿಂದ ನೀರು ಹರಿದು, ನೇರವಾಗಿ ಟ್ರೆಂಚ್ ಸೇರಿಕೊಳ್ಳುತ್ತದೆ. ಅಲ್ಲಿಂದ ಹಳ್ಳ, ನದಿಗೆ ಹೋಗಿ ಸೇರಿಕೊಳ್ಳುತ್ತದೆ. ಟ್ರೆಂಚ್ ಉದ್ದಕ್ಕೂ ರೈತರು ನಡೆದಾಡಲು, ಅವರ ವಾಹನಗಳು ಚಲಿಸಲು ಕಚ್ಚಾ ರಸ್ತೆ ಕೂಡ ನಿರ್ಮಿಸಲಾಗಿದೆ. ಇನ್ನು, ನಾಲಾ ಸೇತುವೆಗಳ ಮೇಲೆ ಎತ್ತಿನ ಗಾಡಿ, ಸರಕು ಸಾಗಣೆ–ಯ ಎಲ್ಲ ರೀತಿಯ ವಾಹನಗಳು ಸಂಚರಿಸಬಹುದಾಗಿದ್ದು, ಒಂದು ಸಾವಿರ ಎಕರೆಯಲ್ಲಿ ರೈತರು ಬೆಳೆದ ಎಲ್ಲ ರೀತಿಯ ಉತ್ಪನ್ನಗಳ ಸಾಗಾಣಿಕೆಗೆ ಇದರಿಂದ ಅನುಕೂಲವಾಗಿದೆ.

'ಈ ಹಿಂದೆ ಮಳೆ ಬಂದಾಗ ಸಾಕಷ್ಟು ಕೆಸರಾಗುತ್ತಿತ್ತು. ಮಳೆ ನೀರು ಬೇಕಾಬಿಟ್ಟಿ ಹರಿದು ಹೊಲಗಳಿಗೆ ನುಗ್ಗಿ ಹಾನಿ ಉಂಟಾಗುತ್ತಿತ್ತು. ನಡೆದಾಡಲು ಕಷ್ಟವಾಗುತ್ತಿತ್ತು. ನಾಲಾ ಸೇತುವೆಗಳ ನಿರ್ಮಾಣದಿಂದ ಅದು ದೂರಾಗಿದೆ' ಎಂದು ಸ್ಥಳೀಯ ರೈತರಾದ ಬಸವರಾಜ, ಮಹಾದೇವ ತಿಳಿಸಿದ್ದಾರೆ. ಗಿರೀಶ ಗುಂಡೇರಾವ್ ಅಧ್ಯಕ್ಷ ಹೊಕ್ರಾಣ (ಬಿ) ಗ್ರಾ.ಪಂ.ನಾಲಾ ಸೇತುವೆಗಳು ಅದರ ನೀರು ಹರಿಯಲು ಟ್ರೆಂಚ್ ನಿರ್ಮಿಸಲಾಗಿದೆ. ರೈತರಿಗೆ ನಡೆದಾಡಲು ಕಚ್ಚಾ ರಸ್ತೆ ಮಾಡಿರುವುದರಿಂದ ಬಹಳ ಅನುಕೂಲವಾಗಿದೆ. 1 ಸಾವಿರ ಎಕರೆ ಕಬ್ಬು ಸಾಗಿಸಲು ನೆರವಾಗಿದೆ. ಮೀನಾಕ್ಷಿ ಪಾಟೀಲ ಪಿಡಿಒ ಹೊಕ್ರಾಣ (ಬಿ) ಗ್ರಾ.ಪಂ ನಾಲಾ ಸೇತುವೆ ನಿರ್ಮಾಣದಿಂದ ಪಂಚಾಯಿತಿ ವ್ಯಾಪ್ತಿಯಲ್ಲಿರುವ ರೈತರಿಗೆ ಬಹಳ ಸಹಾಯವಾಗಿದೆ. ನಿಜಕ್ಕೂ ಇದು ಬಹಳ ಉತ್ತಮವಾದ ಯೋಜನೆ. ರೈತರು ಖುಷಿಯಲ್ಲಿದ್ದಾರೆ. ಮಾಣಿಕರಾವ್ ಪಾಟೀಲ ಇಒ ಬೀದರ್ ತಾಲ್ಲೂಕು ಪಂಚಾಯಿತಿ ಹೊಕ್ರಾಣ (ಬಿ) ಗ್ರಾಮ ಪಂಚಾಯಿತಿಯಲ್ಲಿ ನಾಲಾ ಸೇತುವೆಯ ಉತ್ತಮ ಕೆಲಸವಾಗಿದೆ. ನಿಜಕ್ಕೂ ಇದು ದೊಡ್ಡ ಸಾಧನೆ. ಈ ಸಾಲಿನಲ್ಲಿ ತಾಲ್ಲೂಕು ವ್ಯಾಪ್ತಿಯ ಎಲ್ಲ ಪಂಚಾಯಿತಿಗಳಲ್ಲಿ ಇದನ್ನು ಜಾರಿಗೆ ತರಲಾಗುವುದು.

ಹೊಕ್ರಾಣ (ಬಿ) ಗ್ರಾಮ ಪಂಚಾಯಿತಿ ಕಳೆದ ಆರ್ಥಿಕ ವರ್ಷದಲ್ಲಿ ತೆ–ರಿಗೆ ಸಂಗ್ರಹದಲ್ಲಿ ಉತ್ತಮ ಸಾಧನೆ ತೋರಿ ಮೆಚ್ಚುಗೆ ಗಳಿಸಿತ್ತು. ಈ ಸಾಲಿನಲ್ಲಿ ಮೂರು ತಿಂಗಳಲ್ಲಿ ಶೇ 20ರ ಗುರಿ ಮೀರಿದೆ. ಆರ್ಥಿಕ ವರ್ಷ ಮುಗಿಯುವುದರೊಳಗೆ ನಿಶ್ಚಿತ ಗುರಿ ಸಾಧಿಸಲಾಗುವುದು ಎಂದು ಪಿಡಿಒ ಮೀನಾಕ್ಷಿ ಪಾಟೀಲ ವಿಶ್ವಾಸ ವ್ಯಕ್ತಪಡಿಸಿದರು.

ಈ ಪಂಚಾಯಿತಿ ಈ ಹಿಂದೆ ಬರೂರ ವ್ಯಾಪ್ತಿಯಲ್ಲಿತ್ತು. ಹತ್ತು ವರ್ಷಗಳ ಹಿಂದೆಯಷ್ಟೇ ಅಸ್ತಿತ್ವಕ್ಕೆ ಬಂದಿದೆ. ನರೇಗಾದಡಿ ಸಾಕಷ್ಟು ಕೆಲಸಗಳಾಗಿವೆ. ಪಂಚಾಯಿತಿ ಹೊಸ ಕಟ್ಟಡ ನಿರ್ಮಾಣ ಪ್ರಗತಿಯಲ್ಲಿದೆ. ಗೋದಾಮು ಎಸ್‌ಎಚ್‌ಜಿ ಕಟ್ಟಡ ಎರಡು ಅಂಗನವಾಡಿ ಕಟ್ಟಡಗಳು ಕುರಿ ಮತ್ತು ಮೇಕೆ ಶೆಡ್ ನಿರ್ಮಾಣ ಪೂರ್ಣಗೊಂಡಿದ್ದು ಎಲ್ಲರ ಸಹಕಾರದೊಂದಿಗೆ ಮಾದರಿ ಪಂಚಾಯಿತಿ ನಿರ್ಮಿಸುವ ಗುರಿ ಇದೆ ಎಂದು ವಿವರಿಸಿದರು.



# ಧ್ಯಾನಸ್ಥ ಸ್ಥಿತಿಯಲ್ಲಿದ್ದರೆ ಬರವಣಿಗೆ ಸಾಧ್ಯ: ಜೋಗಿ




ಮಲ್ಲಮ್ಮ ನುಡಿ ವಾರ್ತೆ

ಬೆಂಗಳೂರು:ಜೂ.28:ಪತ್ರಕರ್ತ ವೃತ್ತಿಯನ್ನಾಗಿಸಿಕೊಂಡವರಲ್ಲಿ ಬಹಳಷ್ಟು ಜನರು ಪ್ರವೃತ್ತಿಯಾಗಿ ಸಾಹಿತ್ಯ ರಚನೆಯಲ್ಲಿಯೂ ತೊಡಗಿಸಿಕೊಂಡಿರುವುದು ಮಹತ್ವದ ಬೆಳವಣಿಗೆ ಎಂದು ಸಾಹಿತಿ ಜೋಗಿ ಅಭಿಪ್ರಾಯಪಟ್ಟರು.

ನಯನ ಸಭಾಂಗಣದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಹಿರಿಯ ಪತ್ರಕರ್ತ ಪ್ರಕಾಶ್ ಜಿ. ಅವರು ರಚಿಸಿದ ನನ್ಸಿರಿ ಕಾದಂಬರಿ ಬಿಡುಗಡೆಗೊಳಿಸಿ ಅವರು ಮಾತನಾಡಿದ ಅವರು, ಸಾಹಿತ್ಯದ ಬರವಣಿಗೆಯಲ್ಲಿ ತೊಡಗಿಸಿಕೊಂಡವರಲ್ಲಿ ಶಿಕ್ಷಕರು ಮತ್ತು ಪತ್ರಕರ್ತರ ಸಂಖ್ಯೆ ಹೆಚ್ಚಿದೆ ಎಂದರು.

ಬೂಕರ್ ಪ್ರಶಸ್ತಿಗೆ ಪಾತ್ರರಾದ ಬಾನುಮುಷ್ತಾಕ್, ಅವರ ಕೃತಿಯನ್ನು ಇಂಗ್ಲೀಷ್‌ಗೆ ಅನುವಾದಿಸಿದ ದೀಪಾಭಾಸ್ತಿ ಅವರು ಇಬ್ಬರೂ ಪತ್ರಕರ್ತರು ಎನ್ನುವುದನ್ನು ಸಾಹಿತ್ಯಲೋಕ ಗಮನಿಸುತ್ತಿದೆ ಎಂದರು.

ಸಾಹಿತ್ಯಕ್ಕೆ ಭಿನ್ನ ಬರಹಗಳು ಹೆಚ್ಚೆಚ್ಚು ಬರಬೇಕೆಂದರೆ ಉತ್ತಮ ಭಾಷಾ ಸಂವಹನ ಕೌಶಲ್ಯ ಹೊಂದಿರುವ ವರದಿಗಾರರು ಬರವಣಿಗೆಯಲ್ಲಿ ತೊಡಗಿಸಿಕೊಳ್ಳಬೇಕು. ಧ್ಯಾನಸ್ಥ ಸ್ಥಿತಿಯಲ್ಲಿದ್ದರೆ ಮಾತ್ರವೇ ಬರವಣಿಗೆ ಮಾಡಲು ಸಾಧ್ಯ. ನಿತ್ಯವೂ ಓದು ಮತ್ತು ಬರೆಯುವ ಹವ್ಯಾಸವನ್ನು ತಪ್ಪದೇ ರೂಡಿಸಿಕೊಳ್ಳಬೇಕು ಎಂದು ಹೇಳಿದರು.ವಿಜಯ ಕರ್ನಾಟಕ ಸಂಪಾದಕರಾದ ಸುದರ್ಶನ ಚನ್ನಂಗಿಹಳ್ಳಿ ಮಾತನಾಡಿ, ತಾವು ನೋಡಿದ ಸಂಗತಿಗಳನ್ನು,ಸಮಾಜದಲ್ಲಿ ಆಗುತ್ತಿರುವ ಬದಲಾವಣೆ,ತಲ್ಲಣಗಳನ್ನು ನನ್ಸಿರಿ ಕಾದಂಬರಿ ರೂಪಕ್ಕೆ ತರುವಲ್ಲಿ ಪ್ರಕಾಶ್ ಉತ್ತಮ ಪ್ರಯತ್ನ ಮಾಡಿದ್ದಾರೆ ಎಂದರು.ಕರ್ನಾಟಕ ಕಾರ್ಯನಿರ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಮಾತನಾಡಿ, ಕ್ರೀಯಾಶೀಲ ವರದಿಗಾರರಾಗಿರುವ ಪ್ರಕಾಶ್, ಬರವಣಿಗೆಯ ಮೂಲಕ ಸಾಹಿತ್ಯಲೋಕಕ್ಕೂ ತೆರೆದುಕೊಂಡಿ–ದ್ದಾರೆ. ಅವರಿಂದ ಇನ್ನಷ್ಟು ಉತ್ತಮ ಕೃತಿಗಳು ಬರಲಿ ಎಂದು ಆಶಿಸಿದರು. ಜನಮಿತ್ರ ಪತ್ರಿಕೆ ಸಂಪಾದಕ ಮತ್ತು ಕೆಯುಡಬ್ಲೂಣಟಿಜಜಿಟಿಜಜಕೆ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಎಚ್.ಬಿ. ಮದನಗೌಡ, ರವಿ ನಾಕಲಗೋಡು ಅವರು ಪ್ರಕಾಶ್ ಪ್ರಯತ್ನಕ್ಕೆ ಶುಭ ಕೋರಿದರು.ಪತ್ರಕರ್ತೆ ವಿದ್ಯಾರಶ್ಮಿ ಪೆಲತ್ತಡ್ಕ ಅವರು ನನ್ಸಿರಿ ಕೃತಿಯನ್ನು ಪರಿಚಯಿಸಿದರು. ಕೃತಿಕತೃ ಪ್ರಕಾಶ್ ಮಾತನಾಡಿ, ಇದು ತಮ್ಮ ಚೊಚ್ಚಲ ಪ್ರಯತ್ನವಾಗಿದ್ದು, ಈ ನಿಟ್ಟಿನಲ್ಲಿ ಸಹಕಾರ ನೀಡಿ, ಬೆನ್ನುತಟ್ಟಿದ ಎಲ್ಲರಿಗೂ ಧನ್ಯವಾದ ತಿಳಿಸಿದರು. ಹಿರಿಯ ಪತ್ರಕರ್ತರಾದ ತಿಮ್ಮಪ್ಪಭಟ್ ಸೇರಿದಂತೆ ಹಲವು ಹಿರಿಯ ಪತ್ರಕರ್ತರು ಶುಭ ಹಾರೈಸಿದರು.

# ಪಾಕಿಸ್ತಾನದಲ್ಲಿ ಆತ್ಮಾಹುತಿ ಬಾಂಬ್ ದಾಳಿ : 13 ಸೈನಿಕರು ಸಾವು

ಇಸ್ಲಾಮಾಬಾದ್:ಜೂ.28:ಪಾಕಿಸ್ತಾನದ ಖೈಬರ್ ಪಖ್ತುಂಖ್ವಾ ಪ್ರಾಂತ್ಯದ ವಜೀರಿಸ್ತಾನ್ ಜಿಲ್ಲೆಯಲ್ಲಿ ನಡೆದ ಆತ್ಮಾಹುತಿ ಬಾಂಬ್ ದಾಳಿಯಲ್ಲಿ 13 ಪಾಕ್ ಸೈನಿಕರು ಸಾವನ್ನಪ್ಪಿದ್ದಾರೆ. ಸ್ಥಳೀಯ ಅಧಿಕಾರಿಗಳು ಸೇರಿ 29 ಜನರು ಗಾಯಗೊಂಡಿದ್ದಾರೆ.

ಆತ್ಮಾಹುತಿ ಬಾಂಬ್ ಇದ್ದ ವಾಹನವು ಮಿಲಿಟರಿ ಬೆಂಗಾವಲು ಪಡೆಯ ವಾಹನಕ್ಕೆ ಡಿಕ್ಕಿ ಹೊಡೆದಿದೆ. ಪರಿಣಾಮ ಬಾಂಬ್ ಸ್ಫೋಟಗೊಂಡಿದೆ. ಇದ–ರಿಂದ 13 ಸೈನಿಕರು ಸಾವನ್ನಪ್ಪಿದ್ದಾರೆ. ಜೊತೆಗೆ ಎರಡು ಮನೆಯ ಛಾವಣಿ ಕುಸಿದು 6 ಮಕ್ಕಳು, 10 ಜನ ಸೇನಾ ಸಿಬ್ಬಂದಿ ಸೇರಿದಂತೆ ಒಟ್ಟು 29 ಜನರು ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಗಾಯಗೊಂಡವರ ಪೈಕಿ ನಾಲ್ವರು ಸೈನಿಕರ ಸ್ಥಿತಿ ಗಂಭೀರವಾಗಿದೆ. ಆರಂಭದಲ್ಲಿ ಈ ಆತ್ಮಾಹುತಿ ದಾಳಿಯ ಹೊಣೆಯನ್ನು ಯಾರು ಹೊತ್ತುಕೊಂಡಿರಲಿಲ್ಲ. ಆದರೆ ಈ ಸ್ಥಳದಲ್ಲಿ ಆಗಾಗ ಪಾಕಿಸ್ತಾನಿ ತಾಲಿಬಾನ್ ಉಗ್ರರು ದಾಳಿ ನಡೆಸುತ್ತಿರುತ್ತಾರೆ. ಹೀಗಾಗಿ ಅವರೇ ಈ ದಾಳಿಯನ್ನು ಕೂಡ ನಡೆಸಿರಬಹುದು ಎಂದು ಅಂದಾಜಿಸಲಾಗಿತ್ತು. ಸದ್ಯ ಪಾಕಿಸ್ತಾನಿ ತಾಲಿಬಾನ್‌ನ ಒಂದು ಬಣವಾದ ಹಫೀಜ್ ಗುಲ್ ಬಹದ್ದೂರ್ ತಂಡ ದಾಳಿ ನಡೆಸಿರಬಹುದು ಎಂದು ವರದಿಯಾಗಿದೆ. ಇದಕ್ಕೂ ಮುನ್ನ 2021ರಲ್ಲಿ ಕಾಬೂಲ್‌ನಲ್ಲಿ ತಾಲಿಬಾನ್ ಅಧಿಕಾರಕ್ಕೆ ಬಂದಾಗ ಅಫ್ಘಾನಿಸ್ತಾನದ ಗಡಿಯಲ್ಲಿನ ಪಾಕಿಸ್ತಾನದ ಪ್ರದೇಶಗಳಲ್ಲಿ ತೀವ್ರ ಹಿಂಸಾಚಾರ ನಡೆದಿತ್ತು.

# ನೈತಿಕ ಪೋಲೀಸಗಿರಿ:ಬಂಧನ

ಕಲಬುರಗಿ:ಜೂ.28: ಮುಸ್ಲಿಂ ಯುವತಿಗೆ ಲಿಫ್ಟ್ ಕೊಟ್ಟಿದ್ದ–ಕ್ಕೆ ಹಿಂದೂ ಯುವಕನ ಮೇಲೆ ಹಲ್ಲೆ ಮಾಡಿ ನೈತಿಕ ಪೊಲೀಸ್ ಗಿರಿ ಮೆರೆದಿರುವಂತಹ ಘಟನೆ ಕಲಬುರಗಿಯಲ್ಲಿ ನಡೆದಿದೆ. ಖಾಸಗಿ ಆಸ್ಪತ್ರೆಯಲ್ಲಿ ನರ್ಸ್ ಆಗಿರುವ ಬೈಲಪ್ಪ ಅದೇ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದ ಮುಸ್ಲಿಂ ಯುವತಿಗೆ ತಮ್ಮ ಬೈಕ್‌ನಲ್ಲಿ ಡ್ರಾಪ್ ನೀಡಿದ್ದಾರೆ. ಈ ವೇಳೆ ಬೈಕ್ ಅಡ್ಡಗಟ್ಟಿ ಕಿಡಗೇಡಿಗಳು ತಮ್ಮ ಸಮುದಾಯದ ಯವತಿಯನ್ನು ಬೈಕ್ ಮೇಲೆ ಡ್ರಾಪ್ ಮಾಡಿದ್ದಕ್ಕೆ ಹಲ್ಲೆ ಮಾಡಿದ್ದಾರೆ. ಪ್ರಕರಣಕ್ಕೆ ಸಂಬಂಧ ನಗರದ ಎಂ.ಬಿ.ನಗರ ಠಾಣೆ ಪೊಲೀಸರು ಮೊಹಮ್ಮದ್ ಸಲ್ಮಾನ್, ಮೊಹಮ್ಮದ್ ಆದಿಲ್, ಮೊಹಮ್ಮದ್ ರೆಹಾನ್, ಮೊಹಮ್ಮದ್ ಉಜ್ಜೈರ್, ಮೊಹಮ್ಮದ್ ಫೈಜ್, ಮೊಹಮ್ಮದ್ ಆಸಿಫ್ ಎಂಬುವರನ್ನು ಬಂಧಿಸಿದ್ದಾರೆ.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.
Editor: Ramesh Reddy, Office Ph. No: +91 9449732000.